UNIVERSAL LIBRARY
OU_202308
UNIVERSAL LIBRARY

**OSMANIA UNIVERSITY LIBRARY**

Call No. [illegible] Accession No. [illegible]

Author [illegible]

Title [illegible]

This book should be returned on or before the date last marked below

# ಬಹದ್ದೂರ್ ಗಂಡ

ಪರ್ವತವಾಣಿ

ಛಾಯಾ ಪ್ರಕಟನಾಲಯ
ಬೆಂಗಳೂರು
೧೯೪೭

ಮುದ್ರಣಕಾರರು

**ಬಿ. ಎಸ್. ವೆಂಕಟರಾಂ**

ದೇಶಬಂಧು ಪ್ರೆಸ್, ಕೋಟೆ, ಬೆಂಗಳೂರು ಸಿಟಿ.

ಪ್ರಥಮ ಮುದ್ರಣ : ೧೮-೯-೧೯೪೭

ಬೆಲೆ : ಒಂದೂಮುಕ್ಕಾಲು ರೂಪಾಯಿ

ಮಾರಾಟದ ಪೂರ್ಣ ಹಕ್ಕುದಾರರು

**ದಿ ಸ್ಟಾಂಡರ್ಡ್ ಬುಕ್ ಡಿಪೋ**

ಅವೆನ್ಯೂ ರೋಡು - - ಬೆಂಗಳೂರು ಸಿಟಿ.

# — ಮೊದಲ ಮಾತು —

'ಬಹದ್ದೂರ್ ಗಂಡ'ನ ಜನ್ಮದಾತರು ಲಕ್ಷ್ಮೀಶನ 'ಚಂಡಿಯ ಕಥೆ' ಮತ್ತು ಷೇಕ್ಸ್‌ಪಿಯರ್‌ನ 'ಟೇಮಿಂಗ್ ಆಫ್ ದಿ ಷ್ರೂ'. 'East is east west is west, East plus west make much the best' ಅಂತ ಒಂದು ಹೇಳಿಕೆ ಉಂಟು. ಈ ಮಾತು ನಿಜವೇ ಅಲ್ಲವೇ ಎಂಬುದನ್ನು ಪರೀಕ್ಷಿಸಲು ಈ ನಾಟಕವನ್ನು ನಿಮ್ಮ ಮುಂದೆ ತರುತ್ತಿದ್ದೇನೆ. ತಾವು ಪ್ರೇಕ್ಷಕರು. ಆದುದರಿಂದ ಅಂಕದ ತೆರೆ ಮೇಲೆ ಹೋಗುವುದು ತಡವಾಗದಂತೆ ನೋಡಿಕೊಳ್ಳುವುದು ನಾಟಕದ ಸಂಚಾಲಕನ ಕರ್ತವ್ಯ, ಚಾತುರ್ಯ. The Chaya Artistes, Bangalore'. 'The Y. M. L. & D.A., Bhadravati' 'ಛಾಯಾ ಪ್ರಕಟನಾಲಯ ಬೆಂಗಳೂರು'. 'The Sound & Shadow, Bangalore' ಇವರೆಲ್ಲರೂ ಈ ನಾಟಕವನ್ನು ರಂಗಸ್ಥಳದಲ್ಲಿ ಪ್ರಯೋಗಿಸಿ ಪುಸ್ತಕರೂಪವಾಗಿ ಪ್ರಕಟಿಸಲು ಸಹಾಯಕರಾಗಿದ್ದಾರೆ. ಇವರೆಲ್ಲರಿಗೂ ನನ್ನ ಕೃತಜ್ಞತಾ ಪೂರ್ವಕವಾದ ವಂದನೆಗಳು. ನಾಟಕ ರಚನೆಯಲ್ಲೂ ಸಂಭಾಷಣೆಯಲ್ಲೂ ನೆರವಾದ ಬೇಟೇ ಶಾಂತಾ, ಬೇಟೇ-ಕೀ-ಮಾ ಕಮಲಾ ಇವರನ್ನಂತೂ ಮರೆಯುವಂತೆಯೇ ಇಲ್ಲ.

**—ಪರ್ವತವಾಣಿ**

ಬೆಂಗಳೂರು ತಾ|| ೧೮-೯-೪೭.

— -O- —

COPYRIGHT

*Staging, filming, translating*

*and*

*all other rights reserved*

For Permission to stage
apply to
The author, through the Publisher
with a Royalty of Rs. 15/- only
for each performance

*Published by*

CHAYA PUBLISHERS

136, V ROAD, CHAMARAJAPET.

BANGALORE CITY.

## — ಪಾತ್ರಗಳು —

| | |
|---|---|
| **ಮಿಸ್ ಸರೋಜ** ಬಿ.ಎ, | ರೂಪದಲ್ಲಿ ಅರ್ಜುನನಿಗೆ ಶಾಪಕೊಟ್ಟ ಊರ್ವಶಿ, ಸಕಲ ವಿದ್ಯಾಪಾರಂಗತೆ ಆದರೆ-'Terror of the whole Town'ಉ |
| **ಮಿಸ್ ಶಾಂತಾ** III M.B.B.S. | ಬೈತಲೆ ಸೊಟ್ಟಗೆ ತೆಗ್ಕೊಂಡಿದ್ರೂ ಬುದ್ಧಿ ನೆಟ್ಗ ಟ್ಕೊಂಡಿರುವವಳು; ಚಂದ್ರಶೇಖರನಲ್ಲಿ ಅನುರಕ್ತೆ. |

(ಮೇಲಿನ ಇಬ್ಬರೂ) ಕುದುರೆಗಳಂತೆ ಬೆಳೆದು ನಿಂತಿರುವ ಅವಿವಾಹಿತ ಕನ್ಯೆಯರು, ಅಕ್ಕ ತಂಗಿಯರು.

| | | |
|---|---|---|
| **ಸೀತಮ್ಮ** | ಈ ಮಕ್ಕಳಿಗೆ ಮದುವೆ ಎಂದಾದೀತೊ ಎಂದು ಕಾತುರಳಾಗಿರುವ- .... | ತಾಯಿ |
| **ರಾವ್‌ಸಾಹೇಬ್ ರಾಮರಾಯ** | 'ಹಣೇಲಿ ಬರೆದಿದ್ರೆ ಆಗುತ್ತೆ' ಎಂದು ಹೆಂಡತಿಯೊಡನೆ ತನ್ನ ಸರಸದಲ್ಲೇ ಪ್ರವರ್ತನಾಗಿರುವ- .... .... | ತಂದೆ |
| **ಪುಟ್ಟಾ ಜೋಯಿಸ** | ಇವರ ಅಳಿಯಂದ್ರ ಬೇಟೆಗೆ ನೆರವಾದ- .... .... .... | ಮನೆ ಪುರೋಹಿತ |
| **ಕೃಷ್ಣಪ್ಪ** | ಕೇರ್‍ನಹಳ್ಳಿ ಸಾಹುಕಾರ, ನಾಲಕ್ಕುಸಾವಿರ ವರದಕ್ಷಿಣೆಗಾಗಿ ಮಗನ ಮದುವೆ ನಿಷ್ಕರ್ಷೆ ಮಾಡಿದ. .... .... | ಒಬ್ಬ ತಂದೆ |
| **ಚಂದ್ರಶೇಖರ** III M.B.B.S. | ಶಾಂತೆಯಲ್ಲಿ ಅನುರಕ್ತ ....ಮದುವೆಗೆಂದು ಬಂದ ತಂದೆಯ ಕರೆಗೆ ಹೇಗೆ ಉತ್ತರ ಕೊಟ್ಟಾನು? Central Hotelನಲ್ಲೇ ಗಟ್ಟಿಯಾಗಿ ಕುಳಿತ- .... | ಮಗ |

**ಭೀಮು** ಇವನ ಸ್ನೇಹಿತ-ಪುಟ್ಟು, ಜೋಯಿಸರ
ಪರಿಚಯ Pure & Simple ಮಾರಿ
ಎನಿಸಿಕೊಂಡ ಸರೋಜಳನ್ನೇ Marry
ಮಾಡ್ಕೊಂಡು ಒಬ್ಬ Normal ನಾರಿ
ಆಗೋಹಾಗೆ ಅವಳ್ನ ಮಾಡೋಕೆ
ಆಗುತ್ತೋ ಇಲ್ವೋ ನೋಡೋಣ
ಎನ್ನುವ experimentಗೆ ಹೊರಟು
ತಾನೇ ತಾನಾಗಿ ಮೆರೆದ- .... ಬಹದ್ದೂರ್ ಗಂಡ

**ಸೀನಿ, ಮಣಿ, ತಿಪ್ಪಾಭಟ್ಟ, ನಾರಾಯಣ ಪ್ರಸಾದ್, ಹೈದರ್, ಸಿದ್ದು, ಶಂಕರ ಇತ್ಯಾದಿ— ಸಹಾಯಕ ವರ್ಗ**

**ಸ್ಥಳ–ಬೆಂಗಳೂರು** **ಕಾಲ-ಭಾಷೆ–ಆಧುನಿಕ.**

**ಎಲ್ಲಾ ಪಾತ್ರಗಳೂ ಕಾಲ್ಪನಿಕ**

——o——

# ಬಹದ್ದೂರ್ ಗಂಡ

## ಅಂಕ ೧.

## ದೃಶ್ಯ ೧.

[ ರಾವ್ ಸಾಹೇಬ್ ರಾಮರಾಯರ ಮನೆಯ ಮುಂದಿನ ಕೋಣೆ. ರಾ. ರಾ. ಒಳಗಿನಿಂದ ಪ್ರವೇಶಿಸಿ ಅಂಗಡಿಯಿಂದ ಸೀನಿ ತಂದು ನೀಡಿದ ನಸ್ಯದ ಪೊಟ್ಟಣವನ್ನು ಸ್ವೀಕರಿಸಿ ಮುಂದೆ ಬರಲು ಸೀನಿ ಒಳ ಬಾಗಿಲಲ್ಲಿ ನಿಷ್ಕ್ರಮಿಸುವನು. ರಾ. ರಾ. ಸೋಫಾದಲ್ಲಿ ಕುಳಿತು, ನಶ್ಯ ಒಂದು ಚಿಟಿಕೆ ಏರಿಸಿ, ರೇಡಿಯೋ ತಿರುಗಿಸಿ, ಪಕ್ಕದ ಸಣ್ಣ ಮೇಜಿನ ಮೇಲಿರುವ ವೃತ್ತಪತ್ರಿಕೆ ಎಳೆದುಕೊಂಡು, ಸಂಗೀತ ಸುದ್ದಿಗಳಲ್ಲಿ ತಲ್ಲೀನರಾಗುವರು. ಸೀತಮ್ಮ ಹಿಂದಿನ ಬಾಗಿಲಲ್ಲಿ ಕಾಣಿಸಿಕೊಂಡು ಪತಿಯ ಕಾರ್ಯಕ್ರಮವನ್ನು ಒಪ್ಪದಂತೆ ತಲೆಯಾಡಿಸಿ ಪಕ್ಕಕ್ಕೆ ಬಂದು ನಿಂತು—]

**ಸೀತ**:— ಸರಿ, ಬೆಳಗಾಗೆದ್ದು paper ಹಿಡ್ಕೊಂಡ್ಕೂತ್ಕೊಂಡ್ಬಿಟ್ರೀ ಇಲ್ವೋ? (ಪತ್ರಿಕೆ ಕಸಿದು ಮೇಜಿನ ಮೇಲೆ ಬಡಿಯುವಳು)

**ರಾ.ರಾ**:— ಲೇ, ಲೇ, ಲೇ....

**ಸೀತ**:— ಇದೊಂದ್ ಹಾಳ್ ದರಿದ್ರ, ಮೂರ್ಹೊತ್ತೂ ಹೊಡ್ಕೋತಾ ಇರುತ್ತೆ (ರೇಡಿಯೋ ನಿಲ್ಲಿಸಲು ಚಾಚಿದ ಕೈಯನ್ನು—)

**ರಾ.ರಾ**:— (ಹಿಡಿದು ತಡೆಯುತ್ತಾ) ಲೇ ಲೇ ಲೇ.. ಸ್ವಲ್ಪ ತಡಿಯೋ, ಸ್ವಲ್ಪ ತಡಿಯೋ, ಈಗ ಸುದ್ದಿ ಬರೋ ಸಮಯ ಕಣೇ.

**ಸೀತ**:— ಏನ್ಸುದ್ದಿ ಬರೋದು?

**ರಾ.ರಾ**:— ಆ ಪೇಪರ್ರಲ್ಹಾಕ್ಕೊಂಡಿದಾನೆ, "ಆಹಾರದ ಸಮಸ್ಯೆ ಅಸಾಧ್ಯವಾಗಿ ಹೋಗಿ ಕಡಲೆಯ ಕಾಯನ್ನು ತಿನ್ನುತ್ತಿದ್ದಾರೆ." ಅಂತ,.... ಈಗ Radio ನಲ್ಲೇನಾದ್ರೂ ಬರುತ್ತೋ..

ಸೀತ :— ಆಹಾರವೇ ?

ರಾ. ರಾ :— ಅಲ್ವೇ, ಸುದ್ದೀನೇ.

ಸೀತ :— ಸುದ್ದಿನೋ ? ಬರುತ್ತೆ. ಬಂದೂ, ಕೇಳೀ, ನೀವೇನ್ಮಾಡ್ತೀರಿ ? ನಿಮ್ಮ ಗದ್ದೇನಲ್ಲಿ ಬಂದ ಬೆಳೇನೇನಾದ್ರೂ ಅವರಿಗೆ ಹಂಚ್ತೀರಾ ; ಇಲ್ಲಾ ಆಲೆ ಮನೆ ಇಡಿಸಿ, "ಬರೀ ಕಡ್ಲೇಕಾಯಿ ಯಾಕ್ತಿಂತೀರಿ, ಪಾಪ, ಪಿತ್ತವಾದೀತು, ಬೆಲ್ಲಾನೂ ತೊಗೊಳ್ಳಿ" ಅಂತೇನಾದ್ರೂ ಒದಗಿಸ್ತೀರಾ ?

ರಾ. ರಾ :— ಅಯ್ಯೊಯ್ಯೊ, ಅವೆಲ್ಲಾ ಆಗುತ್ತೇನೇ ? ನಾವು ಸಹಾಯ ಮಾಡ್ಬೇಕೂಂತ್ಲೇ ? ವಿಷಯ ತಿಳ್ಕೊಂಡು ಸಹಾನುಭೂತಿ, ಅನುತಾಪ, ತೋರಿಸ್ಬಿಟ್ರೆ ಸಾಕು. ನಮ್ಕೆಲ್ಸ ಮುಗೀತು. ಬಾಕೀದಕ್ಕೆ ಸರ್ಕಾರ ಇದೆ. ಅದ್ನೋಡ್ಕೊಳ್ಳುತ್ತೆ. ನಾವು ಸಮಾಜ್ದಲ್ಲಿರೋದ್ರಿಂದ, "ನಾವು ಕ್ಷೇಮ, ನಿಮಗೆ ಕ್ಷಾಮವಂತೆ, ಅಯ್ಯೋ ಪಾಪ" ಅಂತಷ್ಟನ್ಬೇಕು ನಾವು. ಅಲ್ವೇ. ನೀನ್ಮಾತ್ಮಾತ್ಗೂ educated woman ಉ — educated woman ಉ ಅಂತ್ಹೇಳ್ಕೋತಿರ್ತೀಯಲ್ಲೇ, ನಿನಗೆ ಈ social and political welfare ನಲ್ಲಿ interest ಏ ಇಲ್ವೇನೇ ?

ಸೀತ:— ಇದೆ. ನಿಮ್ಗಿಂತ ಜಾಸ್ತೀನೇ ಇದೆ. ಆದ್ರೆ ಮನೆ welfare ನ ನೋಡ್ಕೊಂಡಲ್ವೇ, ನೆರೆ ಮನೆ welfareಗಳ್ನ ನೋಡ್ಬೇಕಾದ್ದು ? ಬಾಕಿಯೋರ್ಗೆಲ್ಲಾ 'ಅಯ್ಯೋ ಪಾಪ' ಅಂದ್ರೆ ಸಾಕು, 'ನಾವು ಕ್ಷೇಮ' ಅಂತ್ಹೇಳ್ಕೋಬೇಕೂಂತ ಈಗ್ತಾನೆ ಅಂದ್ರಿ.

ರಾ. ರಾ:— ಹೌದೂ. ಅಂದೆ. ಈಗೇನ್ ನಾನ್ನೋಡ್ಕೊಳ್ದೆ ಇರೋದು ?

ಸೀತ:— ಮನೇಲೀ ...ಕುದುರೆಗಳ್ನ ಬೆಳೆಸಿದ್ಹಾಗೆ ಬೆಳೆಸಿಟ್ಕೊಂಡು ಹೆಣ್ಮಕ್ಕಳ್ನ....ಅವರಿಗೆ ಮದ್ವೆ ಯೋಚ್ನೆ ಮಾಡೋದ್ಬಿಟ್ಬಿಟ್ಟು.... ಊರ್ನೋರ ಆಹಾರ, ಸಮಸ್ಯೆ, ಕಡ್ಲೆಕಾಯೀ, ಸುದ್ದೀ ಬರುತ್ತೆ ಅಂತ ಬುದ್ಧೀ—

ರಾ. ರಾ :— "ಇಲ್ದೇ" ಅಂತ ಪೂರ್ತಿ ಮಾಡ್ಬಿಡು, ದಾಕ್ಷಿಣ್ಯ ಯಾಕೆ ? ಅಲ್ವೇ, ನಿನ್ಮನಸ್ನಲ್ಲಿ ನಾನೇನೂ ಆ ವಿಷಯದಲ್ಲಿ ಯೋಚ್ನೆ ಮಾಡ್ತಾ ಇಲ್ಲ ಅಂತೆ ತಿಳ್ಕೊಂಡಿರಬಹುದು. ತಪ್ಪು. (Paper pick up ಮಾಡುತ್ತಾ) ನಾನಿದ್ರಲ್ಲಿ ಮೊದಲ್ನೋಡಿದ್ದು matrimonial Column ಏ ಕಾಣೇ! ಏನಿಲ್ಲ, ಯಾವೋನೋ

ಒಬ್ಬ ಮೊದಲಿಯಾರ್ರು ಹಾಕ್ಕೊಂಡಿದಾನೆ..ಹಾ..ನೋಡು ( ಎಂದು insertion ಓದುವನು) "ಬೇಕಾಗಿದೆ. ೩೦ ವಯಸ್ಸಿನಒಳಗಿನಯುವತಿ ರೂಪವತಿ, ವಿದ್ಯಾವತಿ—

ಸೀತ :— (Paper ಕಿತ್ತುಕೊಂಡು ದೂರ ಎಸೆಯುತ್ತಾ) ನಿಮ್ಗೆ.. ನಿಮ್ಗೆ.. ನಿಮ್ಗೆ.. ಅತೀ ಆಗ್ಹೋಯ್ತು ತಮಾಷೆ ನಮ್ಮ ಕಷ್ಟ ನಿಷ್ಠೂರ ನಿಮಗ್ಹ್ಯಾಗೆ ಗೊತ್ತಾಗುತ್ತೆ ? Club ಉ, ಇಸ್ಪೀಟೂ, Walking ಉ, ಮನೆ ಅಂದ್ರೆ ಮುಗ್ದೋಯ್ತು ನಿಮ್ಗೆಲ್ಲ. ನಮಗ್ಹ್ಯಾಗಾಗುತ್ತೇನೂ? ಪಕ್ಕದ್ಮನ್ನೋರೆಲ್ಲಾ ಏನಂದ್ಕೊಳ್ತಿದಾರೆ ಗೊತ್ತೇ ? ನಾನ್ತಲೆ ಎತ್ಗೊಂಡೋಡಾಡೋ ಹಾಗಿಲ್ಲ ಬೀದೀಲಿ

ರಾ.ರಾ :— ಬ್ಯಾಡಾ, ತಗ್ಗಿಸ್ಕೊಂಡೇ ಓಡಾಡ್ತ. ಅಯ್ಯಯ್ಯಾ, ಅಂದ್ಕೊಳ್ಳೀ ಬಿಡೇ. ನೂರ್ಜನ ಸಾವಿರ್ಮಾತಾಡ್ಕೋತಾರೆ. ಅದಕ್ಕೆಲ್ಲಾ ನಾವ್ಹೆದರ್ಕೊಂಡ್ಬಿಡೋಕಾಗುತ್ತೇನೇ ? ಹೋಗ್ಲಿ, ಈಗ ಅವರ್ಮನೆ ಮಕ್ಕಿಗೆಲ್ಲಾ ಮದ್ವೆ ಮಾಡ್ಬಿಟ್ಟಿದಾರಂತೋ ? ಆ ನಿಮ್ಮ ಸಮಾಜದ ಸೆಕ್ರೆಟ್ರಿ ಮಗಳ್ಗೆಷ್ಟೇ ವರ್ಷ ? ರಾಮೇಶ್ವರಕ್ಕೆ ರೈಲ್ ಛಾರ್ಜ್ ಯಾಕೆ ಅನ್ನೋ ಹಾಗೆ ಬೆಳೆದ್ನಿಂತಿದಾಳೆ ಕನ್ಯಾ ಕುಮಾರಿ ! ಮೊನ್ನೆ ದೋಟಿ ಇಲ್ದೆ ಸಂಪ್ಗೆ ಹೂವ್ಕಿಡಿಸ್ತಾ ಇದ್ಲು compound ನಲ್ಲಿ !! ನೋಡೇ, ಅನ್ನೋಕೇನೂ, ಬೇಕಾದ್ದೇಳ್ಬಹುದೇ, ಸ್ವತಃ ತಾವೇ ನಡೆಸ್ಬೇಕಾದ್ರೆದೆ ಕಷ್ಟ.

ಸೀತ :— ಹೌದೂಂದ್ರೆ. ಅದ್ಸರಿಯೇ. ಆದ್ರೆ ಕಷ್ಟ ಅಂತ್ನಾವು ಕೈಕಟ್ಕೊಂಡ್ಕೂತ್ಕೊಂಡ್ಬಿಡೋಕಾಗುತ್ಯೇ ? ಜಾತ್ಕಗ್ಳು ತರ್ಸಿ, ಯಾವ್ದು ಸರ್ಹೋಗುತ್ತೋ ನೋಡೀ........ಅಂದ್ಹಾಗೇ ಪುಟ್ಟೋಯಿಸ್ಬ್ರೇಳಿದ್ರಲ್ಲಾ, ಮೈಸೂರ್ನೋನೊಬ್ಬ ವರ ಇದಾನೇಂತ, ಅಲ್ಲೀಗೆ ಕಾಗ್ದ ಹಾಕಿದ್ರೇನು ?

ರಾ.ರಾ :— ಹೂ. ಓಹೋ. ಅವತ್ತೇ ಹಾಕ್ಬಿಟ್ಟಿದ್ದಾರೆ, ಜೋಯಿಸ್ರು.

ಸೀತ :— ನೀವ್ಬರೀಲಿಲ್ಲ ?

ರಾ.ರಾ :— ' ನಾನೇ ಬರೀತೇನೆ ' ಅಂದ್ರು, ಬರೆದ್ರು. ಅಲ್ದೆ, ನಿನ್ನೆ ಹೇಳಿದ್ರು— ನಂಗ್ಮರ್ತೇಹೋಯ್ತ್ನೋಡ್ಹೇಳೋದು— ಆ ಹುಡುಗ್ನೇ ಈ ಊರಿಗೇನೋ ಕೆಲಸದ್ಮೇಲೆ ಬರೋನಿದಾನಂತೆ, ಇವತ್ನಾಳೇಲಿ. ಬರ್ತಾನೆ,

ಒಪ್ತಾನೆ, ಆಗುತ್ತೆ ಬಿಡು....ಹಣೇಲಿ ಬರ್ದಿದ್ರೆ....ಈಗಾ....ಅಂ....ಲೇ.... ಒಂದ್ಲೋಟಾ....ಕಾಫಿ ಇದ್ರೆ ನೋಡೇ

ಸೀತ:— ಕೊನೇಗಲ್ಲೀಗ್ಬಂದ್ನಿಲ್ಬೇಕು ಪಲ್ಲವಿ. ಅದೇನ್ ಕಾಫಿ ಹುಚ್ಚೋ ನಾನ್ಕೇರೇ ಕಾಣೇ....ಸೀನೀ....ಸೀನೀ!

ರಾ.ರಾ:— ಲೇ ಲೇ ಬೇಡ್ವೇ, ನೀನೇ ಹೋಗೇ. ಅವ್ನೇನ್ಮಾಡ್ತಿದಾನೋ ಏನೋ. ಅಲ್ದೆ, ನೀನೇ ಮಾಡ್ಕೊಂಡ್ತಂದಿ ಅಂದ್ರೆ, ಅದರ ರುಚೀನೇ ಬೇರೆ ಕಣೇ!

ಸೀತ:— ಸಾಕ್ಸುಮ್ನಿರಿ, ಚೆನ್ನಾಗಿದೆ. ಬರ್ತಾ ಬರ್ತಾ ನಿಮಗೆ ವಯಸ್ಸಿಳಿಂದಕ್ಹೋಗ್ತಾ ಇದೆ. (ನಿಷ್ಕ್ರಮಿಸುವಳು. ರೇಡಿಯೋ ರಾ.ರಾ. ತಿರುಗಿಸುವರು)

ರೇಡಿಯೋ:— "....ಕೆಲವು ಕಡೆಗಳಲ್ಲಿ ಅನೇಕ ತೊಂದರೆಗಳಿದ್ದರೂ ಸರ್ಕಾರವು ಸಕಾಲದಲ್ಲಿ ಮುಂಜಾಗ್ರತೆ ಕ್ರಮಗಳನ್ನು ಕೈಕೊಂಡು, ಆರೋಗ್ಯದ ಕಡೆಗೂ ಗಮನವಿಟ್ಟು, ಆಹಾರದ ಸುಸೂತ್ರ ಸರಬರಾಯಿಗೆ ಏರ್ಪಾಟು ಮಾಡುತ್ತಿದೆ....

ರಾ.ರಾ:— (ಸೀತ ಕಾಫಿ ಸಮೇತ ಪ್ರವೇಶಿಸಲು ರೇಡಿಯೋ ನಿಲ್ಲಿಸಿ) ಹಹಹಹ, ಭೇಷ್, ಬಹಳ ಬೇಗ ತಂದ್ಬಿಟ್ಟೆ!

ಸೀತ:— ಪಾಪ, ತಮ್ಮ ರೇಡಿಯೋ ಶ್ರವಣಕ್ಕೆ ಅಡ್ಡಿ ಬಂದೆ. ಅದಕ್ಕೇಅಂತ್ಲಾಣತ್ತೆ ನನ್ನ ಒಳಗ್ಗಟ್ಟಿದ್ದೀವು?

ರಾ.ರಾ:— ಛೆ, ಛೆ, ಎಲ್ಲಾದ್ರೂ ಉಂಟೇನೇ? ನೀನ್ಕಾಫಿ ತರೋ ತನಕ ಸುಮ್ನೆ ಒಬ್ನೇ ಕೂತ್ಕೊಂಡೇನ್ಮಾಡ್ಲಿ ಅಂತ ಹಾಗೇ ತಿರುಗಿಸ್ದೆ ಅಷ್ಟೆ. (ಕಾಫಿ ಇಸಗೊಂಡು) ಏನ್ ಘರವಾ ಇಲ್ವಂತೆ ಕಣೇ, ಸರಬ್ರಾಯಿ ಸರಿಯಾಗಾಗ್ತಾ ಇದೆಯಂತೆ.

ಸೀತ:— (ಕಾಫಿ ಲೋಟ ಸೂಚಿಸುತ್ತಾ) ಇಲ್ಲೂ ಆಯ್ತಲ್ಲ, ಕುಡೀರಿ, ಆರ್ಹೋಗುತ್ತೆ.

ರಾ.ರಾ:— (sip ಮಾಡಿ ಚಪ್ಪರಿಸಿ) ಅ ಹಹಹಹಹ!

ಸೀತ:— ಯಾಕೆ?

ರಾ.ರಾ:— ಅಲ್ಲ, ಕಾಫಿ ರುಚಿ. ನಾ ಹೇಳ್ಳಿಲ್ವೇ? ನಂಗೊತ್ತೇ. ಹ್ಯಾಗಿದೇಽಂತಿ?

ಸೀತ:— ಹಾಲು ಸಕ್ರೆ ಧಂಡಿಯಾಗ್ಹಾಕ್ಕೊಂಡ್ರೆಂದ್ರೆ ರುಚೀಗೇನ್ ಧಾಡಿ?

ರಾ.ರಾ— ಉ ಹೂಹುಹುಹು, ಅದ್ರಲ್ಲೀನೇ ಇದೆ ರುಚಿ? ಹಾಲ್ಹಾಲೇನೇ, ಸಕ್ರೆ ಸಕ್ರೇನೇ. ಹಾಲಿನ ಬಣ್ಣ ಸಕ್ರೆ ಸಿಹಿ ಇರೋ ಈ (ಸೀತಾ ಕೈ ಹಿಡಿದು ಅವುಕುತ್ತಾ) ಕೈಗುಣದ ಪ್ರಭಾವವೇ ಅದು!

ಸೀತ:— ಥೂ, ಬಿಡಿ (ಬಿಡಿಸಿಕೊಂಡು) ಇದೇನೂಽಂದ್ರೆ ನಾಚಿಗ್ಕೇಡು, ಲಕ್ಷಣವಾಯ್ತು. ಅಗೋ ಸೀನಿ.

(ಸೀನಿ ತಟ್ಟೆಯಲ್ಲಿ ಕಾಫಿ ಲೋಟವಿಟ್ಟುಕೊಂಡು ನೆಟ್ಟಗೆ ಸರೋಜಳ ಕೋಣೆ ಕಡೆಗೆ ಹೋಗಿ ಬಾಗಿಲು ಬಡಿದು)

ಸೀನಿ:— **ಅಮ್ಮಾ!.... ಅಮ್ಮಾ!!.... ಅಮ್ಮಾ!!!**

ಸರೋಜ:— (ಬಾಗಿಲು ತೆಗೆದು ತಲೆ ಚಾಚಿ) ಏನೋ ಅದು? ಯಾಕೋ ಹೀಗೆ ಬಾಗಿಲ್ಹತ್ರ ಬಂದ್ಬಡ್ಕೋತೀಯೆ?

ಸೀನಿ:— ಕಾಫಿ....ತೊಗೊಂಡ್ಬಂದೇಽಮ್ಮ.

ಸರೋಜ:—ತೊಗೊಂಡ್ಬಂದಿದ್ದಿ, ನನಗ್ಕಣ್ಕಾಣುತ್ತೆ. ಆದ್ರೆ ಇಷ್ಟೊಟ್ಹತ್ಗೇನೇನೋ ಕಾಫಿ ತರೋದು? ಎಷ್ಟೋ ಘಂಟೆ ಈಗ?

ಸೀನಿ:—ಆಗ್ಲೇ ತರ್ತಾ ಇದ್ದೇಽಮ್ಮ. ರಾಯ್ರು, ಅಂಗ್ಡೀಕ್ಕಳ್ಸಿದ್ರು, ನಶ್ಯ ತರೋಕೆ.

ಸರೋಜ:— ನಶ್ಯ ತರೋಕೆ ಹೇಳಿದ್ರೆ, ಕಾಫಿ ತಂದ್ಕೊಟ್ಟಾಮೇಲ್ಹೋಗ್ಬೇಕಾಗಿತ್ತು. ಅಮ್ಮಾವ್ರಿಗೆ, ಅಡಿಕೇಲೇನೂ ತಂದ್ಕೊಟ್ಟಾಮೇಲ್ಹಾಬಹೋಗು. (ಬಾಗಿಲು ಧಪ್ಪನೆ ಹಾಕಿಕೊಳ್ಳುವಳು)

ಸೀನಿ:— ಇಲ್ಲಮ್ಮ, ನಾಳೆಯಿಂದ ಬೇಗ್ತರ್ತೀನಮ್ಮ.

ಸರೋಜ:— (ಬಾಗಿಲು ತೆರೆದು ತಲೆ ಚಾಚಿ ಹಲ್ಲು ಕಿರಿದು ಅಣಕಿಸುತ್ತಾ) "**ನಾಳೆ** ಇಂದ ಬೇಗ್ತರ್ತೀನಿ"! ಇವತ್ತು ತರೋಕೇನಾಗಿತ್ತಿಂಗ್ಕೇಡು? ಬೆಳಗ್ಗೆ ಇಂದ ಕಾಫಿ ಇಲ್ದೆ ಸಾಯ್ಸಿದ್ದೈಲ್ಲಾ, ಈಗೇನ್ಬೇಡ ನಂಗೆ, ತಗೊಂಡ್ಹೋಗು.

ಸೀನಿ :— ಇಲ್ಲಮ್ಮಾ....

ಸರೋಜ :— ಏನಿಲ್ಲಮ್ಮಾ ? ನೀನ್ತಂದ್ಕೊಟ್ಟಾಕ್ಕುಡೀಬೇಕೂಂತ್ಲೋ ನಿನ್ಮನಸ್ನಲ್ಲಿ ? ಹೋಗಾಚ್ಗೆ.

ಸೀನಿ :—ಇಲ್ಲಮ್ಮಾ....

ಸರೋಜ:— "ಇಲ್ಲಮ್ಮಾ.... ಇಲ್ಲಮ್ಮಾ" (ಬಾಗಿಲು ಪೂರಾ ತೆಗೆದು ಹೊರಗೆ ಬಂದು ಹಿಮ್ಮೆಟ್ಟುತ್ತಿರುವ ಸೀನಿಯ ಮೇಲೆ ನುಗ್ಗುತ್ತಾ) ಅಯ್ಯೋ ಶನೇಶ್ವರವೇ, ಬೇಡಾ ಅಂತ್ನಾನ್ಹೇಳ್ತಾ ಇದ್ರೆ ಎದ್ರು ವಾದಿಸ್ತೀಯಾ ? (ಲೋಟ ಎತ್ತಿ ಕಾಫಿ ಸೀನಿಯ ತಲೆ ಮೇಲೆ ಅಭಿಷೇಕ ಮಾಡಿ, ಅವನ ಕೈಲಿರುವ ತಟ್ಟೆ ಬಡಿಯಲು ಅದು ನೆಲಕ್ಕೆ ಬೀಳುವುದು. ರಾ.ರಾ. ಮತ್ತು ಸೀತ "ಅಯ್ಯಯ್ಯೋ" "ಸರೋಜಾ" ಎನ್ನುವರು. ಶಾಂತು ತನ್ನ ಕೋಣೆಯ ಬಾಗಿಲಲ್ಲಿ ಕಾಣಿಸಿಕೊಳ್ಳುವಳು.) ನಡಿ. ನಡಿ (ಎನ್ನುತ್ತಾ ತಲೆ ಬೆನ್ನುಗಳ ಮೇಲೆ ಮೊಟು ಕುತ್ತಾ) ಬೊಗ್ಳೋ ಇನ್ನೊಂದ್ಸರ್ತಿ, 'ಇಲ್ಲಮ್ಮಾ ಇಲ್ಲಮ್ಮಾ'ಽಂತ. ಮತ್ತೆ ನಾಲ್ಕೇಟು ಕೊಡಲು ಸೀನಿ ನೆಲದ ಮೇಲೆ ಬಿದ್ದು ಅಳಲು ಶಾಂತು ಮಧ್ಯೆ ಬಂದು)

ಶಾಂತು :— ಅದ್ಯಾಕೇ ಅವನ್ನಾಗ್ಹೊಡದು ಚಚ್ತೀಯೋ ?

ಸರೋಜ :— ನಿನ್ಯಾರ್ಕರೆದ್ರೇ ಇಲ್ಲಿ ? ದೊಡ್ಡೆಜಮಾನಿ ಹಾಗ್ಬಂದ್ಬಿಟ್ಳು ಬಾಯ್ಹಾಕ್ಕೊಂಡು

ಸೀತ :— ಅಲ್ವೇ, ಅವನ್ತಲೆ ಒಡ್ದ್ಹೋಗಿದ್ರೇನ್ಗತಿಯೋ ?

ಸರೋಜ :— ಏನ್ಗತಿಯೋ ? ಇದಾಳಲ್ಲ ಇವ್ಳು, ನಿಮ್ಮದ್ಮಗ್ಳು, doctorಉ, bandage ಬಿಗೀತಾಳೆ. ನನಗೆ ಕಾಫಿ ಇಲ್ದಿದ್ರಾಳಾಗ್ಹೋಗ್ಲಿ, ಅವನ್ಮೇಲೆ ಬಂದ್ಬಿಡ್ತು ಕನಿಕರ, "ತಲೆ ಒಡ್ದ್ಹೋಗಿದ್ರೇನ್ಗತಿಯೋ"ಽಂತ.... ತಡಿ, ಒಡ್ದೋಬಿಡ್ತೇನೆ ನೋಡೋಣ, ಏನ್ಗತೀಽಂತ. (ಕೈಎತ್ತಲು)

ಸೀತ :— (ತಡೆದು) ತ್ಸು ತ್ಸು ತ್ಸು, ಚೆನ್ನಾಗಿದೆ, ಸುಮ್ನಿರೇ.

ಸರೋಜ :— ನನ್ನಿಷ್ಟ ಬಂದ್ಹಾಗ್ಮಾಮಾಡ್ಕೋತೀನೀ, ನೀ ಏನ್ಹೇಳ್ಬೇಕಾಗಿಲ್ಲ ಹೋಗು.

ಶಾಂತು :—ಚೆನ್ನಾಗಿದ್ಯೇ, ತಾಯೀ ಅಂತನ್ನಿಸ್ಕೊಂಡೋಳವಳಷ್ಟ್ಕೂಡ ಕೇಳ್ಕೂಡ್ದಲ್ವೇನು ? ಇನ್ಯಾರ್ನಿಮ್ಮಾತಾಡ್ನೋರ್ಹಾಗಾದ್ರೇ ಮನೇಲಿ ?

**ಸರೋಜ:**— ನೀನು, ನೀನು, ನೀನೊಬ್ಬ್ಳು ಟ್ಟೊಂಡ್ಬಂದಿದ್ದೀಯಲ್ಲಾ ನನ್ಬನ್ನಿಂದೇನೇ, ಗೌತಮ ಬುದ್ಧನ್ಹಾಗೆ, ನಂಗೆ ಬುದ್ಧಿ ಹೇಳೋಕೆ. ನೀನೇನ್ಮಾಡೀಯೋ, ಶಾಂತೂ ಶಾಂತೂ ಶಾಂತೂ ಶಾಂತೂಂತೆ ಮುದ್ಮಾಡಿ ಬೆಳೆಸ್ಬಿಟ್ಟಿವಾರೆ ಇಬ್ರೂನೂ, ಆ ಕೊಬ್ಬ್ಬ್ಗಾಗ್ಮಾಡ್ಸತ್ತೆ ನಿನ್ನ.

**ರಾ ರಾ:**— ನಿಂಗೇನೇ ಕಮ್ಮಿ ಮಾಡಿರೋದು, ರೋಗಾ?

**ಸರೋಜ:**— ರೋಗಾ? ಯಾರಿಗೆ ರೋಗಾ? ಕಾಫಿ ಇಲ್ದೆ ನಾನ್ ಕಂಗೆಡ್ತಿರೋವಾಗ ಮೂಗಿಗೆ ತುರುಕ್ಕೊಳ್ಳೋಕೆ ನಶ್ಯಕ್ಕೆ ಔಸರ ಆದದ್ನಂಗೇ? ರೋಗ್ವಂತೆ ರೋಗ!!

**ರಾ.ರಾ**— ಏನೂ, ಎನೂ, ಏನಂದೀ, ಏನೇ ಅದು **ಕತ್ತೇ?** ಬಾಯಿಗ್ಬಂದ್ಹಾಗೆಲ್ಲಾ ಬೊಗಳ್ತಾ ಇದ್ದಿ; **ಬಲಿಹಾಕ್ಬಿಡ್ತೇನ್ನೋಡು.**

**ಸರೋಜ:**— (ಕೊರಳು ಕುಲುಕಿಸುತ್ತಾ) ಅಹಹಹಹಹ, ಬಲಿ ಹಾಕ್ಬಿಟ್ಟೇಯೆ. ನಾನೇನ್ ಎಳೇ ಕೂಸೂಂತಿಳ್ಕೊಂಡ್ಬಿಟ್ಟಿದ್ದೀಯೋನೋ ಹೆದರಿಸ್ಬಿಡೋಕೆ.

**ರಾ.ರಾ:**— 'ಎಳೇ ಕೂಸೂ'? ಯಾವೋನೇ ನಿನ್ನ ಎಳೇ ಕೂಸೂಂತ ತಿಳ್ಕೊಂಡಿರೋನು? ಕೊಟ್ಟೆ ಕೋಣ, ಕೊಟ್ಟೆ ಕೋಣ ಬೆಳೆದ್ಹಾಗ್ಬೆಳೆದಿದ್ದಿ.

**ಸರೋಜ:**— ಹೌದೂ, ಅದಕ್ಕೇ ಬಲಿಹಾಕಿಸ್ಕೊಳ್ಳೋಲ್ಲಾಂದದ್ದು. ಅಲ್ದೆ ಬಲಿ ಹಾಕೋ ಭರಾಟೇಲಿ ಕೈ ಗ್ಗಿ ಉಳ್ಕೊ್ಗ್ಗಿಬಿಟ್ಟೇತು? ಅದನ್ನೋಡ್ಕೊ. ಕತ್ತೆ–ಕೋಣ–ಬೊಗಳತ್ತಂತೆ!

**ರಾ.ರಾ:**— ಲೇ, ಲೇ, ಲೇ, ಬೇಡಾ, ನಿನ್ನೀನ್ನೀನ್....

**ಸೀತ:**— ಅಯ್ಯೋ, ಹೋಗ್ಲಿ ಸುಮ್ನಿರೀಂದ್ರೆ

**ರಾ.ರಾ:**— ಏನ್ಸುಮ್ನಿರೋದೇ! ಏನ್ಸುಮ್ನಿರೋದೂಂತೀನಿ?........ ಅವಳವಳವಳ್ಗೆ ಮೈ ಮೇಲೆ ಜ್ಞಾನ, ಜ್ಞಾನ ಇದ್ಯೇನ್ನೋಡು. ಹೆಂಡ ಹೆಂಡ ಕುಡ್ದೋಳ್ಹಾಗ್ಮಾತಾಡ್ತಾ ಇದಾಳೆ.

**ಸರೋಜ:—** ಹೆಂಡ ಕುಡ್ದೋಳ್ತಾಗ್ಮಾತಾಡ್ತಾ ಇದಾಳೆ, ಗಾಂಜ ಕುಡ್ದೋಳ್ತಾಗೆ!

**ರಾ.ರಾ:—** ಇಲ್ಲ!

**ಶಾಂತು:—** ಅಯ್ಯೋ ಸುಮ್ನಿರಪ್ಪ. ಅದೊಂದ್ಮಾಡ್ಬೆಕ್ಕೆಲ್ಲೋ, ಮಾತೆತ್ತಿದ್ರೆ ಶಿರ್‍ರ್‍ರ್‍ರಂತ್ಬೀಳುತ್ತೆ ನನ್ನ ಮೇಲೆ!

**ಸರೋಜ:— ಏನೂ? ಕಾಡ್ಬೆಕ್ಕೂ? ಕಾಡ್ಬೆಕ್ಕೂ??** (ಹೆಜ್ಜೆಯ ಮೇಲೆ ಹೆಜ್ಜೆಯಿಟ್ಟು ಶಾಂತೂನ ಸಮೀಪಿಸುತ್ತಾ) ಯಾರ್ನೇ ನೀನ್ಕಾಡ್ಬೆಕ್ಕೂಂದಿದ್ದು? ಯಾರ್ನೇ ನೀನ್ಕಾಡ್ಬೆಕ್ಕೂ ಅಂದಿದ್ದೂ? (ಥಟ್ಟನೆ ಅವಳ ಮುಂದಲೆ ಹಿಡಿದು) you, you. ಊರ್ ಶಿಂಗ್ಳೀಕಾ (ಜುಂಗಿಸಲು)

**ಶಾಂತು:—** ಅಯ್ಯೋವ್, ಬಿಡೇ.... ಅಮ್ಮಾ!

**ಸೀತ:—**(ಬಿಡಿಸುತ್ತಾ) ಬಿಡೇ, ಬಿಡೇ, ಪಿಶಾಚಿ. ಅವಳ ತಂಟೆಗ್ಯಾಕ್ಹೋಗ್ತೀಯೆ? ವಯಸ್ಸಾಂದಿದ್ದಕ್ಕೆ ಸಾರ್ಥಕವಾಯ್ತು.

**ಸರೋಜ:—** (ನಾಗರಹಾವಿನಂತೆ ಬುಸುಗುಟ್ಟಿ ಶಾಂತೂನ ನುಂಗಿಬಿಡುವಳಂತೆ ನೋಡುತ್ತಾ) ಕಾಡ್ಬೆಕ್ಕಂತೆ ಕಾಡ್ಬೆಕ್ಕು!.... ನೋಡ್ಬೇಕಾಗಿತ್ತು ಹ್ಯಾಗಿರ್‍ತಿತ್ತೊ ಕಾಡ್ಬೆಕ್ಕೂ ಅಂತೆ. ಮುಖ ಎಲ್ಲಾ ಪರಚಿಟ್ಬಿಡ್ತಾ ಇದ್ದೆ.

**ರಾ ರಾ:—** ಅಷ್ಟಂದಿದ್ದಕ್ಕೆ ನಿನ್ಮಾನಕ್ಕಮ್ಮಿ ಆಗ್ಹೋಯ್ತು; ಊರ್ನೋರೆಲ್ಲಾ ಉಗುಳ್ತಾ ಇದಾರಲ್ಲ, ಥೂ, ಥೂ, ಅಂತ, ಬಜಾರಿ, ಗಯ್ಯಾಳಿ, ಗಂಡ್ಬೀರಿ ಅಂತ, ಅದೇ ಸರಿ ನಿನ್ಗೆ!

**ಸರೋಜ:—** ಉಗುಳ್ಕೊಳ್ಳಿ, ಉಗುಳ್ಕೊಳ್ಳಿ. ಬೊಗೊಳ್ಕೊಳ್ಳಿ ನಾಯಿಗ್ಳು, ಬೊಗೊಳ್ಕೊಳ್ಳಿ. ಹಿಂದೆ ಬೊಗಳುತ್ವೆ ಹೇಡಿಗ್ಳು. ನನ್ಮುಂದೆ ಒಂದ್ಮಾತಾಡ್ಲಿ, ಉಸಿರ್ಬಿಡ್ಲಿ, ಬಜಾರಿ, ಗಯ್ಯಾಳಿ, ಗೊತ್ತಾಗುತ್ತೆ. (ಸೀನೀನ್ನೋಡಿ) ಎಲ್ಲಾ ಈ ಪ್ರಾರಬ್ಧದಿಂದ (ಅವನ ಮೇಲೆನುಗ್ಗಲು)—

**ಸೀತ:—**(ಬಿಡಿಸುತ್ತಾ) ಅಯ್ಯೋ ಸುಮ್ನಿರಮ್ಮಾ ಹೋಗ್ಲಿ. ನಾಚಿಕ್ಗೇಡು. ಕಾಫಿ ತಂದ್ಕೊಡ್ಲಿಲ್ಲಾಂತ ತಾನೇ ಇಷ್ಟೆಲ್ಲಾ ರಂಪ? ನಾತಂದ್ಕೊಡ್ತೇನೆ ಸುಮ್ನಿರು. (ಒಳಗೆ ಹೋಗುವಳು)

ಸರೋಜ:— ನಂಗೇನ್ಬೇಡ ನಿನ್ಹಾಳ್ಕಾಫಿ. (ತಾನೂ ರಭಸದಿಂದ ತನ್ನ ಕೋಣೆಗೆ ಹೋಗಿ ಧಡಾರ್ನೆ ಬಾಗಿಲು ಹಾಕಿಕೊಳ್ಳುವಳು)

ರಾ.ರಾ:— ಬ್ಯಾಡ್ದಿದ್ರೆ ಸಾಯ್ಲಿ. ಎಲ್ಲೋ ಅನಿಷ್ಟ ಸಹವಾಸ. ಒಳ್ಳೇ ಮಾತ್ಗೂ ಸಗ್ಗೋಲ್ಲ, ಒದ್ರೂ ಸಗ್ಗೋಲ್ಲ. ಏನಾಗಿದ್ಯೆಮ್ಮಾ ಶಾಂತೂ ಇವನ್ಗೆ?

ಶಾಂತು:— ಏನಿಲ್ಲಪ್ಪ ಸಧ್ಯಕ್ಕೆ. ಮಂಡಿ, ಮೊಳಕೈ ಸ್ವಲ್ಪ ತರಚಿದೆ ಅಷ್ಟೆ. (ಸೀನಿಗೆ) ಬಾಪ್ಪ, ಔಷಧ ಹಚ್ತೀನಿ, ಬಾ.

ರಾ.ರಾ:— ಎಲ್ಲಿ.... ತ್ಸು ತ್ಸು ತ್ಸು ತ್ಸು ತ್ಸು.... ರಕ್ತ ಬಂದ್ಬಿಟ್ಟಿದ್ಯಲ್ಲೋಽಪ್ಪಾ–ಹೋಗು ಹೋಗು ಜಾಣ, ಔಷಧಿ ಹಚ್ಚಿಸ್ಕೋ ಹೋಗು. (ಶಾಂತೂ, ಸೀನಿ ನಿಷ್ಕ್ರಮಿಸುವರು. ಸೀತ ಈ ಕಡೆಯಿಂದ ಕಾಫಿ ತರುವಳು. ಸರೋಜ ತನ್ನ ಕೋಣೆಯಿಂದ ಬಿರುಗಾಳಿಯಂತೆ ಬೀದಿ ಬಾಗಿಲಿಗೆ ಹೊರಟು, ಮಧ್ಯೆ ತಾಯಿಯನ್ನು ಸಂಧಿಸುವಳು)

ಸೀತ:— ತೊಗೊ, ಸರೋಜ, ತುಂಬಾ ಹಾಲ್ಹಾಕ್ಮಾಡ್ಕೊಂಡ್ತಂದಿದೀನಿ.

ಸರೋಜ:— **ಇಷ್ಟೊ್ತ್ತಾದ್ಮೇಲ್ನನಗ್ಬೇಡಾ** (ಲೋಟ ಹಾರಿಸಿ ಬೀದಿ ಬಾಗಿಲು ಸೇರುತ್ತಾ) ನಿಮ್ಹಾಳ್ಕಾಫಿ ನೀವೇ ಕುಡ್ಕೊಳ್ಳಿ. ನಾನೆತ್ಲಾಗಾದ್ರೂ ಹಾಳಾಗ್ಹೋಗ್ತೀನೆ.

ಸೀತ:— ಅಯ್ಯೋ ಹ್ಯಾಸರ ಕತ್ತೇ (ಕಾಫಿ ಹನಿಗಳನ್ನು ಸೆರಗಿನಿಂದ ಕೊಡುವುತ್ತಾ) ಹಾಳಾಗ್ಹೋಗು, ಯಾರ್ಬೇಡ ಅನ್ನೋರು.

ರಾ.ರಾ:— ಯಾಕ್ಯಾಕೆ ಮಾಡು ಉಪಚಾರ, ಷೋಡಶೋಪಚಾರ, ಮಗಳ್ಗೆ

ಸೀತ:— (ಕೆಳಗೆ ಬಿದ್ದಿರುವ ಬೆಳ್ಳಿ ಲೋಟ ಎತ್ತಿಕೊಳ್ಳುತ್ತಾ) ಈ ಹಾಳು ಪ್ರಾರಬ್ಧದಿಂದ ನಮ್ಗೇನ್ಮೂರ್ಕಾಸಿನ್ಮರ್ಯಾದೆ ಬರೋಲ್ಲ.

ರಾ.ರಾ:— ಮರ್ಯಾದೆ ಮುಂಡಾಮೋಚ್ತು. ಕಾಫಿ ಹೊತ್ತಿಗೆ ತಂದ್ಕೊಡ್ಲಿಲ್ಲಾಂತ ಆ ಸಣ್ಣ ಹುಡುಗ್ನ ರಂಡಾ ಮುಂಡಾ ಎಲ್ಲಾ

ಚೆಚ್ಹಾಕ್ಬಿಟ್ರೆಲ್ಲಾ, ಅನ್ನೇನಾದ್ರೂ ಕೈಯೋ ಕಾಲೋ ಮುರ್ಕೊಂಡ್ಪ್ರಾಣ ಬಿಟ್ಬಿದ್ರೆ ಜೈಲಿಗ್ಹೋಗ್ಬೇಕಾಗಿತ್ತಲ್ಲೇ ನಾವು !

**ಸೀತ**:— ಅದ್ಯಾಕಾದ್ರೂ ಹೀಗ್ಮಾಡ್ತಾಳೋ, ಅದ್ಯಾವೋನ್ನ ಸೃಷ್ಟಿ ಮಾಡಿದಾನೋ ಬ್ರಹ್ಮ ಇವಳ್ನ ಗಂಟ್ಹಾಕ್ಕೊಳ್ಳೋಕೆ—

**ರಾ ರಾ**:— ಅವನ್ನೂ ಏಳ್ರಾಟ ವಕ್ರಿಸ್ಕೋಬೇಕು, ಇವಳಿಗ್ಬಂದು ತಾಳಿ ಕಟ್ಬೇಕು.

**ಪು.ಜೋ**:—(ನೇಪಥ್ಯ) ರಾವ್ ಸಾಹೇಬ್ರಿದಾರೇನೋ ?

**ಸೇವಕ**:— ( ,, ) ಔರಿ ಔರಿ.

**ಸೀತ**:— ಜೋಯಿಸ್ರು !

**ಪು.ಜೋ**:— (ಪ್ರವೇಶಿಸಿ) ನಮುಸ್ಕಾರಾ, ರಾವ್ ಸಾಹೇಬ್ರಿಗೆ.

**ರಾ.ರಾ**:— ನಮುಸ್ಕಾರ........ಹಹಹಹ........ ಬನ್ನಿ, ಬನ್ನಿ, ದಯಮಾಡಿ.

**ಪು.ಜೋ**:— ಅಬ್ಬಾ ಬ್ಬಾ ಬ್ಬಾಬ್ಬಾ, ಈ ಸಾರಿ ಛಳಿ ನೋಡಿದ್ರಾ ಹೇಗಿದೆ ? ನಡುಗಿಸಿ ನಡುಗಿಸ್ಬಿಡ್ತಾ ಇದ್ಯೆಲ್ಲಾ!

**ರಾ.ರಾ**:— (ಸೋಫಾ ತೋರುತ್ತಾ) ಕೂಡಿ, ಕೂಡಿ. ಅದರ ಕಥೆ ಯಾಕ್ಹೇಳ್ತೀರಿ ? (ತಾವೂ ಕೂಡುತ್ತಾ) ನನಗಂತೂ ಸಹಿಸೋಕೆ ಸಾಧ್ಯವೇ ಇಲ್ಲಾಂದ್ರೆ. ಬೆಳಗ್ನಿಂದ ಇದ್ವರ್ಗೂ, ನೋಡಿ, ಮೂರ್ಸರ್ತಿ ಆಯ್ತು, ಕಾಫಿ. ಈಗ ತಮ್ಮ ಜೊತೇಲಿ—

**ಸೀತ**:— ತಮ್ಮ ನೆಪದಿಂದ ನಾಕ್ನೆ dose ನ ದರ್ಶ್ನ ಎದುರ್ನೋಡ್ತಿದಾರೆ.

**ರಾ.ರಾ**:— Quite right ಕಣೇ, ಹಹಹಹ. ಎಲ್ಲಿ, make haste- ಜೋಯಿಸ್ರಿಗೆ, ಪಾಪ, ಛಳಿ.... (ಪು. ಜೋಗೆ) ದೇವರ ಪೂಜೆ ಆಗಿದೆ ತಾನೆ ?

**ಪು.ಜೋ**:— ಓಹೊಹೊ, ಆಗಿದೆ ಆಗಿದೆ ಬೆಳಗ್ಗಿನ ಆಹ್ನೀಕಗ್ಳೆಲ್ಲಾ ತೀರಿಸ್ಕೊಳ್ದೆ ಹೊರಗ್ಹೊರ್ಡೋ ಪದ್ಧತೀನೇ ಇಲ್ಲ....ಆದ್ರೂ ಕಾಫಿ.... ಬೇಡ....ತಮುಗ್ಯಾಕೆ ತೊಂದ್ರೆ....

ಸೀತ :— ಅಯ್ಯೋ ತೊಂದ್ರೆ ಏನು ... ಬಂದೆ (ನಿಷ್ಕ್ರಮಿಸುವಳು)

ರಾ.ರಾ :— ಏನಪ್ಪಾ, ಜೋಯಿಸ್ರೇ, ಆ ವೈಸೂರಿನ ವರನಕಥೆ ಏನಾಯ್ತು? ನನ್ಹೆಂಡ್ತಿ ಅಂತೂ ನನ್ನ ಪ್ರಾಣ ತೆಗೀತಾ ಇದಾಳಲ್ಲ ಸುಮ್ನೆ.

ಪು.ಜೋ:— ಅದೇ ವಿಷಯ ಹೇಳೋಣಾಂತ್ಲೇ ಬಂದೆ, ರಾವ್ ಸಾಹೇಬ್ರೇ........

ಸೀತ:— (ಪ್ರವೇಶಿಸಿ) ಜೋಯಿಸ್ರೇ....

ರಾ.ರಾ:— ಎಲ್ಲೇ ಕಾಫಿ?

ಸೀತ:— ಬರುತ್ತೆ, ಭಯಪಡ್ಬೇಡಿ. ಬಿಸೀಗಿಟ್ಟಿದೆ. ಜೋಯಿಸ್ರೆ, ಆ ವೈಸೂರಿನವರ—

ಪು.ಜೋ:— ನಾನೂ ಅದೇ ಮಾತನ್ನ ತಿಳ್ಸೋಕೇ ಬಂದೆ ಅಮ್ಮ ಈಗವನು ೧೨ ಘಂಟೆ ಗಾಡೀಗ್ಬರ್ತಾನಂತೆ. ಕರ್ಕೊಂಡ್ಬರ್ತೇನೆ ಅವನ್ಬಂದು ಒಪ್ಬಿಟ್ರೇ........

ಸೀತ:— ಅದೇನ್ ಒಪ್ತಾನೋ ಏನೋ! ನಿಮ್ಮ ಸಹಾಯದಿಂದ ಏನಾದ್ರಾದ್ರಾಗ್ಬೇಕು.

ಪು.ಜೋ :— ಅಯ್ಯೋ, ನಮ್ಮ ಸಹಾಯ ಏನಮ್ಮ ಇದೆ? ಕಾಲ ಒದಗಿ ಬರ್ಬೇಕು, ಕಂಕಣ ಬಲ ಕೂಡ್ಬರ್ಬೇಕು, ಆಗ್ಬೇಕೇ ವಿನಹ, ಅಲ್ಲೀ ವರ್ಗೂ ನಾವ್ನಾವೆಷ್ಟು ವದ್ಯಾಡ್ಕೊಂಡ್ರೂ ಏನೂ ಪ್ರಯೋಜನವಾಗೋಲ್ಲ. ಹಿಂದೆ, ನನ್ನ ಚಿಕ್ಕಂದ್ನಲ್ಲಿ, ನಡೆದಿದ್ದೇಳ್ತೀನೆ. ನಮ್ಮ ಮಗ್ಗುಲು ಮನೇದೇ ಕನ್ನೆ. ದೇಶವೆಲ್ಲಾ ಅಲ್ದಾಡ್ಬಿಟ್ರು ವರಂಗೆ. ನಮ್ಮ ತಂದೆ ತಾಯೀನೂ, ಅವರ ಕಷ್ಟ ನೋಡ್ಲಾರ್ದೆ ತಮಗೆ ತಿಳಿದ್ದೋರ್ನೆಲ್ಲಾ ಹೇಳಿದ್ರು. ಊಹೂ.... ಒಂದಿವ್ಸ ರಾತ್ರಿ, ಇದ್ದಕ್ಕಿದ್ದಾಗೇ, ಅರ್ಧ ರಾತ್ರಿ, ಆ ಕನ್ಯೆ ತಂದೆ ಬಾಗಿಲು ಧಬಾ ಧಬಾ ಬಡಿದ್ರು. ನಮ್ಮ ತಂದೇನೂ ಎದ್ದು ಹೊರಗ್ಹೊರಡ್ಬೇಕೂಂತಿದ್ರು. ಬಾಗಿಲು ತೆಗೆದ್ರು. ಒಳಗ್ಬರ್ತಾ, ''ಏನ್ರೀ ಅನ್ಯಾಯ

ಇದು ರಾಮಾಜೋಯಿಸ್ರೇ, ನಿಮ್ಹುಡುಗನ್ಗೇ ಯಾಕ್ಮಾಡ್ಕೋಬಾರದ್ರೀ ನಮ್ಮ ಮಗೂನಾ?" ಅಂದ್ರು. "ಭೇಷ್, ಶಾಸ್ತ್ರಿಗ್ಳೇ, ನನ್ಗೂ ಈಗದೇ ಯೋಚ್ನೆ ಬಂತು, ನಿಮಗ್ಯಾಕಿಷ್ಟು ದಿವಸ ಹೊಳೀಲಿಲ್ಲ" ಅಂತ್ಕೇಳ್ಬೇಕೂಂತ ನಾನೂ ಹೊರ್ಟಿದ್ದೆ, ನೀವ್ಬಾಗಿಲ್ಬಡಿದ್ರಿ; ಅಂತಂದ್ರು, ನಮ್ತಂದೆ. ಮೂರೇ ದಿನ್ಸ. ಆಗೇ ಹೋಯ್ತು ...ನಮ್ಮ ಲಗ್ನ. ಹಾಗೇ, ಅದೆಲ್ಲಾ ಈಶ್ವರ ವ್ಯಾಪಾರ.

ಸೀತ:— ಅಂಥಾ ಅದೃಷ್ಟ ನಾವ್ಕೇಳ್ಕೊಂಡ್ಬಂದಿರ್ಬೇಕಲ್ಲ!

ಪು ಜೋ:— ಪ್ಚ ಪ್ಚ....ನಿಜ....ನಿಜ. ಆ ಕನ್ನಂಬಾಡಿ ಕೃಷ್ಣ ಶಾಸ್ತ್ರಿಗ್ಳ ಕುಮಾರಂದು, ಜಾತ್ಕ....

ರಾ.ರಾ:— ಹಾ ಹಾ, ಅವರೂರಿಗ್ಹೋಗಿ ಉತ್ತರ ಬರೀತೀವೆ ಅಂದಿದ್ರಲ್ಲ—?

ಪು.ಜೋ:— ಬರೆದಿದಾರೆ.... ಆದ್ರೇನುಪ್ಯೋಗ....?

ರಾ.ರಾ:— ಏನಂತೆ? ಒಪ್ಪಿರೋಲ್ಲ ಅನ್ನೋದಂತೂ ಕಂಡ್ಹಾಗೇ ಇರುತ್ತೆ.

ಪು.ಜೋ:— ನೋಡಿದ್ರಾ. ಅಲ್ದೆ, ಬರೀತಾರೇ, 'ಕಿರಿ ಹುಡ್ಗೀನ್ಕೊಡೋದಾದ್ರೆ ಕೇಳಿ, ಆ ದೊಡ್ಹುಡ್ಗೀಗೆ ದೊಡ್ನಮಸ್ಕಾರ' ಅಂತ. ಹಾಗೇ ಆ ಬೆಳಗೊಳದ ಭಗವಂತ್ರಾಯ್ರು—

ರಾ.ರಾ:— ಹು, ಹು?

ಪು.ಜೋ:— ಅವರೂ ಅಷ್ಟೆ. 'ಶಾಂತೂನಾದ್ರೆ ನಾವು ಒಪ್ಗೋತೀವೆ, ಸರೋಜನ ಸಹವಾಸಕ್ಸಾವಿರ ನಮಸ್ಕಾರಗ್ಳು' ಅಂತ್ಹೇಳ್ಕಳ್ಸಿದಾರೆ. ನಾನೂ ಅವರ್ಕಡ್ಯೇರ್ಗೆ ಎಷ್ಟೋ ಹೇಳ್ದೆ, 'ಒಳ್ಳೆ ಸಂಬಂಧ, ನೋಡಿ, ಕಳ್ಕೋಬಾರ್ದು' ಅಂತ; 'ಸರೋಜನ್ಗೂ ಫರವಾಗಿಲ್ಲ. ಈಗೇನೋ ಚಿಕ್ವಯಸ್ಸು, ಹಟ, ಮೊಂಡ್ತನ, ಜಂಭ ಇವೆ ಮದ್ವೆ ಆಗಿ ಮನೆ ಮಕ್ಳು ಅಂತಂದ್ರೆ ಸರ್ಹೋಗುತ್ತೆ' ಅಂತ. ಊಹೂ 'ನಮ್ಗೆ ಸೊಸೇರೇ ಇಲ್ದೆ ಹೋದ್ರೂ ಚಿಂತಿಲ್ಲ, ಆ ಸರೋಜ ಮಾತ್ರ ನಮ್ಗೆ ಬೇಡ' ಅಂತಂತಾರಲ್ಲ. ನಾನೇನ್ಮಾಡ್ಲಿ?

ರಾ.ರಾ:— ಏನೇ? ಕೇಳಿದ್ಯೇನೇ, ಕನ್ನಂಬಾಡಿ ಬೆಳ್ಗ್ಗೊಳಾನೆಲ್ಲಾ ಬಳಸ್ಕೊಂಡ್ಕೊಂಡ್ಬಿಟ್ಟಿದೆಯಲ್ಲೇ, ಈ ಸರೋಜಳ ಸುಗುಣಗ್ಳು! ದೇವ್ರೇ ಗತಿ. ಮುಖ್ಯವಾಗಿ, ಜೋಯಿಸ್ರೇ, ನಾವವರ್ನ ತಾನೇ ಏನನ್ನೋ ಹಾಗಿದೇವೆ, ಇವ್ಳಿಲಕ್ಷಣ ಇರ್ಬೇಕಾದ್ರೆ ಇದುವರೆಗೆ ನೀವ್ಕಂಡಾಗ್ಲೇ ಇಪ್ಪತ್ತಿಪ್ಪತ್ತೈದು ವರಗಳು ಬಂದ್ವಲ್ಲಾ, ಒಂದೊಂದು ಸಾರ್ತೀನೂ ಇವಳ ಪ್ರತಾಪ ಒಂದೊಂದ್ರೀತಿ. ಈ ಕನ್ನಂಬಾಡಿಯೋರ್ನ್ನೇ ತೊಗೊಳ್ಳಿ. 'ಬೇಡ' ಅಂತ್ಹೇ ಳ್ಕಳ್ಸಿದ್ರೂಂದ್ರೆ, ಇನ್ನೇನ್ಹೇಳ್ಕಳಿಸಾರವ್ರು? 'ಒಂದ್ಹಾಡ್ಹೇಳಮ್ಮ' ಅಂತ ಆಕೆ ಅಂದ್ರೆ, 'ಗಿಣಿಯ ಪಂಜರದೊಳಿಟ್ಟ್ವೆ' ಪ್ರಾರಂಭ ಮಾಡ್ಬಿಟ್ಳಲ್ಲಾ....

ಸೀತ:— ನನ್ಗೆಷ್ಟು ಅವಮಾನವಾಗ್ಹೋಯ್ತು, ಜೋಯಿಸ್ರೇ! ಸಾವಿರ್ಗಟ್ಲೆ ರೂಪಾಯಿ ಸುರಿದು ಸಂಗೀತ ಹೇಳ್ಸಿದ್ವು. ಕಲಿತ್ಕೊಂಡ್ಳು, ಆದ್ರೆ ಮಾಡಿದ್ಳೋಡಿ.

ಪು.ಜೋ:— ಏನ್ಮಾಡೋದಮ್ಮಾ, ಗ್ರಹಚಾರಾ.

ರಾ.ರಾ:— (ಸೀತಾಗೆ) ಏನೇ, ಎಲ್ಲೇ, 'ಕಾಫಿ ಬಿಸೀಗಿಟ್ಟಿದೇನೆ' ಅಂತಂದು ಸುಮ್ನೆ ನಿಂತ್ಬಿಟ್ಟಲ್ಲೇ? ಖೋವ ಗೀವ ಆಗ್ಹೋಗ್ಬಿಟ್ಟೀತು ನೋಡು.

ಸೀತ:— ಅಯ್ಯೋ, ಮರ್ತ್ಹೇ ಹೋಗಿದ್ದೆ, (ನಾಲ್ಕು ಹೆಜ್ಜೆ ಹೋಗಿ) ಶಾಂತೂ!

ಶಾಂತು: (ಪ್ರವೇಶಿಸಿ) ಅಮ್ಮಾ?

ಸೀತ:— ಕಾಫಿ ಬಿಸೀಗಿಟ್ಟಿತ್ತು ಒಳ್ಗೆ, ಜೋಯಿಸ್ರಿಗೆ, ತಂದ್ಬಿಡಮ್ಮಾ. (ಶಾಂತು ಹೋಗುತ್ತಿರಲು)

ರಾ.ರಾ:—ಶಾಂತೂ, ಹಾಗೇ ನನ್ಗೂ ಒಂದ್ಲೋಟ....ಹಹಹಹ.

ಪು.ಜೋ:— ಏನಮ್ಮ ಶಾಂತೂ, ಎಲ್ಲಿ ನಿಮ್ಮಕ್ಕ?

ರಾ.ರಾ:— ಅಯ್ಯೋ, ಎಲ್ಲೋ ಹಾಳಾಗ್ಹೋಗಿದಾಳೆ, ಬೆಳ್ಗ್ಗೆದ್ದು ಒಂದ್ ಧೋಡ್ ರಂಪ ಮಾಡಿ. (ಶಾಂತೂಗೆ) ಹೋಗಮ್ಮ.

ಪು.ಜೋ:— ಪಾಪ, ಮದ್ವೆಹುಡ್ಗೀ ಕೈಲಿ ಕೆಲ್ಸ ಮಾಡ್ಸೋ ಹಾಗಾಯ್ತೇ.

ಶಾಂತು :— ಹೋಗ್ರೀ, ಅದೆ. (ಒಳಗೋಡುವಳು)

ಪು. ಜೋ :— ಒಳ್ಳೆ ಹುಡ್ಗಿ, ಒಳ್ಳೇ ಹುಡ್ಗಿ ದೊಡ್ಡವ್ರು ಅಂತಂದ್ರೆ ಎಷ್ಟು ಮರ್ಯಾದೆ, ಗಂಭೀರ! ಕಾಲೇಜುಗ್ಳಲ್ಲಿ ಓದಿದ್ರೂನೂ ಹೀಗಿರ್ಬೇಕು ನೋಡಿ. ಬೈತಲೆ ಸೊಟ್ಟಗೆ ತೆಗ್ಕೊಂಡಿದ್ರೂ ಬುದ್ಧಿ ನೆಟ್ಗೇ ಇಟ್ಕೊಂಡಿದಾಳ್ನೋಡಿ. ಅದೇ ಬೇಕಾದ್ದು. ಅದಕ್ಕೇ ಶಾಂತು ಅಂದ್ರೆ ನಾನು ತಾನು ಅಂತ.

ಸೀತ :— ನಮ್ಮ ಶಾಂತೂದೇನೂ ಯೋಚ್ನೇನೇ ಇಲ್ಲಾಂದ್ರೆ. ಎಲ್ಲಾ ಆ ಪಿಶಾಚೀದೇ.

ಸರೋಜ :— (ನೇಪಥ್ಯದಲ್ಲಿ ಸೇವಕನಿಗೆ) ನಡ್ಯೋ ಆಚ್ಗೆ, ಗೂಬೆ, ದಾರೀಲ್ನಿಂತಿದಾನೆ.

ಸೀತ :— (ಬಾಗಿಲು ಕಡೆ ನೋಡುತ್ತಾ) ಅಗೋ, ಬಂತೂಂತ್ಕಾಣುತ್ತೆ.
(ಸರೋಜ ಪ್ರವೇಶಿಸಿ ತನ್ನ ಕೋಣೆ ಕಡೆಗೆ ಹೋಗುತ್ತಿರಲು)

ಪು. ಜೋ :— ಏನಮ್ಮ, ಸರೋಜ, ವಾಕಿಂಗಾಯ್ತೋ?

ಸರೋಜ :— .......................ಆ?

ಪು. ಜೋ :— ಹಹಹಹ, ವಾಕಿಂಗು....ಆಯ್ತೋ ಅಂತ, ಕೇಳ್ದೆ.....

ಸರೋಜ :— ನಿಮ್ಗೇನದನ್ನೆಲ್ಲಾ ಕಟ್ಕೊಂಡೂಂತ್ಹೇಳ್ದೆ. ಬಂದ್ಕೆಲ್ಸ ನೋಡ್ಕೊಂಡ್ಮುಂದಕ್ಹೋಗ್ಬನ್ನಿ.

ಸೀತ:— ಸರೋಜ!

ಸರೋಜ :— (ತಾಯಿಯ ಕಡೆಗೆ ಲಕ್ಷ್ಯ ಕೊಡದೆ) ಎಲ್ಲಿ ನಿಮ್ಮ ವರಗ್ಳ ಪರಿವಾರಗ್ಳು? ಇವತ್ಯಾರೂ ಸಿಗ್ಲಿಲ್ವೋ, ಕರ್ಕೊಂಡ್ಬಂದ್ನಮ್ಮನ್ನ ತೋರ್ಸೋಕೇ?

ಸೀತ :— ಸರೋಜ, ಹಾಗೆಲ್ಲಾ ಅನ್ಬಾರ್ದಮ್ಮ ದೊಡ್ಡವರ್ನ.

ಸರೋಜ :— ದೊಡ್ಡವ್ರಾದ್ರೆ ನೀನ್ನಮಸ್ಕಾರ ಮಾಡು, ನಂಗೇನಿಲ್ಲ. (ತಂದೆಯ ಕಡೆ ತಿರುಗಿ) ಇಲ್ನೋಡಪ್ಪ, ಇನ್ಮೇಲೆ ಅವರಿವರಿಲ್ಲಿ ಬಂದ್ರೂಂತಂದ್ರೆ ನಾನ್ಸುಮ್ನಿರೋದಿಲ್ಲ. ನನ್ಯಾರೂ ನೋಡ್ಬೇಕಾದ್ದಿಲ್ಲ. ನಾನೂ ಯಾರನ್ನೂ ನೋಡೋದೂ ಇಲ್ಲ.

ಪು.ಜೋ:— ಅದ್ಸರಿಯಮ್ಮ. ನೀನ್ಬೇಡ, ನೋಡ್ಬೇಕಾದ್ದಿಲ್ಲ ಅಂತಂದ್ರೂನೂ, ಮದ್ವೇಂದ್ರೆ ಮನೆ ಮನೆಯೋರೂ, ಒಬ್ಬಗ್ನೊಬ್ರು, ನೋಡೀ, ಒಪ್ಪೀ,........

ಸರೋಜ:— ನೀವೂ ...ಸುಮ್ನೇ..ಕೂತ್ಕೊಳ್ಳೀ..ನಿಮ್ಮನ್ಮಾತಾಡಿಸ್ಲಿಲ್ಲ ನಾನು. (ಶಾಂತು ಕಾಫಿ ತರಲು, ನುಗ್ಗಿ ಅವಳ ರಟ್ಟೆ ಹಿಡಿದು ಎಳೆತರುತ್ತಾ) **ಇಗೋ** ಇವಳ್ನ ಬೇಕಾದ್ರೆ ಎಲ್ಲಾ ಕಡೇಲೂ ಮೆರವಣಿಗೆ ಮಾಡ್ಕೊಂಡ್ಬನ್ನಿ, **ಹುಡುಗಿ** ಮದ್ವೇಗಿದಾಳೇಂತ. **ನಾನು** ಯಾರನ್ನೂ ನೋಡೋಲ್ಲ. ನನ್ನ ಯಾರೂ ನೋಡ್ಬೇಕಾದ್ದೂ ಇಲ್ಲ. ನೀವ್ಹೇಳಿದ ಮನೆ ಮನೆಯೋರ್ಬೇಕಾದ್ರೆ **ಒಬ್ರ ಮುಖಕ್ಕೊಬ್ರು ದುರ್ಬೀನ್ಹಾಕ್ಕೊಂಡ್ನೋಡ್ಕೊಳ್ಳಿ.** ನಾನ್ಮೇಲ್ಹೋಗ್ತೀನೆ, ಆದ್ಯಾವೋನಿಗೆ ಧೈರ್ಯವಿದ್ಯೋ ಮಾಡ್ಕೊಳ್ಳಿ, ಆಮೇಲ್ಹೋಗ್ತೀನೆ, **ನಾನು.** (ತನ್ನ ಕೋಣೆಗೆ ಹೋಗಿ ಬಾಗಿಲು ಹಾಕಿಕೊಳ್ಳುವಳು)

ಸೀತ:— (ಶಾಂತು ಕೈಯಿಂದ ಕಾಫಿ ಲೋಟಗಳನ್ನು ತೆಗೆದುಕೊಳ್ಳುತ್ತಾ) ಹೋಗ್ಲಿ, ಸುಮ್ನಿರಮ್ಮ, ಶಾಂತು. ಆ ಶನಿ ಹಣೇಬರಹವೇ ಇಷ್ಟಾಯ್ತು.

ಪು.ಜೋ:— ಶಂಭೋ ಶಂಕರ! ರಾವ್ ಸಾಹೇಬ್ರೇ, ಕಷ್ಟ, ಕಷ್ಟಾ! ಬಹಳ ಕಷ್ಟಾ!!

ಸೀತ:— ನೀವೇನೂ ತಿಳ್ಕೋಬೇಡಿ, ಜೋಯಿಸ್ರೇ. ನಿಮ್ಗೇನೂ ಹೊಸ್ದಲ್ಲ ಇವಳ್ಗುಣ ಗೊತ್ತೇ ಇದೆ.

ಪು.ಜೋ:— ಗೊತ್ತಿದ್ಯಮ್ಮಾ ಗೊತ್ತಿದೆ. ಆದ್ರೆ ಈಗ ಹೊಸ್ದಾಗಿ ಮೈಸೂರ್ನಿಂದ ಬರ್ತಾನಲ್ಲ, ಅವನ್ನ ನಾನಿಲ್ಲೀಗೆ ಕರ್ಕೊಂಡ್ಬಂದ್ರೆ ಗತಿ ಏನೂಂತ?

ರಾ.ರಾ:— ಹೋಗ್ಲಿ. ಹೋಗ್ಲಿ. ಹಾಳಾಗ್ಹೋಗ್ಲಿ. ಇವಳ್ಹೀಗೇ ನಾಶವಾಗ್ಹೋಗ್ಲಿ. ಸತ್ಹೋಗ್ಲಿ. ನನ್ಗಂತೂ ತಲೆ ಚಿಟ್ಹಿಡ್ಹೋಗಿದೆ. ಈಗವನ್ಬಂದ್ರೆ, ಶಾಂತೂಗೇ ಗೊತ್ಮಾಡ್ಬಿಡೋಣ, ಅಷ್ಟೆ. ಅವ್ರಾದ್ರೂ ಸುಖವಾಗಿರ್ಲಿ.

ಸೀತ:— ಅದ್ಹ್ಯಾಗಾಗುತ್ತೇಂದ್ರೇ? ಸರೋಜನ್ಮದ್ವೆ ಆಗದೆ—

ಪು.ಜೋ:— ನಿಜ, ನಿಜ, ರಾವ್ ಸಾಹೇಬ್ರೇ. ದೊಡ್ಡವ್ಳ ಮದ್ವೇಗ್ಮುಂಚೆ ಚಿಕ್ಕವ್ಳಿಗೆ ಮದ್ವೆ ಮಾಡ್ಬಿಟ್ರೆ....ಈಗ್ಲೇ ಇಷ್ಟು ಚೆಂದ, ಇನ್ನಾಮೇಲೆ ಜನಗಳಿಗೆ ಇಲ್ಲದಸುಮಾನಗಳು ಬಂದು, ಅವಳ ಮದ್ವೆ ಸಾಧ್ಯವಾಗ್ದೇನೇ ಹೋಗ್ಬಿಡುತ್ತೆ.

ರಾ.ರಾ:— ಮತ್ತೇನ್ಮಾಡೂಂತೀರಿ? ನನ್ಗಂತೂ ಒಂದೂ ತೋರೋದಿಲ್ಲ. ಜೋಯಿಸ್ರೇ, ನೀವೇ ಇದಕ್ಕೇನಾದ್ರೂ ಏರ್ಪಾಟ್ಮಾಡಿ. ನಿಮ್ಮ ಕೈಗೇ ಬಿಟ್ಬಿಟ್ಟಿದೇನೆ. ಯಾವ್ದಾದ್ರೂ ಒಂದು ಶನೀನ ತಂದ್ ಗಂಟ್ಹಾಕ್ಬಿಡಿ ಈ ಹಾಳ್ ಪ್ರಾರಬ್ಧಕ್ಕೆ. ನನ್ನ ಮುಕ್ಕಾಲಾಸ್ತೀನ್ಬೇಕಾದ್ರೂ ಬರ್ಕೊಟ್ಬಿಡೋಕೆ ಸಿದ್ಧವಾಗಿದೇನೆ, ಈ ಮಾರೀನ್ಮದ್ವೆ ಮಾಡ್ಕೊಳ್ಳೋ ಮುಠ್ಠಾಳನಿಗೆ, ವರದಕ್ಷಿಣೆ ಅಂತ!

ಪು.ಜೋ:— .... .............. ರಾವ್ ಸಾಹೇಬ್ರೇ, ಎಷ್ಟೆ. ನೀವಿನ್ನಾ ಯೋಚ್ನೆ ಬಿಟ್ಬಿಡಿ. ಪುಟ್ಟಾಜೋಯಿಸ ಮನಸ್ಮಾಡ್ದ ಅಂತಂದ್ಮೇಲೆ....ಅದ್ಹೇಳಿ ಪ್ರಯೋಜನವಿಲ್ಲ, ಬಾಯ್ಲಿ. ಸೀತಮ್ನೋರೇ, ಆ ಸರೋಜಂದು ಒಂದು ಫೋಟೋ ಇದ್ರೆ ಕೊಡೀ.

ರಾ.ರಾ — ನೋಡೇ (ಹಿಂಭಾಗದ ಮೇಜಿನ ಮೇಲಿರುವ ಫೋಟೋ ತೋರುತ್ತಾ) ಅಗೋ ಅದನ್ನೇ ಕೊಡೇ, ಚೆನ್ನಾಗಿದೆ.

ಸೀತ:— (ತಂದು ಜೋಯಿಸರಿಗೆ ಕೊಡುತ್ತಾ) ನೀವು ಸ್ವಲ್ಪ ಮನಸ್ಮಾಡಿದ್ರೆ.........

ಪು.ಜೋ.— ಮಾಡ್ಬಿಟ್ಟೇನಮ್ಮ, ಆಗ್ಹೋಯ್ತು. ಇವ್ಳು ತಾನು ಯಾರನ್ನೂ ನೋಡೋಲ್ಲ, ತನ್ನೂ ಯಾರೂ ನೋಡ್ಬೇಕಾದ್ದೂ ಇಲ್ಲ ಅಂತ್ಹೇಳಿದಾಳಲ್ವೇ, ಆಗಲಿ. ಕಲಿಸ್ಲೇಬೇಕು ಬುದ್ಧೀನ. "ಯಾಕಂದೇ" ಅಂತನ್ನಿಸ್ದೆ ಹೋದ್ರೆ, ಯಾಕೆ?........ ನಾ ಬರ್ತೀನೆ, ರಾವ್ ಸಾಹೇಬ್ರೇ. ನಾ ಬರ್ತೇನಮ್ಮ. ಆ ಮೈಸೂರ್ನೋನು ಬಂದ್ರೆ, ಹೇಳ್ಕಳಿಸ್ತೇನೆ.

ರಾ.ರಾ; ಸೀತ:— ಒಳ್ಳೇದು. ಒಳ್ಳೇದು

ಪು.ಜೋ:—(ಅಷ್ಟು ದೂರ ಹೋಗಿ ಹಿಂತಿರುಗಿ) ಅಂದ್ಹಾಗೇ........ ಆ.... ಇದೂ....

ರಾ.ರಾ :— ಯಾವ್ದು ?

ಪು.ಜೋ :—ಅದೆ...ವರದಕ್ಷಿಣೆ, ತಾವ್ಹೇಳಿದ್ರಲ್ಲ, ಮುಕ್ಕಾಲಾಸ್ತಿಅಂತ ?

ರಾ.ರಾ :— ಹೂ, ಹೂ ?

ಪು.ಜೋ :—ಅದೇ, ಸಮಯ ಬಂದ್ರೆ....ಪ್ರಸ್ತಾಪ ಮಾಡ್ಬಹುದಲ್ಲಾ ?

ರಾ.ರಾ :— ಓಹೋ, ಧೈರ್ಯವಾಗ್ಮಾಡಿ.... ಆಂ.... (ಹೆಂಡತಿಗೆ) ಏನೇ ?—

ಸೀತ :— ಮಾಡಲಿ.

ರಾ.ರಾ :—(ಜೋಯಿಸರಿಗೆ) ಹೋ ಹೋ ಹೋ, ಧೈ ಧೈ ಧೈರ್ಯ ವಾಗ್ಮಾಡಿ.

— ತೆರೆ —

## ದೃಶ್ಯ ೨.

(ಬೀದಿ, ಪುಟ್ಟಾಜೋಯಿಸರೂ, ಭೀಮೂ ಸಂಧಿಸುವರು)

ಭೀಮು :— ಓಹೊಹೊಹೊಹೊ, ಪುಟ್ಟಾಜೋಯಿಸ್ರೇ ! ನಮಸ್ಕಾರ. ಜ್ಞಾಪಕವಿದೆಯೆ ?

ಪು.ಜೋ :— ...............ಅಲೆಲೆಲೆಲೆ, ಯಾರ್ ನಮ್ಮ ಭೀಮು ಅಲ್ವೇನೋ ? !........

ಭೀಮು :— ಹಹಹಹ. ಗುರ್ತು ಹಿಡಿದ್ಬಿಟ್ರಲ್ಲ ! ಭೇಷ್.

ಪು.ಜೋ :— ಎಷ್ಟು ದಿವಸ ಆಗ್ಹೋಗಿತ್ತು ! ಎಷ್ಟು ಎತ್ತರ ಬೆಳೆದ್ಬಿಟ್ಟದ್ದಿ ! ಅಲ್ಲಾ ಅದೇನೀಗ ಇದ್ದಕ್ಕಿದ್ಹಾಗೆ, ಇಲ್ಲೀಗ್ಬಂದಿದ್ದು ? ಎಲ್ಹೋಗಿದ್ದೆ, ಎಲ್ಲಿಂದ್ಬಂದೆ, ಯಾವಾಗ್ಬಂದೆ, ಏನ್ಸಮಾಚಾರ ?...........

ಭೀಮು:— ಏನಿಲ್ಲ, ಕೂತ್ಕೊಂಡು ಬೇಜಾರಾಯ್ತು. ಸಣ್ಣಗೊಂದು tour ಹೊಡ್ಕೊಂಡ್ಬರೋಣ ಅನ್ನಿಸ್ತು. ಹೊರಟೆ. ಎಲ್ಲಾ ಮುಗಿಸ್ಕೊಂಡು ನಿನ್ನೆ ಮದ್ರಾಸ್ ಬಿಟ್ಟೆ. ಬೆಳಿಗ್ಗೆ ತಾನೇ ಇಲ್ಲಿಳಿದೆ.

ಪು. ಜೋ :—ಎಲ್ಲಿಳ್ಕೊಂಡಿದ್ದಿ ? ಹೋಟಲ್ನಾನ? ನಂಗೊತ್ತು. ನಾವ್ ಬಡವರು, ನಮ್ಮ ಮನೆಗ್ಳು ನಿನಗೆ ಹ್ಯಾಗೆ ಸರ್ಹ್ಹೋಗುತ್ವೆ ?

ಭೀಮು :— ಛೆ ಛೆ ಛೆ, ಎಲ್ಲಾದ್ರೂ ಉಂಟೆ? ಆ ತರಹ ನೀವ್ ತಿಳ್ಕೊಳ್ಳೇಬೇಡಿ. ಇವತ್ರಾತ್ರೀನೇ ಇಲ್ಲಿಂದ ಹೊರಟ್ಬಿಡ್ಬೇಕೂಂತ ಸಾಮಾನೆಲ್ಲಾ Stationನಲ್ಲೇ ಇಟ್ಟಿದೇನೆ. ಇಲ್ಲೇ ಇರೋ ಹಾಗಿದ್ರೆ, ನಿಮ್ಮನೇಲಲ್ದೆ ಇನ್ನೆಲ್ಹೋಗ್ತಾ ಇದ್ದೆ ಠಿಕಾಣೀನ?

ಪು. ಜೋ :— ಆಹಹಹಹಹ, ಬಾಯಿಂದ್ಲಾದ್ರೂ ಹೇಳ್ತೀಯಲ್ಲ ಉಪಚಾರಾನ. ಅದೇನಷ್ಟು ಅವಸರವಾಗಿ ಹೊರಟ್ಬಿಡ್ಬೇಕು ಅನ್ನೋದು? ಬರೋನ್ ಬಂದಿದ್ದಿ, ಬೆಂಗ್ಳೂರು, ಒಂದೆರಡ್ದಿನ ಇದ್ದು........

ಭೀಮು :— ಇರಬಹುದಾಗಿತ್ತು. ಆದ್ರೀಗ ಸಾಧ್ಯವಿಲ್ಲ ಮನೆ ಬಿಟ್ಟು ತಿಂಗಳ್ಮೇಲಾಯ್ತು. ಬೆಳೆ ಕಾಲ. ಯಾರಿಲ್ಲ ಅಲ್ಲಿ.

ಪು. ಜೋ :— ಹೌದಪ್ಪಾ. ಅದೇನೋ ದಿಟ್ವೆ. ಹುಷಾರಾಗಿರ್ಬೇಕು. ಮೋಸದ್ಕಾಲ. ಕಣ್ಣೆದುರ್ಗಿದ್ರೇ ಮಣ್ಣೆರಚ್ತಾರೆ. ಎಲ್ಲಾ ಸ್ವಂತಾ ತಾನೇ ನೋಡ್ಕೋತಾ ಇದ್ದಿ ? ಇಲ್ಲಾ ಕೆಲಸಕ್ಸೇರ್ಬಿಟ್ಟಿದ್ದೀಯೋ ಜಮೀನ್ನ ಗುತ್ಗೇಗ್ಕೊಟ್ಟು ?

ಭೀಮು :— ಊಹು— ಕೈಲಿರೋ ಲಕ್ಷ್ಮೀನ ಕಂಡೋರ್ಗೆ ಗುತ್ಗೆ ಕೊಟ್ಟು, ಕೆಲ್ಸಕ್ಸೇರಿ ಆ ಬಿಡ್ಗಾಸಿನ ಬಾಯ್ತಾಂಬೂಲಕ್ಕೆ ಯಾಕೆ ಅಂಗ್ಲಾಚ್ಲಿ ? ಇರೋ ಸ್ವರಾಜ್ಯದಲ್ಲಿ ಸುಖವಾಗಿರೋದ್ಬಿಟ್ಟು 'ಸದಾ ನಿನ್ನ ಸೇವಕ' ಅಂತ ಬರ್ಕೊಳ್ಳೋದನ್ನ ಬಯಸ್ತಾನ್ಯೇ ಬುದ್ಧಿವಂತ? ನಾನ್ಕೆಲ್ಸಕ್ಸೇರಿಲ್ಲ, ಸೇರೋಲ್ಲ, ಸೇರ್ಬೇಕಾದ ಪ್ರಮೇಯವೂ ಇಲ್ಲ. ದೇವರ ದಯದಿಂದ ನಮ್ಮಪ್ಪ ನನಗಷ್ಟುಪಕಾರ ಮಾಡ್ಹೋಗಿದಾರೆ. ಅವರ್ಬಿಟ್ಹೋಗಿ

ರೋದನ್ನ ನೆಟ್ಗೆಟ್ಕೊಂಡ್ರೆ, ನಾಲಕ್ಸಂಸಾರ ದಾಟಸ್ಬಹ್ದು, ಜೋಯಿಸ್ರೇ. ಇನ್ನೀ ಒಂಟಿ ಪಿಶಾಚೀಗೆ ಯಾಕೆ ತಾಪತ್ರಯ ?

ಪು. ಜೋ :— ಭೀಮು........ಭೀಮು........ ತಡಿ. ತಡಿ............ ನನ್ಗೆ ಲೇಗಿಷ್ಟಾಗ್ತಿಕ್ತು. ಹೊಳೀಲೇಬೇಡ್ವೆ?........ ಭೀಮು, ನಿಮ್ದು ವಸಿಷ್ಟ ಗೋತ್ರ ಅಲ್ವೇನೋ ?

ಭೀಮು :— ಹೌದು.

ಪು. ಜೋ :— (ಸ್ವಗತದಂತೆ) ಹಾ. ನಂಗೊತ್ತು....ಅಷ್ಟು ಜ್ಞಾಪಕವಿಲ್ವೇ? ...........ಇವಂದು ವಸಿಷ್ಠ ಗೋತ್ರ, ಅವರ್ದು ಭಾರದ್ವಾಜ....ಆ....ಊ....

ಭೀಮು :— ಏನ್ ಜೋಯಿಸ್ರೇ, 'ಆ ಊ' ಅಂತ ನಿಮ್ಮಷ್ಟಕ್ಕೇವೇ ಗೋತ್ರಗಳ್ನ ಗುಣಿಸೋಕೆ ಪ್ರಾರಂಭಿಸ್ಬಿಟ್ರಲ್ಲಾ? ಯಾರ್ದೋ ಮನೇಲಿ ಒಂದ್ಹೆಣ್ಣು ಜಾಸ್ತಿ ಇದೆ, ನಮ್ಮನೇಲಿ ಒಂದು ಜಾಗ ಖಾಲಿ ಇದೆ, ತಕಡಿ ಸರಿ ಮಾಡ್ಬಿಡೋಣ ಅಂತ್ಲೋ? ಅಂತೂ ತೆಗೆದ್ರಲ್ಲಾ ನಿಮ್ಮ ಕೈವಾಡಾನಾ ?

ಪು. ಜೋ :— ಹಹಹಹ. ಬಿಡೋಕಾಗುತ್ತೇನೋ ಭೀಮೂ? ನಿನ್ನ ಊಹೆ ಸರಿ. ಇನ್ಮೇಲೆ ನೀನು **ಒಂಟಿ ಪಿಶಾಚಿಯಾಗಿರ್ಬೇಕಾದ್ದಿಲ್ಲ !**

ಭೀಮು :— ಯಾಕೆ? ನನ್ನ ಜೊತೇಗೆ ಇನ್ನೊಂದು ಪಿಶಾಚೀನೇ ನಾದ್ರೂ ದಯಪಾಲಿಸ್ತೀರೇನು ?

ಪು. ಜೋ :— ಉಹುಹುಹು. ಪಿಶಾಚಿಯೇನೂ ಇಲ್ದೆ ಇಲ್ಲ. ಇದೆ. ಆದ್ರೆ ಅದಕ್ಬೇರೆ ಯೋಚ್ನೆ ಮಾಡಿದ್ದೇನೆ. ನನ್ಮಾತ್ಕೇಳು. ಈ ಊರ್ನಲ್ಲಿ ರಾಮ್ರಾಯ್ರು ಅಂತಿದಾರೆ. ರಾವ್ ಸಾಹೇಬ್ ರಾಮ್ರಾಯ್ರು ಅಂತ. ಒಳ್ಳೆ ಮರ್ಯಾದಸ್ಥರು. ದೊಡ್ಮನುಷ್ಯರು. ಅವ್ರಿಗೆ ಇಬ್ರೆಣ್ಮಕ್ಕಳಿದಾರೆ. ಊಂ ?

ಭೀಮು :— ಹೂಂ. ಹೇಳಿ. ಹೇಳಿ.

ಪು. ಜೋ :— ಒಬ್ಬ ವರ ಈಗ ಮೈಸೂರ್ನಿಂದ ಬರ್‍ತಾನೆ. ಅವ್ನೂ ನಂಗ್ಬೇಕಾದೋನೇ. ಆದ್ರೆ ಅವನ್ಗಿಂತ ನೀನ್ ನನಗೆ ಕೇವಲ. ಆದ್ರಿಂದ ನೀನೇ ಚಿಕ್ಕವಳ್ನ ಮಾಡ್ಕೋಬ್ಯೇಕಂತೆ.

ಭೀಮು :— ಅದ್ಯಾಕೆ, ದೊಡ್ಡವಳು ಚೆನ್ನಾಗಿಲ್ವೇ?

ಪು. ಜೋ :— ಆ! ಬಿಡ್ತೂ ಅನ್ನೋ. ಚೆನ್ನಾಗಿಲ್ವಂತೆ, ರತಿ, ರತಿ, ರತಿ. ಅದ್ರಲ್ಲೂ ನಿಮ್ಮೀಗಿನ್ಕಾಲದ ರತಿ. ಸೊಟ್ಟ ಬೈತಲೆ, ಲೋಲಾಕು, ಹುಬ್ಬಿನ್ನಡುವೆ ಕುಂಕುಮ ಕಂಡೂ ಕಾಣದ್ಹಾಗೆ, ಸುಣ್ಣ ಬಣ್ಣ, ಎಲ್ಲಾ ಇದೆ. ಅಯ್ಯಯ್ಯೋ! ನಾನ್ಹೋಡು ಫೋಟೋ ಕೈಲಿಟ್ಕೊಂಡ್ ಪುರಾಣಾ ಓದ್ತಿರೋದು. (Photo ಕೊಟ್ಟು) ... ಏನೋ, ಚೆನ್ನಾಗಿಲ್ವೇನೋ?

ಭೀಮು :— ಅರ್ಜುನನಿಗೆ ಶಾಪ ಕೊಟ್ಟ ಊರ್ವಶಿ ಇದ್ದ್ಹಾಗಿದಾಳಲ್ರೀ, ಮತ್ತವಳ್ನ ಬಿಟ್ಟು—

ಪು. ಜೋ :— ಹೌದೋ, ಆದ್ರೆ ರೂಪ ಒಂದೇನೇ ಮುಖ್ಯ?

ಭೀಮು :— ಅದೊಂದೇ ಅಲ್ಲ. ಒಪ್ಕೊಂಡೆ. ಆದ್ರೂ ನಿಮ್ಮ ಅನೇಕ 'ಮುಖ್ಯ'ಗಳ ಮುಕ್ತಾಹಾರದಲ್ಲಿ ರೂಪ ಪೋಗಪಿದ್ಹಾಗೆ, ಜೋಯಿಸ್ರೇ. ಅದಿದ್ದೇ ತೀರ್ಬೇಕು. ವಿದ್ಯೆ ಏನಿಲ್ವೋ? ಅ ಆ ಇ ಈ ನಾದ್ರೂ ಬರಿಯೋಕೆ ಬರುತ್ತೋ?

ಪು. ಜೋ :— ಏನಂದಿ? ಹುಷಾರಾಗ್ಮಾತಾಡು. ಇಂಗ್ಲೀಷ್ನಲ್ಲಿ B.A. ಪ್ಯಾಸ್ಮಾಡಿದಾಳೆ. ಅ ಆ ಇ ಈ ಅಂತೆ ಒ ಓ ಔ ಹೋ!

ಭೀಮು :— B. A. Pass ಮಾಡಿದಾಳ್ಯೇ?

ಪು. ಜೋ :— ಹೂ ಅಷ್ಟೇ ಅಲ್ಲ. ಹಿಂದೀಲಿ ಮಾಧ್ಯಾಹ್ನಿಕ, ರಾಷ್ಟ್ರವೀರ ಎಲ್ಲಾ ಪ್ಯಾಸ್ಮಾಡಿದಾಳೆ. ........ಯಾಕೋ ನಗೋದು?

ಭೀಮು :— (ನಗುತ್ತಾ) ಅಲ್ಲ, ಜೋಯಿಸ್ರೇ, ನಿಮಗೆ ಸಂಧ್ಯಾವಂದ್ನೆ ಮಾಡಿ ಮಾಡಿ ಮಾಡಿ ಜಡ್ಡು ಹಿಡಿದ್ಹೋಗಿ, ನಿಮ್ಮ ಭಾಷೆ ಒಳಗೆಲ್ಲಾ ಹೊಕ್ಬಿಟ್ಟದೆಯಲ್ರೀ? ಮಾಧ್ಯಾಹ್ನಿಕ, ರಾಷ್ಟ್ರವೀರ, ಛತ್ರಪತಿ, ಹಯ್ಯೋ!

ಪು. ಜೋ:— ಯಾಕೋ?

ಭೀಮು:— ಮಾಧ್ಯಾಹ್ನಿಕ ಅಲ್ರೀ ಅದು. ಮಾಧ್ಯಮಿಕ. ಪ್ರಾಥಮಿಕ ಆದ್ಮೇಲೆ ಮಾಧ್ಯಮಿಕ. ನೀವ್ಯಾಕೆ ಮಿಕ ಮಿಕ ಅಂತ ನೋಡ್ತೀರಲ್ಲಾ? ಆ "ಮಿಕ" ಆದ್ಮೇಲೆ ಈ "ಮಿಕಾ"ರೀ. ಆಮೇಲ್ನೀವ್ಹೇಳಿದ್ರಲ್ಲ, 'ರಾಷ್ಟ್ರವೀರ' ಅಂತ, ಅದನ್ನ ರಾಷ್ಟ್ರಭಾಷೆ ಅಂತಾರೆ.

ಪು. ಜೋ:— ರಾಷ್ಟ್ರ-ಭಾಷೆ? ಅದೇನ್ ಭಾಷೆಯೋ ಅಪ್ಪ, ಅಂತೂ ಆ ವಿಚಿತ್ರ ಭಾಷೇನ್ನೇ ಪ್ಯಾಸ್ಮಾಡಿದ್ದಾಳೆ.

ಭೀಮು:— ಭೇಷ್.

ಪು. ಜೋ:— ಇನ್ನು ಸಂಗೀತ.... ಆಹಹಹಹ!

ಭೀಮು:— ಓಹೊಹೊಹೊಹೊ!

ಪು. ಜೋ:— ವೀಣೆ ಹಿಡ್ಕೊಂಡ್ಕೂತ್ರೆ, ಸತ್ಯಲೋಕದಿಂದ ಇಳಿದ್ಬಂದ ಸರಸ್ವತೀನೇನೋ!

ಭೀಮು:— ತ್ಸತ್ಸತ್ಸು!

ಪು. ಜೋ:— ಆಮೇಲೆ ನಾಜೂಕು ಕೆಲ್ಸಗ್ಳು....

ಭೀಮು:— ಸಾಕ್ಸಾಕ್ಸಾಕು. ಅಲ್ರೀ ಇಷ್ಟೆಲ್ಲಾ ಇಟ್ಕೊಂಡಿರೋ ಈ ಸಕಲ ವಿದ್ಯಾ ಪಾರಂಗತೇನ ಬಿಟ್ಟು, ಆ "ಚಿಕ್ಕವಳ್ನ ಮಾಡ್ಕೊಮ್ಮಂತೆ" ಅಂತ ಪುಟ್ಟದಾಗಂದ್ಬಿಟ್ರಲ್ಲಾ, ಯಾಕೆ?

ಪು. ಜೋ:— ಅಲ್ರೋ, ಭೀಮು, ಹೆಂಗಸರಿಗೆ, ಮುಖ್ಯವಾಗಿ, ಗುಣ ಅನ್ನೋದಿದೆ ನೋಡು ...

ಭೀಮು:— ಯಾಕಿವ್ಳಿಗೆ ಗುಣ್ವೇ ಇಲ್ವೇನೂ? ಅಥವಾ ಇದ್ರೆ, ಏನಿವಳ ಅವಗುಣ?

ಪು. ಜೋ:— ಸಂಸಾರಕ್ಕೆ ಯೋಗ್ಯಳಲ್ಲ. ಇವಳು, ಆ ನಮ್ಮಜ್ಜಸ್ಕಾಲದ ಕಥೆ ಕೇಳಿದೀಯೋ ಇಲ್ರೋ, ಚಂಡೀ ಕಥೆ, ಆ ಪುಣ್ಯಾತಿಗಿತ್ತಿಯ ಅಪರಾವತಾರ. ಹಬ್ಬ ಅಂದ್ರೆ ತಿಥಿ, ಹುಣ್ಣಿಮೆ ಅಂದ್ರೆ ಅಮಾವಾಸ್ಯೆ, ಭೂಮಿ ಅಂದ್ರೆ........

ಭೀಮು :— ಆಕಾಶ ?

ಪು.ಜೋ:— ಹೂ. ದೊಡ್ಡೋವ್ರೂಂದ್ರೆ ಗಂಭೀರ್ವಿಲ್ಲ, ಮರ್ಯಾದೆ ಇಲ್ಲ. ಏತಿ ಅಂದ್ರೆ ಪ್ರೀತಿ.

ಭೀಮು :— ನನಗಂಥಾವಳ್ನ ಕಂಡ್ರೇ ತುಂಬ ಪ್ರೀತೀ ! ಅಲ್ರೀ ಇಂಥಾ ಸಣ್ಣ ವಿಷಯಕ್ಕೆ ನನ್ನೆದಿರಿಸ್ಬಿಟ್ರಲ್ಲ ! ಈ ಚಂದ್ರಮುಖಿ, ಚಂದ್ರವದನೆ, ಇವ್ರಲ್ಲಿ ಅಷ್ಟು ಕಳಂಕವೂ ಇರ್ಬಾರ್ದೇ ? ಇಷ್ಟ ಅಷ್ಟ್ ಕಳಂಕಕ್ಕೆ ಬೆದರಿ ಬೆಳ್ದಿಂಗಳ್ನೇ ಬೇಡ ಅನ್ನೋನಿರ್ರೀ ?

ಪು.ಜೋ :— ಭೀಮೂ........

ಭೀಮು :— ಇರ್ರಿ, ಜೋಯಿಸ್ರೇ. ನಂದೊಂದೆರಡು ಪ್ರಶ್ನೆಗಳಿಗೆ ದಯವಿಟ್ಟು ಉತ್ತರ ಹೇಳಿ. ಈ ಚಂಡಿ ಹೆಸರೇನು ?

ಪು.ಜೋ :— ಸರೋಜ ಅಂತ. ಅಮ್ನೋ, ಬಾಯಿಯೋ, ದೇವೀನೋ ಅದೇನೋ ಗೊತ್ತಿಲ್ಲಾಪ್ಪ, ಕೂಗೋದು 'ಸರೋಜ' ಅಂತ.

ಭೀಮು :— ಸರೋಜ ! ಸ–ರೋಜ ! ! ಚೆನ್ನಾಗಿದೆ ಹೆಸರು. ಆಮೇಲೆ, ಇವಳು ನಿಜ್ವಾಗ಼್ೂ ಈ Photoನಲ್ಲಿರೋ ಹಾಗೇ ಇದಾಳ್ತಾನೆ ?

ಪು.ಜೋ :— ಅದೇನೋ ಹಾಗಂದ್ರೆ ?

ಭೀಮು :— ಅಲ್ಲಾ, ಅದೇನೋ ಸುಣ್ಣ ಬಣ್ಣ ಎಲ್ಲಾ ಇದೆ ಅಂದ್ರಿ ಆಗ. ಸ್ವಲ್ಪ ಯೋಚ್ನೆ ಮಾಡ್ದೆ. ಮೊನ್ನೆ ನನ್ನ ಸ್ನೇಹಿತ ಒಬ್ಬ ಮದ್ವೆ ಮಾಡ್ಕೊಂಡ, ವಿಶಾಲಾಕ್ಷಿ ಅನ್ನೋ ಒಬ್ಬುಡ್ಗೀನ, ಹೀಗೇ Photoನಲ್ಲಿರೋ beautyನ್ನೋಡಿ. ಆಮೇಲ್ಗೊತ್ತಾಯ್ತವನ್ಗೆ, ಹೆಂಡ್ತಿ ಏಕಾಕ್ಷಿ, ಇನ್ನೊಂದ್ಗಾಜಿನ್ಕಣ್ಣು, ಆದ್ರಿಂದ ಅವಳು ವಿಶಾಲಾಕ್ಷಿ ಅಲ್ಲ, ವಿಶಾಲಾಕ್ಷಿ by two ಅಂತ. ಹಾಗೆಲ್ಲಾದ್ರೂ ಇವ್ಳೂನೂ....

ಪು.ಜೋ :— ಛೆಛೆಛೆಛೆ, ಹಾಗೇನಿಲ್ಲ, ಪಾಪ, ಹಾಗೇನಿಲ್ಲ. ಈ ಚಂಡೀತನ, ಮೊಂಡ್ತನ, ಗೈಯಾಳಿತನ ಬಿಟ್ಬಿಟ್ರೆ ... ... ಭಂಗಾರದಂಥ ಹುಡ್ಗೀನೋ, ಅಲ್ದೆ ಇನ್ನೊಂದು........ಇವ್ರಿಗೆ ಮದ್ವೆ ಷ್ಟಿದೇಂತಿ ?

ಭೀಮು :— ಯಾರಿಗೆ ?

ಪು.ಜೋ:— ಈ ರಾವ್ ಸಾಹೇಬ್ರಿಗೆ. ಇವಳ್ನ ಮದ್ವೆ ಮಾಡ್ಕೊಳ್ಳೋ ........ಅವನಿಗೆ ಮುಕ್ಕಾಲಾಸ್ತೀನಾದ್ರೂ ಕೊಡ್ತೇನೆ ಅಂತಾರೋ.

ಭೀಮು :— ಓಹೋ! ಹಾಗಾದ್ರೆ, ಜೋಯಿಸ್ರೇ ಆ ಮೈಸೂರ್ನೋನಿಗೇನಾದ್ರೊಂದುತ್ರ ಹೇಳಿ ಕಳಿಸ್ಬಿಡಿ. ಈ ಸತ್ಯಲೋಕದಿಂದ ಇಳಿದ್ಬಂದ ಸರಸ್ವತೀಗೆ ನಾನೇ ಬ್ರಹ್ಮನಾಗ್ಹೋಗ್ಬಿಡ್ತೇನೆ.

ಪು.ಜೋ:— ಭೀಮು !........

ಭೀಮು :— ನೀವೇನೂ ಭಯಪಡ್ಬೇಡಿ.

ಪು.ಜೋ:— ಬೇಡ. ನೀನಿವಳ ರೂಪಾನ್ನೋಡಿ ಮೋಸ ಹೋಗ್ಬೇಡ. ಇವ್ಳ ಚಂಡೀತನ ಕೃಷ್ಣ ಕೂತ ತಕಡಿ ತಟ್ಟೆ ಹಾಗೆ. ಒಂದಿಷ್ಟು ಅಲ್ಲಾಡ್ಸೋಕಾಗೋಲ್ಲ. ಇವ್ಳ ವಿಷಯ ನೀನರಿಯೆ.

ಭೀಮು :— ಇಷ್ಟೊತ್ತೂ ಅರೆದ್ಕುಡ್ಸಿದ್ರಲ್ಲಾ. ಅದಾಯ್ತು. ಇನ್ನೂ ನನ್ವಿಷಯ ನೀವರಿಯರಿ. ನಾನ್ ಸಾಮಾನ್ಯವಾಗಿ ಸರಿಯಾಗಿದ್ರೂ ಸಂದರ್ಭಕ್ಕೆ ತಕ್ಕ ಆವೇಶಾನ ಆವಾಹ್ನೆ ಮಾಡ್ಕೊಳ್ಬಲ್ಲೆ. ಇವಳ ಚಂಡೀತನ ಕಂಡೊಡ್ನೆ ನಾನ್ ಭಂಡ್ನಾಗಬಲ್ಲೆ. ಜಗನೊಂಡನಾಗಬಲ್ಲೆ. ಆ ಹಿಡಂಬೀಗೆ ಸರಿಯಾದ ಗಂಡ್ನಾಗಿ 'ಭೀಮು' ಅಂತ್ನಂಗಿಟ್ಟಿರೋ ಹೆಸರಿನ್ನ ಸಾರ್ಥಕ ಮಾಡ್ಕೊಳ್ಬಲ್ಲೆ. ನಿಮ್ಮ ಕೃಷ್ಣ ಕೂತ ತಕಡಿ ತಟ್ಟೇನ ಎಬ್ಸೋಕೆ ಎದುರು ತಟ್ಟೇಲ್ಹಾಕೋ ತುಳಸಿ ದಳ ನನ್ನ ಕೈಲಿದೆ. ಆದ್ರಿಂದ ನೀವೇನೂ ಯೋಚ್ನೆ ಮಾಡ್ದೆ, ಲಗ್ನದಏರ್ಪಾಟ್ನೋಡಿ. ಜಾತ್ಕ ಗೀತ್ಕದ ತಂಟೇಗ್ಹೋಗ್ಬೇಡಿ. ಅದ್ಸರಿಯಾಗಿದ್ದೇ ಇರುತ್ತೆ. ಒಂದ್ವೇಳೆ ನೋಡ್ಲೇಬೇಕಾದ್ರೆ, ಏನಾದ್ರೂ ಹೆಚ್ಚುಕಡಿಮೆ ಇದ್ರೆ ಸರಿಮಾಡ್ಬಿಡಿ. ನಕ್ಷತ್ರಗಳು, ನವಗ್ರಹಗಳು ನಿಮ್ಮ ಕೈಲಿ ಹ್ಯಾಗಂದ್ರಾಗ್ಹೆ ಕುಣಿಯುತ್ವೆ. ಅಪರಾಧ ಅಂತ ಆಲೋಚ್ನೇನೂ ಮಾಡ್ಬೇಕಾದ್ದಿಲ್ಲ. "ಸಾವಿರ ಸುಳ್ಹೇಳಿ ಒಂದ್ಮದ್ವೆ ಮಾಡಿಸು"ಅಂತ ಹಿರಿಯರ ಮಾತಿದೆ, defenceಉ.

ಪು.ಜೋ:— ಹೌದು. ನೀನ್ಹೇಳೋದೆಲ್ಲಾ ಸರಿಯೇ ಅಪ್ರೂ........

ಭೀಮು :— ನೀವಾದ್ರೂಗೀದ್ರೂ ಅಂತೇನೂ ಹೇಳ್ಬೇಡಿ. ಆಗ್ಹೋಯ್ತದು. ನೀವೀಗಾಗೋಲ್ಲಾಂತಂದ್ರೂನೂ ನಾನೇ ಹೋಗಿ ಆ ರಾವ್ ಸಾಹೇಬರ್ನ ಕೇಳ್ತೇನೆ. ಏನ್ಹೇಳ್ತೀರಿ.

ಪು. ಜೋ :— ಬಿಡೂ. ನಾನ್ಹೇಳೋದ್ಹೇಳ್ದೆ ಕೇಳ್ದೆ ಹೋದ್ರೆ........

ಭೀಮು :— ಮುಂದೆ ಸಂಭವಿಸಬಹುದಾದ ಪ್ರಮಾದಗಳಿಗೆ ನೀವ್ ಜವಾಬ್ದಾರರಲ್ಲ, ಅಷ್ಟೇತಾನೇ ?

ಪು. ಜೋ :— ಹಹಹಹ ... ಮುಖ್ಯ ಆ ರಾವ್ ಸಾಹೇಬ್ರ ಅದೃಷ್ಟ. ನಡಿ. ಹಾಗಾದ್ರೆ ಹೋಗ್ಮಾತಾಡೇಬಿಡೋಣ.... ತಡಿ.... ತಡಿ.... ಊಹು.... ಇನ್ನು ತಿರಿಗಿ ಅಲ್ಲೀಗ್ಹೋಗೋ ಹೊತ್ಗೆ ರಾಹುಕಾಲ ಬಂದ್ಬಿಡುತ್ತೆ. ಬೇಡ. ಒಂದ್ಕೆಲ್ಸ ಮಾಡೋಣ. ನೆಟ್ಟಗೀಗ ನಮ್ಮನೇಗ್ಹೋಗೋಣ. ಅಲ್ಲೇ ಊಟ ಮುಗಿಸ್ಬಿಡೋಣ. ರಾತ್ರಿ ಪ್ರಯಾಣ, ನಿದ್ದೆ ಕೆಟ್ಟಿರ್ತಿ. ಒಂದಷ್ಟ್ ವಿಶ್ರಮಿಸ್ಕೊ. ಆಮೇಲೆ ಕಾಪಿ ಮಾಡಿಸ್ತೇನೆ. ಕುಡ್ಕೊಂಡು ಹೊರಟ್ಬಿಡೋಣ. ಏನೂ ?

ಭೀಮು :— ನೀವು ಮನೇಗ್ಹೊರಡಿ. ಊಟ ತಿಂಡಿ ಅಂತೆ ಬಲವಂತ ಮಾಡ್ಬೇಡಿ. ಲಗ್ನದ ಸಮಯದಲ್ಲಿ ಅಜೀರ್ಣವಾಗೋತನಕ ಹೊಡಿಯೋಣ. ಈಗ ಅಷ್ಟ್ರಲ್ಲಿ ನಂದೊಂದ್ ಸಣ್ಣ visit ಮುಗಿಸ್ಕೊಂಡ್ಬಂದ್ಬಿಡ್ತೇನೆ. ಇಲ್ಲೇ Central Hotelನಲ್ಲಿ ನನ್ನ ಸ್ನೇಹಿತ ಚಂದ್ರಶೇಖರ ಅಂತೊಬ್ನಿದಾನೆ. ಅವನ್ನೋಡ್ಕೊಂಡು, ಅವನು ಸಲೀಸಾಗಿ ಬಿಟ್ರೆ, ಊಟದ್ಹೊತ್ಗೆ ಬರ್ತೇನೆ. ಇಲ್ದಿದ್ರೆ ಕಾಫಿ timeಗಂತೂ ಹಾಜರ್. ಹೊರಡಿ. ಲಕ್ಷವ್ನೋರ್ಗೂ ಹೇಳಿ, ಖಂಡಿತ ಬರ್ತೇನೆ ಅಂತ.

ಪು. ಜೋ :— ಹೌದೋ. ಆದ್ರೆ ಸ್ನೇಹಿತರು ಅಂತ ಹೋಟ್ಲಲ್ಕೂತು ಹರ್ಟೇಗೆ ಪ್ರಾರಂಭಮಾಡಿ ಮರೆತ್ಬಿಟ್ರೆ........

ಭೀಮು :— ಹಹಹಹ. ಏನ್ ಜೋಯಿಸ್ರೇ, ನೀವ್ಹೇಳೋ ಮಾತು ? ಮದ್ವೇ ವಿಚಾರ್ದಲ್ಲೂ ಮೈಮರೀಬಲ್ನೇ ಮನುಷ್ಯ ? ನೋಡಿ (ಕೈಲಿರುವ Photo ತೋರುತ್ತಾ) ಈ ಅರ್ಧಾಂಗಿ (ಜೇಬಿಗೆ ಸೇರಿಸುತ್ತಾ) ಈ ಆಗಿ ಜೇಬ್ನಲ್ಲೇ ಇರ್ಲಿ. Sweet heartಉ, nearest to the heartಉ, ಸರಿಯೇ ? ಮರಿಯೋ chance ಇಲ್ಲ ಇನ್ನು. ಹೊರಡಿ. ಅರ್ಧಘಂಟೆ, ಒಂದ್ಘಂಟೆ, ಅಬ್ಬಬ್ಬಾಂದ್ರೆ ಎರಡ್ಘಂಟೇ ಒಳಗೆ ಹಾಜರ್. Good morning, ಓ ಕ್ಷಮಿಸಿ, ಸಮಸ್ಕಾರ.

ಹಹಹಹ. (ಜೇಬಿನಲ್ಲಿರುವ Photo tap ಮಾಡುತ್ತಾ) ಇದರ ಪ್ರಭಾವ, ಜೋಯಿಸ್ರೇ!

ಪು. ಜೋ:— ಅದ್ಹಾಗೇ, ಅದ್ಹಾಗೇ, ಅದ್ಹಾಗೇನೋ........ಇನ್ನೂ ಅಷ್ಟಕ್ಕೇ ಮುಗೀತೇ!

(ಬೇರೆ ಬೇರೆಯಾಗಿ ನಿಷ್ಕ್ರಮಿಸುವರು)

— ತೆರೆ —

## ದೃಶ್ಯ ೩

[Central Hotelನಲ್ಲಿ ಒಂದು ಕೋಣೆ. ಚಂದ್ರು, ಶಾಂತು Photo ಇಟ್ಟು ಕೊಂಡು ಅವಳ ಮೇಲೆ ರಚಿಸಿದ ಒಂದು ಪ್ರೇಮ ಗೀತೆ ಹಾಡುತ್ತಿರುವನು. ಭೀಮು ಪ್ರವೇಶಿಸಿ .ತನ್ನ ಆಗಮನವನ್ನು ತಿಳಿಯಪಡಿಸದೆ ಗೀತೆಯನ್ನು ಸಂಪೂರ್ಣವಾಗಿ ಕೇಳಿ, ನಂತರ ಒಳಗೆ ಬರುತ್ತಾ]

ಭೀಮು:— Grand! Grand!! Grand!!! Superb ಕಣೋ.

ಚಂದ್ರು:— (ಥಟ್ಟನೆ ಹಾರಿ ನಿಂತು ನೋಡಿ) ಆ? ಭೀಮು? (Photo ಬಚ್ಚಿಟ್ಟು) ಯ....ಯ....ಯಾವಾಗ್ಬಂದಿ ನೀನು?

ಭೀಮು:— ಯಾಕೋ ಯಾಕೋ ಇಷ್ಟು funk ಆಗ್ಬಿಟ್ಟೆಯಲ್ಲೋ? ಈಗ ಸ್ವಲ್ಪ ಹೊತ್ತಾಯ್ತು. ನಿನ್ನ ಗಾನಸುಧಾರಸ ವಾಹಿನೀಗೆ, ಯಾಕೆ ಅಣೆಕಟ್ಟು ಕಟ್ಟಲಿ ಅಂತ ಹಾಗೇ ಪಾನಮಾಡ್ತಾ ನಿಂತ್ಕೊಂಡೆ.

ಚಂದ್ರು:— ಉಂ....ಊರಿಗ್ಯಾವಾಗ್ಬಂದಿ? ಒಂದು ಕ-ಕ-ಕಾಗದ ಬರೆದ್ಬಿಟ್ಟಿದ್ರೆ ಸೆ-ಸೆ-ಸ್ಟೇಷನ್ನಿಗಾದ್ರೂ ಬರ್ತಿದ್ದೆ.

ಭೀಮು :— ಹುಂ.... ಬಂದು, ಕು–ಕು–ಕೂಲೀಗೋ, ಟ–ಟ–ಟ್ಯಾಕ್ಸೀಗೋ a-a-arrange ಮಾಡ್ಬಿಡ್ತಾ ಇದ್ನೇನೋ ! ಈ ಮಾತ್ರಕ್ಕೋ ಚಾಕಚಕ್ಯ ಇಲ್ಲೇನೂ ನಡಿಯೋಲ್ಲ. ಯಾವ್ದೋ ಅದು ಸಂಗೀತ.... ನೀ ಹೊಡೀತಾ ಇದ್ದಿದ್ದು ?

ಚಂದ್ರು :— ಯಾವ್ದೂ ಇಲ್ಲ, ಭೀಮು. ಸುಮ್ನೆ ಹೀಗೇ ಕೂತ್ಕೊಂಡು ಒಂದ್ compose ಮಾಡ್ದೆ.

ಭೀಮು :— ಮಾಡ್ಬಿಟ್ಟು ಹಾಗೇ ಹಾಡ್ತಿದ್ದಿ, ಹ್ಯಾಗಿರುತ್ತೆ ನೋಡೋಣ ಅಂತ ?

ಚಂದ್ರು :— ಹಹಹಹ.... coffeeಗ್ಹೇಳ್ತೀನೆ ತಡಿ.... ಡೇ ಮಣಿ.... ಮಣೀ........

ಮಣಿ :— (ಪ್ರವೇಶಿಸಿ) ಎನ್ನ ಸಾರ್ ?

ಚಂದ್ರು :— ರೆಂಡ್ ಗಪ್ coffeeಡಾ. (ಭೀಮೂಗೆ) ದೋಸೆ ತರ್ಸೋಣ್ವೇನೋ ?

ಭೀಮು :— ಬೇಡ ಬೇಡ, ಬರೀ coffee ಸಾಕು. (ಮಣೀಗೆ) ಪೋಡಾ, ಶುಡ ಶುಡಾ ಇರಕ್ಣೊಂಡಾ ಡೇ ?

ಮಣಿ :— ಆವ್ಟು ಸಾರ್ (ನಿಷ್ಕ್ರಮಿಸುವನು)

ಭೀಮು :— ಚಂದ್ರು !

ಚಂದ್ರು :— ಆ ?

ಭೀಮು :— ಅಲ್ಲಿ ಬಚ್ಚಿಟ್ಟೆಯಲ್ಲಾ ಆ Photo ತೆಗಿ.

ಚಂದ್ರು :— Photo ? Photo ಗೀಟೋ ಯಾವ್ದೂ ಇಲ್ಲ.

ಭೀಮು :— ಯಾರ್ಹತ್ರ ಹೇಳ್ತೀಯೋ ಇದನ್ನ ? ತೆಗಿಯೋ. ಗೊತ್ಕಾಣೋ. ಅದು ನಿನ್ನ ಮೋಹಗೊಳಿಸಿರೋ ಒಬ್ಬ ಮಾಯಾಂಗನೇದು. ನಿನ್ಸಂಗೀತ ಅವಳಿಗೆ ಮನಸ್ಸೋತು ಕಟ್ಟಿದ ಕವನ. ಬಾರೋ, honest

loveಗೆ ಹೆದರ್ಕೆ ಯಾಕೋ? (ಚಂದ್ರು Photo ತೆಗೆದು ಕೊಡಲು) ಹಾಗ್ಬರ್ಲಿ heart's queenಉ. ....ಚೆನ್ನಾಗಿದ್ಯೇ ಚುನಾವಣೆ! ಆರೀ ನಾರೀಮಣಿ?

ಅವರೂ....ನನ್ನ....ಊಂ....ನನಗೇ.... oh, hang it, she is a class-mate....

ಭೀಮು :— Class-mateಉ! ಸಹ ವಿದ್ಯಾರ್ಥಿನಿ! ಅದಕ್ಕೋಸ್ಕ, ನೇಣ್ಹಾಕಿಸ್ಕೋ ಬೇಕು! ಗ್ರಹಚಾರ. ಈ ಚಂದ್ರಕಾಂತೆ ಹೆಸರು?

ಚಂದ್ರು :— ಶಾಂತು.

ಭೀಮು :— ಶಾಂ....ತೂ?

ಚಂದ್ರು :— ಉಹುಹು. ಶಾಂತಾ ಬಾಯಿ.

ಭೀಮು :— ಓಹೋ, ಶಾಂತಾ ಬಾಯಿ. ಬೇರೆ ಹೆಸರು. ಈಕೆ ಜನಕ?

ಚಂದ್ರು :— ಅದೆಲ್ಲಾ ಕೇಳ್ಬೇಡ, ಭೀಮು, ತುಂಬಾ delicateಉ.

ಭೀಮು :— ಅರ್ಥವಾಗತ್ತೋ. ಮಾಂಗಲ್ಯದ ಮಣಿಗಳ್ನಡುವೆ ಹೊಕ್ಕೋಗೋದು ಹಸೀದಾರಾನೇ! ನೀನ್ delicateಆಗ್ಹೇಳು, ನಾನೂ delicateಆಗೇ ಕೇಳ್ಬಿಡ್ತೇನೆ. ಈಕೆ ಪಿತ?

ಚಂದ್ರು :— ರಾಮ್ರಾಯ್ರು ಅಂತಿದಾರೆ.

ಭೀಮು :— ರಾಮ್ರಾಯ್ರೂ? ಯಾವ ರಾಮ್ರಾಯ್ರು?

ಚಂದ್ರು :— ರಾವ್ ಸಾಹೇಬ್ ರಾಮ್ರಾಯ್ರು ಅಂತಿದಾರೆ ಈ ಊರ್ನಲ್ಲಿ.

ಭೀಮು :— **ರಾವ್ ಸಾಹೇಬ್ ರಾಮ್ರಾಯ್ರೂ?** ಅಲೆ, ಹಾಗಾದ್ರೆ (ಜೇಬಿನಿಂದ ಸರೋಜಳ Photo ತೆಗೆದು ತೋರುತ್ತಾ) ನೀನು ಇವಳ್ನ **ನೋಡಿದ್ಯಾ?**

ಚಂದ್ರು :— (ನೋಡಿ) Gracious God ! ಈ Photo ನಿನ್ಹತ್ರ ಯಾಕ್ಬಂತು, ಭೀಮು ?

ಭೀಮು :— ಈ Photo ಮಾತ್ರ ಯಾಕೆ, ಇವ್ಳೇ ಬಂದ್ಬಿಡ್ತಾಳೆ ನನ್ಹತ್ರ, ಇಷ್ರಲ್ಲೇ. ಆದರ ವಿಷಯ ಹೇಳ್ತೀನಿ. ನಿಂಗೊತ್ತೇನಿವ್ಳು ?

ಚಂದ್ರು :— ನಂಗೊತ್ತೇ ? ಯಾರಿಗ್ಗೊತ್ತಿಲ್ಲ, ಭೀಮು, ಇವಳು ? ಇವಳು ಈ ರಾವ್ ಸಾಹೇಬ್ ರಾಮರಾಯರ ಮೊದಲ್ನೇ ಮಗಳು.

ಭೀಮು :— ಆ ? ಅಂದ್ಮೇಲಂಡೇ ನಾನ್ಹಾಗೇ ಇರ್ಬೇಕೂಂತ. So, ಇವ್ಳು ಇವ್ಳ ತಂಗೀ ! ಆ ?

ಚಂದ್ರು :— ಹೂ.

ಭೀಮು :— ಚಂದ್ರು, ಕುಣಿಯೋ !

ಚಂದ್ರು :— ಆ ?

ಭೀಮು :—ನೀನ್ಯಾರ್ಗೊತ್ತೇನೋ ಈಗ ?

ಚಂದ್ರು :— ಏನು ?

ಭೀಮು :— ನಾನ್ಯಾರ್ಗೊತ್ತೇನೋ ?

ಚಂದ್ರು :— ಆ ?

ಭೀಮು :— ನಾವ್ಯಾರು ಗೋತ್ತೇನೋ ?

ಚಂದ್ರು :— ಭೀಮು ?

ಭೀಮು :— You damn fool ! ನಾವು brothers-in-law ಕಾಣೋ.... ಅಕ್ಕ ತಂಗಿಯೋರ ಗಂಡಂದಿರು. and therefore ಅಣ್ಣ ತಮ್ಮಂದಿರು ! **ಡೇ, ಮಣೀ, ಮಣೀ !**

ಮಣಿ :— (ಪ್ರವೇಶಿಸಿ) ಸಾರ್ ?

ಭೀಮು :— Sweets ಎನ್ನಡಾ ಇರುಕೂ ?

ಮಣಿ :— ಮೈಶೂರಿಬಾಕ್ ಇಬ್ಬೊದಾ ಬಣ್ಣಿರುಕು, ಸಾರ್ !

ಭೀಮು :— ಕೊಂಡುವಾಡಾ, ಬೆಂಗಳೂರಿಕಿ, ಶೀಘ್ರಂ. ರೆಂಡು Plateಉ.... ಪೋಡಾ ! (ಮಣಿ ನಿಷ್ಕ್ರಮಿಸುವನು. ಜಿಪ್ಸಾಗಿ ನಿಂತಿರುವ ಚಂದ್ರೂಗೆ) ಯಾಕೋ ? ಈ ಬ್ರಹ್ಮಚಾರಿdomನಿಂದ liberate ಆಗೋದನ್ನ celebrate ಮಾಡ್ಬೇಡ್ವೇನೋ, ಸೀಯ್ನಲ್ಲಿ ?

ಚಂದ್ರು :— ಭೀಮು, ಇದೇನ್ ನಿನ್ನ ಹುಚ್ಚು ಅಂತ ?

ಭೀಮು :--- ಹುಚ್ಚಾ ? ಮದ್ವೆ ಮಾಡ್ಕೊಳ್ಳೋದು ಹುಚ್ಚೇನೋ ? Narmal life ನಾವ್ lead ಮಾಡ್ಬೇಕಾದ್ರೆ married wife ಇರ್ಲೇ ಬೇಕೋ. ನಾವು ಮೋಟಾರ್ ಕಾರುಗ್ಳಿದ್ದಾಗೆ. ನಮ್ಮ ಮಿದಳು steering wheelಉ. ಅದನ್ನ handle ಮಾಡೋಕೆ ಹೆಂಡ್ತಿ, sweet heartಉ........ ಇಲ್ದೆ ಹೋದ್ರೆ foot-path ಮೇಲೆ ಓಡಾಡೋ Pedestrians ಪ್ರಾಣಕ್ಕೇ ಅಪಾಯಾನೋ !

ಚಂದ್ರು :--- ಆ Theory ನಾನೊಪ್ಪಿದ್ನೋ. ಆದ್ರಿವಳ್ನ ಮದ್ವೆ ಮಾಡ್ಕೋ ಅಂತೆ ಯಾರ್ಹೇಳಿದ್ರೋ ನಿನ್ಗೆ ? (ಮಣಿ ಮೈಸೂರುಪಾಕು Plateಗಳಲ್ಲಿ ತಂದಿಟ್ಟು ತೆರಳಲು)

ಭೀಮು :— ಯಾರೋ ನನ್ನ Well-wisher ಒಬ್ರ್ಹೇಳಿದ್ರು. (ಮೈಸೂರುಪಾಕು ಚಂದ್ರು ಬಾಯಿಗೆ ತುರುಕಿ, ತಾನೂ ತಿನ್ನುವನು)

ಚಂದ್ರು :— ನಿನ್ನ well-wisherಉ ? ನಿನ್ನ well-pusherಉ, ಭೀಮು, ಅವ್ರು ; ಭಾವೀಗೆ ತಳ್ಳೋರು ; ನಿನ್ನ ಅಂತಃ ಶತ್ರು ! Thank God it is not too late. Forget this fiend this very minute. Sweet-heart ಅಂತೆ, silly fool, ಮುಕ್ತಾ ಇದಾನೆ ಮೈಸೂರು ಪಾಕ್ನ !

ಭೀಮು :--- Too late, ಚಂದ್ರು. ತಿಂದಾಯ್ತು, ಈಗ ಅರಗಿ

ಸ್ಕೊಳ್ಳೇ ಬೇಕು. ಅಲ್ವೋ, ಅದ್ಯಾಕೋ ನಿನಗೆ ನನ್ನ ಈ ಸುಕುಮಾರಿ ಮೇಲೆ ಅಷ್ಟು ಆಗ್ರಹ? ಚೆನ್ನಾಗಿಲ್ವೇನೋ ನೋಡೋಕೆ?

ಚಂದ್ರು :— ಇದಾಳೆ.

ಭೀಮು :— B. A. Pass ಮಾಡಿಲ್ವೇನೋ?

ಚಂದ್ರು :— ಮಾಡಿದಾಳೆ.

ಭೀಮು :— ಹಿಂದಿ ಬರೋಲ್ವೇನೋ?

ಚಂದ್ರು :— ಬರತ್ತೆ.

ಭೀಮು :— ಸಂಗೀತ ಹಾಡೋಲ್ವೇನೋ?

ಚಂದ್ರು :— ಹಾಡ್ತಾಳೆ.

ಭೀಮು :— ನಾಜೋಕು ಕೆಲ್ಸಗ್ಳು........

ಚಂದ್ರು :— ಬರತ್ತೋ.

ಭೀಮು :— ಮತ್ತೇನೋ? ಇನ್ನೇನ್ಬೇಕೋ ನಿನಗೆ?

ಚಂದ್ರು :—Common senseಉ, ತಲೆ ಒಳಗೆ 'ಮಿದುಳು' ಅಂತಾರಲ್ಲ, ಅದು ಬೇಕು. Foot path ಮೇಲೋಡಾಡೋ, ನಿನ್ನ carನೇ ಆಗುಂಬೆ ಘಾಟಿ ಬುಡಕ್ಕೆ ರವಾನಿಸ್ಬಿಡ್ತಾಳೆ ಅನ್ನೋದು ನಿನಗ್ಗೊತ್ತಿಲ್ಲ. ಇವಳ್ನ "ನಿನ್ನ ಸುಕುಮಾರಿ" ಅಂದಿ. ಸುಕುಮಾರಿ ಅಲ್ಲ. ಕುಮಾರಿ ಹೌದು. ಆದ್ರೆ most preciseಆಗ್ಹೇಳ್ಬೇಕಾದ್ರೆ, ಬರೀ ಮಾರಿ, pure and simple. She is a terror in this whole townಉ, ಭೀಮು!

ಭೀಮು :— **That** is exactly the reason why I want to marry her, ಚಂದ್ರು! ಅಲ್ವೋ, ನನ್ಹತ್ರ ನಡಿಯತ್ತೇನೋ ಇವ್ಳಾಟ? ಈಗ್ನೋಡೋ, ನನ್ಗಂತೂ ಬೇರೆ ಕೆಲ್ಸ ಇಲ್ಲ. ಹೊತ್ತ್ಹೋಗೋದು ಬಹಳ ಕಷ್ಟವಾಗ್ಹೋಗಿದೆ. ನೋಡೋಣ, ಈ ಮಾರೀನ ಮ್ಯಾರಿ (marry)

ಮಾಡ್ಕೊಂಡು ನನ್ನ ಕೈ ಚಳಕದಲ್ಲಿ ಪಳಗ್ಸಿ ಒಬ್ಬ normal ನಾರಿ ಆಗೋಹಾಗ್ಮಾಡೋಕಾಗತ್ತೋ ಇಲ್ವೋ ಅಂತ.

ಚಂದ್ರು :--- ಅದ್ಸರಿ ಅನ್ನು. ನಿನ್ನ ಕೈಲಿ ಕೊಡೋದೂ ಕರಡಿ ಕೈಲಿ ಕೊಡೋದೂ ಎರಡೂ ಒಂದೇ. ಆದ್ರೂ experimentಉ....

ಭೀಮು :— Constructiveಉ ಕಾಣೋ. ನಾನಿವಳ್ನ ಮದ್ವೆ ಮಾಡ್ಕೊಳ್ದೆ ಹೋದ್ರೆ, ಈ ತಂಗಿ ನಿನ್ಗೆ release ಆಗೋಲ್ಲ. ಇವ್ಳೀ Photoಲೇ ಕೂತಿರ್ಬೇಕು, ನೀನೀ Hotelನಲ್ಲೇ ಕೂತಿರ್ಬೇಕು ನನ್ನೊಪ್ಗೆ ಇಂದ ಎರಡು ಮನೆ construct ಆಗತ್ತಲ್ಲೋ !

ಚಂದ್ರು :— ಹೌದು, ಆದ್ರೆ ಮನೇಲಿ ಮುಳ್ಳಿನ ಗಿಡ ಹಾಕ್ಕೋತೀ ಯಲ್ಲಾ ಅಂತ....

ಭೀಮು :— ಇವಳು ordinary ಮುಳ್ಳಿನ ಗಿಡ ಅಲ್ಲ, ರೋಜಾ ಬಳ್ಳಿ.... ಸರೋಜ ಅಲ್ವೇನೋ ? ಮುಳ್ಳೂ ಇದೆ ಹೂವೂ ಇದೆ. ಇರ್ಲಿ, ನನಗೀ ಪುಷ್ಪದಲ್ಲಿ ಅನುರಾಗ unlimited ಆಗ್ತಾ ಇದೆ. ನಮ್ಮ company float ಆಗ಼್ೋಯ್ತು. Let my partner sleep in my pocket (ಸರೋಜಳ Photo ಜೇಬಿಗೆ ಸೇರಿಸಿ) ,ಗಾಳಿ ಬೆಳಕಿಗೆ ಬಾಡ್ಹೋಗ್ಬಿಟ್ಟಾಳು ! ಈಗ ನಿಮ್ಮ ಪ್ರೇಮ ನೌಕೆ ಎಷ್ಟು ದೂರ ಸಾಗಿದೆ ಹೇಳು.

ಚಂದ್ರು :— ನೌಕೆಗಿನ್ನೈ ಏನೂ ಇಲ್ಲ, ಭೀಮು.

ಭೀಮು :—.Plane ಇರಬಹುದು. ಯಾವ್ದಾದ್ರೂ ಆಗ಼್ಿ ಹೇಳು.

ಚಂದ್ರು :— ಅಂಥಾದ್ದೇನೂ ಇಲ್ಲ ಕಾಣೋ. ನಮ್ಮ college open ಆದಾಗ, unionನಲ್ಲಿ ನಂದೊಂದು ಸಂಗೀತದ performance ಏರ್ಪಾಟ್ಮಾಡಿದ್ರು.

ಭೀಮು :— ಏರ್ಪಾಟ್ಮಾಡಿದ್ರು.

ಚಂದ್ರು :— ಆವಾಗ ಇವಳೂ ಬಂದಿದ್ಳು.... I mean.... ಇವ್ರೂ ಬಂದಿದ್ರು.

ಭೀಮು:— 'She had come ಅಂತ English ನಲ್ಹೇಳ್ಬಿಡು, ತಾಪತ್ರಯವೇ ಇರೋಲ್ಲ....ಹು....

ಚಂದ್ರು:— Performance ಬಹಳ ಚೆನ್ನಾಗಾಯ್ತು.

ಭೀಮು:---'She had come ಉ,' ಆಗ್ದೆ ಇರತ್ಯೇ?.... ಊ.... ಹೇಳು, ಪರವಾಗಿಲ್ಲ.

ಚಂದ್ರು.--- ಕೊನೇಲಿ congratulations ಸುರಿಮಳೆ. ಇವಳೂ ಬಂದು, "music ತುಂಬಾ ಚೆನ್ನಾಗಿತ್ತು, ತುಂಬಾ thanks" ಅಂತ್ಹೇಳಿ ತನ್ನ friends ಜೊತೇಲಿ ಹೊರಟ್ಹೋದ್ಳು.

ಭೀಮು:--- ಕೃತಾರ್ಥನಾಗ್ಹೋದೆ! ಸಂತೋಷಕ್ಕೆ swoon ಆಗ್ಲಿಲ್ವಲ್ಲ? ಪುಣ್ಯವಂತ ಕಣಯ್ಯ. ನನ್ನ class-mate ಒಬ್ಳಿದ್ಳು, ಪಠಾನ್ರೋಳು, ಟೊಂಕದಲ್ಲಿ ಬಾಕು ಸಿಕ್ಕಿಸ್ಕೊಂಡೇ class ಇಗೆ ಬರೋಳು. ....ಉ....ಆಮೇಲೆ?

ಚಂದ್ರು:--- ಅದೇ ಮೊದಲ್ಸಾರಿ ಅವಳ್ಮಾತಾಡಿದ್ದು.

ಭೀಮು:--- ಸರಿ, ಹೆಂಗಸರು, ಮಾತಿಗೆ ಪ್ರಾರಂಭಿಸಿದ್ಮೇಲೆ ಮುಗಿಸೋದೆಲ್ಲಿ?

ಚಂದ್ರು:— ಮೂರನೆ ದಿವಸ, ನಮ್ಮ library ಲಿ meet ಮಾಡಿದ್ವು.

ಭೀಮು:--- ಓಹೋ!

ಚಂದ್ರು:--- ನಮ್ಮಿಬ್ರಿಗೂ ಬೇಕಾಗಿದ್ದಿದ್ದು ಒಂದೇ ಪುಸ್ತಕ; ಅಲ್ಲಿದ್ದಿದ್ ಒಂದೇ copy; ಅದನ್ನ ನಾ ತೊಗೊಂಡ್ಬಿಟ್ಟಿದ್ದೆ.

ಭೀಮು:--- "ನೀವೇ ತೊಗೊಳ್ಳಿ ಪರವಾಗಿಲ್ಲ" ಅಂತ ಕೊಟ್ಬಿಟ್ಟೆ?

ಚಂದ್ರು:— ಹಹಹಹಹ.

ಭೀಮು:--- Paris ನಲ್ಲಾದ್ರೂ ಹುಟ್ಬಾರ್ದಾಗಿತ್ತೇ ನೀನು!

ಚಂದ್ರು :--- ಆಮೇಲೆ ಆ ladiesದೇನೇ ಒಂದು concert programme ಹಾಕಿದ್ರು. ನನ್ನೇ invite ಮಾಡಿದ್ರು coach ಮಾಡೋಕೆ.

ಭೀಮು :--- Splendid! ನೀನು coachman ಆಗ್ಹೋಗ್ಬಿಟ್ಟೆ! ಪಂದ್ಯದ ಕುದುರೆ ಓಡ್ದ್ಹಾಗೋಡ್ತಾ ಇದೆಯಲ್ಲೋ progressಉ!

ಚಂದ್ರು :— ಆಮೇಲ್ಹೀಗೇ ಎಷ್ಟೋ ಸಾರಿ picture hallsನಲ್ಲಿ meet ಮಾಡಿದ್ವಿ. ಸರಿ, ಮತ್ತೆ, class-matesಉ ಅಂದ್ಮೇಲೆ........

ಭೀಮು :— ಇದ್ದೇ ಇರತ್ತಲ್ಲ, notesಉ, reference booksಉ, ಅದು ಇದು exchange ಮಾಡ್ಕೊಳ್ಳೋದು. ಸರಿ ಸರಿ. ಈಗ ಸಧ್ಯಕ್ಕೆ ಆ ನೆಪದಲ್ಲಿ ಈ photoಗ್ಳು exchange ಮಾಡ್ಕೊಳ್ಳೋವರ್ಗೂ ಬಂದಿದೆ ಅಂತ್ಹೇಳ್ಬಿಡು ಒಟ್ನಲ್ಲಿ?

ಚಂದ್ರು :— No, no, ಹಾಗಲ್ಲ, ಭೀಮು. ಇದು....ಇದು....ಇದೂ ಎಲ್ಲೋ mistakeನಿಂದ ಬಂದಿರಬಹುದು.

ಭೀಮು :— ಹೌದೋ. Mistakeನಿಂದಾನೇ ಕಾಣೋ ಬರೋದು. ನಾವು ಈ ಪ್ರಪಂಚಕ್ಕೆ ಬಂದಿರೋದೂ, ಸಿಂದಿರೋದೂ, ಮುಂದ್ಹೋಗೋದೂ ಎಲ್ಲಾ mistakeನಿಂದಾನೇ ಕಾಣೋ. Mistake ಮಯಂ ಸೃಷ್ಟಿ. ಅಲ್ದೆ, ಈ mistakeಇನ ಮುಸುಕು ಹೊದ್ಸಿದ್ರೇನೇ actಉ artisticಆಗ್ಾಣೋದು. ಅವಳು, “ಇದು ನನ್ನ photo, I love you, ಇದನ್ನ ಸೀವಿಟ್ಕೊಂಡು ಒಂದ್ಹಾಡ್ಹೇಳಿ” ಅಂತ ತಂದ್ಕೊಟ್ಟಿದ್ದಿದ್ರೆ ಎಷ್ಟು crude ಆಗಿರ್ತಿತ್ತು? ಅದೇ ಈ book-markನ pretenceನಲ್ಲಿ ಬಂದು ತನ್ನ sweet fragranceನ ಹ್ಯಾಗ್ಬೀರ್ತಿದಾಳೆ! ಹೋಗ್ಲಿ, ಅದ್ಹ್ಯಾಗಾದ್ರೂ ಇರ್ಲಿ, ಒಟ್ನಲ್ಲಿ ಈ ಏಕಮಾವ ಪಾಣಿಗ್ರಹಣಾನ ನಮಗೆ ಕರುಣಿಸಿದ ಆ ದೇವ್ರಿಗೆ thanksಉ............ ಯಾಕೋ?

ಚಂದ್ರು :— ನಿನ್ನ thanksಗೇನೋ ದೇವರು ಸಲೀಸಾಗಿ ರಸೀತಿ ಕೊಟ್ಬಿಡ್ಬಹುದು. ನನ್ನ caseನಲ್ಲಿ, ಏಕಮಾವ ಪಾಣೀಗಿಂತ ಗ್ರಹಣದ proportionಏ ಜಾಸ್ತೀನಲ್ಲೋ.

ಭೀಮು :— ಯಾಕೋ, ಯಾರೋ ರಾಹು ಕೇತುಗಳು ?

ಚಂದ್ರು :— ನಮ್ಮ fatherಉ, ಇವ್ಳ fatherಉ. ನಮ್ಮಪ್ಪ ಹಾರ್ನಳ್ಳಿ ವಿಶ್ವೇಶ್ವರಭಟ್ರ ಮಗಳ್ನ ತಂದ್ಕೊಳ್ಳೋದು ಅಂತ settle ಮಾಡಿದಾರಂತೆ. ನಾಕು ಸಾವಿರ ವರ ದಕ್ಷಿಣೆ ಕೊಡ್ತಾರಂತೆ ಅವ್ರು. ಇನ್ನಿವಳ fatherಉ, ಇವಳ್ನ ಎಲ್ರೂ ಒಪ್ತಾ ಇರೋದ್ರಿಂದ........

ಭೀಮು :— ಅದನ್ನ ಹ್ಯಾಗೆ ಕಂಡ್ಹಿಡಿದೆ ನೀನು ?

ಚಂದ್ರು :--- ಭೀಮು !

ಭೀಮು :— ಉಹು, ಪ್ರೀತಿಪ್ರಪಂಚದಲ್ಲೂ ಐದ್ನೇ column activitiesಗೆ ಅವಕಾಶ ಇದೆ ಅಂತ ನನಗ್ಗೊತ್ತಿರ್ಲಿಲ್ಲ. ಕೇಳ್ದೆ. ಹೇಳು.... ಆಮೇಲೆ........

ಚಂದ್ರು :— ಹುಡ್ಗೀಗೆ ಏನು ಒಡವೆ ಹಾಕ್ತೀರಿ, ಏನ್ ವಸ್ತ್ರ ಓದಿಸ್ತೀರಿ ಅಂತ್ಕೇಳ್ತಾ ಇದಾರೆ.

ಭೀಮು :— ಹುಂ.... ಇನ್ನೂ ಈ ಹಾಳು ವರದಕ್ಷಿಣೆ, ಒಡ್ವೆ ವಸ್ತ್ರ ನಮ್ಮ ಪ್ರಾಣ ತೆಗೆಯತ್ತಲ್ಲಾ !

ಚಂದ್ರು :— ಹೀಗಿದೆಯಲ್ಲಾ ಎರಡು ಕಡೆ ಇಂದ್ಲೂ, scylla and charybdisಉ, ಏನ್ಮಾಡೋದೋ, ಏನ್ solutionಓ ?

ಭೀಮು :— ................ Determinationಏ solutionಉ. Delicacy ಅಂತ ಧೈರ್ಯ ಬಿಟ್ಟು ಹೆದರ್ಕೊಂಡ್ರೆ ನಿಮ್ಮ ದೋಣಿ ಎರಡು ಬಂಡೇಗೂ ಹೊಡೆದು ಮುಳಗ್ಹೋಗೋದು ಖಂಡಿತ. ನಿಮ್ಮ ವಿಶ್ವೇಶ್ವರ ಭಟ್ರ ಮಗಳ್ನ ಮದ್ವೆ ಮಾಡ್ಕೊಳ್ಳೋಲ್ಲ ಅಂದ್ರೆ, ನಿಮ್ಮ father ನಿನ್ನ ಮನೆ ಬಿಟ್ಟು ಆಚೆಗ್ಹಾಕ್ತ್ಯಾರು, at the worst. ಹಾಕ್ಲಿ. ಆಸ್ತೀನಲ್ಲಿ ಒಂದ್ಕಾಸೂ ಕೊಡೋಲ್ಲ ಅನ್ನಬಹುದು. ಅನ್ಲಿ. ಈ ತರಹ ತಂದೆ ಆಜ್ಞೇನ ಪರಿಪಾಲಿಸೋಕೆ ಶ್ರೀ ರಾಮಚಂದ್ರ, Casabianca, ಬೇಕಾದ್ರೆ ಅವತಾರಗೈತ್ತಿ ಬರಲಿ. ನಮ್ಮಿಂದ ಸಾಧ್ಯವಿಲ್ಲ. ಒಂಭತ್ತು ತಿಂಗಳು ಹೊತ್ತು ಹೆತ್ತು

ಸಲಹಿದೆವು, ತೊಟ್ಲಲ್ಲಿಟ್ಟು ತೂಗಿದ್ವು, feeding bottleಲ್ಲಿ ಹಾಲ್ಕುಡಿಸಿದ್ವು, ಅತ್ತಾಗ ಆಕಾಶ್ದಲ್ಲಿ ಚಂದ್ರನ್ನ ತೋರ್ಸಿದ್ವು ಅಂದ್ಬಿಟ್ಟು, ಈಗ "ನಾವು ತಂದ್ಕೊಟ್ಟ ಹೆಣ್ಣನ್ನೇ ಅಥವಾ ಸಿಪ್ನರ್ಸ ಮಾಡಿದ್ದ ಗಂಡಿನ್ನೇ ಮದ್ವೆ ಆಗ್ಬೇಕೂ" ಅನ್ನೋ illogical animal lifeನ imitationನ ಇಲ್ಲೂ ತೋರ್ಸಿದ್ರೆ, ಯಾಕೋ ಕೇಳ್ಬೇಕು? ಹಿಂದಿನ್ಕಾಲ್ದಲ್ಲಿ ಹಿರಿಯರು ವಂಶ, ಸಂಬಂಧ, ಮಕ್ಕಳ ಸುಖ ನೋಡಿ ಕೊಟ್ಟೊ ತಂದೂ ಮಾಡ್ತಿದ್ರು; ನಮ್ಮನ್ನ ಕೇಳ್ದೆ ಇದ್ರೂ ಚಿಂತೆ ಇರ್ಲಿಲ್ಲ. ಒಪ್ಕೋಬಹುದಿತ್ತು. ಈಗದೆಲ್ಲಾ ಬಿಟ್ಟು ವರದಕ್ಷಿಣೆ, ಅಂತಸ್ತು, ಒಡವೆ, ವಸ್ತ್ರ ಅಂತ ಈ ಬಾಬತ್ನೆಲ್ಲಾ ಪ್ರಾಮುಖ್ಯ ಮಾಡಿ ನಿಮ್ಮಪ್ಪ, ನಿಮ್ಮಾವ ನಮ್ಮನ್ನ ಆಟದ ಬೊಂಬೆಗ್ಳು ಅಂತ ತಿಳ್ಕೊಂಡು ತಮ್ಮ ಹಟ-ismನೇ ಸಾಧಿಸೋಕ್ಹೊರಟಿರೋವಾಗ, ಇವರ್ಗೆ atom bombಏ solution ಅಲ್ದೆ ಬೇರೆ ಏನೋ ಇದೆ salvationಉ?

ಚಂದ್ರು :— ಹೌದು. ಏನ್ಮಾಡ್ಬೇಕೂಂತೀಯಾ? ನಮ್ಮ father ಎಲ್ಲಾ settleಊ ಮಾಡ್ಬಿಟ್ಟಿದಾರೆ ಕಾಣೋ. "ನಾಡಿದ್ದು ಲಗ್ನ ಇಟ್ಸಿದ್ರೂ ಇಡಿಸ್ಬಿಡಬಹುದು. ತಕ್ಷಣ ಹೊರಟ್ಬಾ" ಅಂತ್ಕಾಗ್ದ ಬರ್ದಿದ್ರು.

ಭೀಮು :— ನೀನ್ಹೋಗ್ದೆ ನಿಂತ್ಬಿಟ್ರೆ?

ಚಂದ್ರು :— ಇನ್ನೇನ್ಮಾಡ್ಬೇಕೂ ಅಂತೀಯೋ?

ಭೀಮು :— ಏನಿಲ್ಲ. ನೀನ್ಮಾಡಿದ್ದೇ ಸರಿ. ಹಾಗೆ ಹಾಕ್ಕೋ ಹೆಗಲ್ಮೇಲೆ ಕೊಡ್ಲೀನ— Hack one by one of these ಕಂಟಕಾಸ್ of happy marriages. ನೀನೇನು ಹೆದರ್ಬೇಡ. I'll give you the wind.

ಚಂದ್ರು :— Thou art kind. ನೀನು ನಿಜವಾಗ಼್ಲೂ ನನಗೆ ಅಷ್ಟು help ಮಾಡಿದ್ರೆ ...

ಭೀಮು :— ಬಿಡೂ ಅನುಮಾನಾನಾ. ನಾನು ಮನಸ್ಮಾಡ್ಬಿಟ್ಟೆ ಅಂದ್ಬಿಟ್ರೆ ಆಗ್ಹೋಯ್ತು. "ಛಲದೊಳ್ ಸುಯೋಧನಂ" ಅಂದ್ರೆ ಆ ಸುಯೋಧನನ್ನ ಸಿಗಿದ್ಹಾಕಿದ ಭೀಮ ನಾನು. ನನ್ನ class-mate ಒಬ್ಳಿದ್ಲೂಂತ್ಹೇಳಿದ್ನಲ್ಲಾ, ಪಠಾಣ್ಕ್ರೋಳು ಅಂತ, ಅವಳ್ನ—ಬೇರೆ ಕಾರಣ

ದಿಂದ ಅನ್ನು—ಮೋಸ ಮಾಡಿ, ಅವ್ರ loveಗೆ ಅಡ್ಡಿ ಬಂದು, heart-breake ಮಾಡ್ಸಿ ಪ್ರಾಣಬಿಡಿಸ್ಬಿಟ್ರು. ನನಗೀಗ್ಲೂ ಹೊಟ್ಟೆ ಉರಿದ್ಹೋಗ್ತಾ ಇದೆ. That shall give me strength ; That shall give her peace. No more hearts, no more breakages. When two people really love each other and want to marry, I shall have no ಹಲ್ಲಿಲ್ಲದ ಮುದ್ಕ ಸೂಕ್ his nose and say ವರದಕ್ಷಿಣೆ, ವರೋಪಚಾರ, ಒಡ್ವೆ, ವಸ್ತ್ರ and all that sort of nonsense. The course of true love shall run smooth. Easy shall lie the heads that wear the ಭಾಷಿಂಗಾs ! ಇದಕ್ಕೆ ಅಡಚಣೆಯಾಗಿ ಬಂದು, ಬ್ರಹ್ಮ ಗಂಟ್ಹಾಕಿರೋದನ್ನ ಮರೆತು, ತಾವೇ ಭೂಲೋಕದ ಬ್ರಹ್ಮಂದಿರು ಅಂತ ತಿಳ್ಕೊಂಡಿದಾರಲ್ಲ, ಈ ಮುದುಕರು, They should be taught a lesson. I shall see that they are taught a lesson. ನಡಿ, ಹೋಗೋಣ. ನಿನ್ನ ಈ Penelopeಗೆ suitors ಸಾವಿರ ಜನ. Unless we hurry up, ಯಾವೋನಾದ್ರೂ ಕಾಸಿನ ಸರ ಕೈಲ್ಹಿಡ್ಕೊಂಡ್ಬಂದು ಕುತ್ಗೆಗೆ ತಾಳಿ ಕಟ್ಟಿ ಕರ್ಕೊಂಡ್ಹೊರಟ್ಹೋದಾನು. ಹೋಗಿ, ಜೋಯಿಸ್ರೂ ಬ್ರಿದಾರೆ, ನಮ್ಮಪ್ಪ,, ಅವರ್ಹತ್ರ, open ಮಾಡೋಣ, subjectನ.

ಮಣಿ :—(ಪ್ರವೇಶಿಸಿ) ಸಾಪಾಡ್ readyಯಾ ಇರುಕು ಸಾರ್ !

ಭೀಮು :— Oh, dash your ಸಾಪಾಡಾ, ಜೋಯಿಸ್ರ ಮನೇಲೇ ಹಾಕಿಸ್ತೀನಿ, ಬಾ, ಚಂದ್ರು.

ಚಂದ್ರು :— ಇಲ್ಲೇ ಮುಗಿಸ್ಕೊಂಡ್ಹೊರಟ್ಹೋಗೋಣ್ವೇ, ಹ್ಯಾಗೂ readyಯಾಗಿದೆ.

ಭೀಮು :— AAAlright. ನನ್ಗೂ ಈ hot talkನಲ್ಲಿ ಹೊಟ್ಟೆ ಎಲ್ಲಾ ಚುರು ಚುರೂಂತಾ ಇದೆ. ಮುಗ್ಸೇಬಿಡೋಣ. ಡೇ, ಮಣಿ, ಶೀಘ್ರಂ, ಶೀಘ್ರಂ !

— ತೆರೆ —

## ದೃಶ್ಯ ೪

[ರಸ್ತೆ: ಭೀಮು, ಚಂದ್ರು, ಪುಟ್ಟಾಜೋಯಿಸರೂ ಪ್ರವೇಶಿಸುವರು]

ಭೀಮು :— ಹಾಗಾದ್ರೆ, ಜೋಯಿಸ್ರೇ, ಆ ಎರಡ್ನೇ ಹುಡ್ಗಿ........ ಅಷ್ಟೊ....ಊ ...

ಪು. ಜೋ :—ಹೂನೋ. ನಿನ್ಹ್ಹೆಂಡ್ತಿ ಸವರನ್ನು, ಅವಳು ಅಪರಂಜಿ! ಅದಕ್ಕೇ ನಾನ್ಹೇಳಿದ್ದೂ........

ಭೀಮು :— ಹೋಗಲಿ, ಅದಾಗ್ಹೋಯ್ತಲ್ಲ. ಈಗ ನನ್ನ ಮದ್ವೆ settle ಆಯ್ತು ಅಂದ್ರೆ ಅವಳ್ಮದ್ವೇಗೂ ಜಾಗ್ರತೆ ಏರ್ಪಾಟ್ಮಾಡ್ಬಿಡ್ತಾರೇ?

ಪು. ಜೋ :— ಆಹಾ. ಮಾಡ್ದೆ. ಈಗ ಮೈಸೂರ್ನೋನು ಒಬ್ಬ ಬರ್ತಾನೆ ಅಂತ ಹೇಳ್ಳಿಲ್ವೇ ನಾನು?

ಭೀಮು :— ಹು. ಹು.

ಪು. ಜೋ :— ಅವನಿಗೇ ಕೊಡ್ಬೇಕೂಂತಿದ್ದಿದ್ದು, ಅವನು ನೋಡ್ಬೇಕಾಗಿದ್ದಿದ್ದೂ, ಸರೋಜನ್ನೇ.

ಭೀಮು :— ಹೂ. ಹುಡ್ಗೀನ್ನೋಡಿ ಬೆದರ್ಬಿಡ್ತಾನೆ ಅಂತ್ನೀವು ಹೆದರ್ಬಿಟ್ಟಿದ್ರಿ?

ಪು. ಜೋ :—ಹೂ...ಹಹಹಹ...ಈಗ ಸರೋಜನ್ನ ನೀನೊಪ್ಕೊಂಡ್ಮೇಲೆ, ಶಾಂತೂನೇ ಅವ್ನಿಗೆ ಗೊತ್ಮಾಡ್ಬಿಡಬಹುದಲ್ಲಾ! ಈ ರಾವ್ ಸಾಹೇಬ್ರ ಮನಸ್ನಂತೆ ಬೇಕಾದಷ್ಟು ಜವಾಹಿರಿ ಕೊಡೋಕೆ ಸಿದ್ಧವಾಗಿದಾರೆ. ಇನ್ನೇನು? ಅವನು ಬಂದು ಒಪ್ಬಿಟ್ಟ ಅಂದ್ರೆ ಮುಗಿದೇಹೋಯ್ತು. ಒಪ್ಪೇಒಪ್ತಾನೆ ಈ ಹುಡ್ಗೀನ! ಒಂದ್ನಿಮಿಷಾನೋ, ಒಂದೇ ನಿಮಿಷ್ದಲ್ಲಿ ಪಟಲ್ ಆಗ್ಹೋಗತ್ತೆ!

ಭೀಮು :— ಚಂದ್ರೂ, ನೋಡಿದ್ಯಾ ಸಂದರ್ಭ ಹ್ಯಾಗಿದೆ? ನನಗ್ಯಾಕೋ, ಜೋಯಿಸ್ರೇ, ಅವರೇ ಜವಾಹಿರಿ ಕೊಡೋಕೆ ಸಿದ್ಧವಾಗಿ

ದಷ್ಟರೆ ಅನ್ನೋದನ್ನ ಕೇಳಿ ಆಶ್ಚರ್ಯವಾಗ್ತಾ ಇದೆ. ಮುನ್ನೂರೈವತ್ತು ರೂಪಾಯಿನ suit ಕೊಟ್ರೊ, ಮೂರೂವರೆ ರೂಪಾಯಿನ ಬೆಲ್ಟು ಕೊಡ್ಲಿಲ್ಲ ಅಂತ ವರಪೂಜೆ ಹೊತ್ನಲ್ಲಿ ಕೂಗಾಡಿದ ವರಗಳ ಚರಿತ್ರೆ ಕೇಳಿದೇನೆ. ವಧೂಗೇ ಕೇಳಿದ ಜವಾಹಿರಿ ಕೊಡೋಕೆ ತಯಾರಾಗಿರ್ಬೇಕಾದ್ರೆ ಹೆಣ್ಣೊಂದೇ ಅಲ್ದೆ ಇನ್ನೂ ಕೆಲವು ವಿಚಾರ್ಸಿ ತಿಳ್ಕೊಳ್ಳೋ pointಗ್ಳು ಇರ್ಬೇಕು ಗಂಡಿನ್ಕಡೆ ಅನ್ಸುತ್ತೆ. ಅವನು ಬಂದು ಒಪ್ಬಿಟ್ಟೆ ಅಂದ್ರೆ ನಾವು ಹೆಣ್ಣಿನ್ನ ಸುಮ್ನೆ ಕೊಟ್ಬಿಡೋಕೆ ಸಾಧ್ಯ ಇಲ್ಲ. ಅದೂ ಅಲ್ದೆ ಅವಳ್ನೂ ಕೇಳ್ಬೇಕೋ ಬೇಡ್ವೋ? ಅವಳೊಪ್ಬೇಡ್ವೇ?

ಪು. ಜೋ:— ಅಲ್ದೋವೇ, ಅವ್ಳೇನೋ ಒಪ್ಕೋದೂ? ಅವಳ್ನೇನೋ ಕೇಳೋದೂ? ಹುಡುಗನ್ವಿಚಾರ ನಾವ್ಬೇಕಾದ್ರೆ ತಿಳ್ಕೋಬಹುದೇ ಹೊರ್ತು, ಹುಡಿಗಿಯೋರ್ಗೆ "ಹು–ಉಹು" ಅನ್ನೋ ಹಕ್ಕು ಕೊಡೋಕಾಗತ್ತೇನೋ?

ಭೀಮು:— ಆಗೋಲ್ಲ. "ಲೇ ಯ್, ನೀನಿವನ ಹೆಂಡ್ತಿ" ಅಂತಂದ್ರೆ "ಹೂ, ಇವ್ನೇ ನನ್ನ ಸರ್ವಸ್ವ" ಅಂತ ತಲೆ ತಗ್ಗಿಸ್ಬೇಡ್ವೇ ಅವಳು! Right. ಹೋಗ್ಲಿ ನಮ್ಮ informationಗೇ ಇರ್ಲಿ. ಆ ನಿಮ್ಮ ಮೈಸೂರಿನ ಸರ್ವಸ್ವ ನೋಡೋಕೆ ಚೆನ್ನಾಗಿದಾನ್ಯೋ?

ಪು. ಜೋ:— ಅವ್ನೇನ್ ಹೆಂಗಸ್ ಕೆಟ್ಟೋಯ್ದ್ನೇನೋ ನೋಡೋಕೆ ಚೆನ್ನಾಗಿರೋಕ್ಕೇ? ಗಂಡ್ಸಿಗೆ ಅಂದ ಚೆಂದ ಅಂತುಂಟೇನೋ? ಇಧಾನೇ ಸುಮಾರಾಗಿ.

ಭೀಮು:— ಇಧಾನಲ್ಲ! ಏನೋ, ಚಂದ್ರು, ಇಧಾನೆ! ಸಂತೋಷ. And............ಜೋಯಿಸ್ರೇ, ಚಂದ್ರೂ, ಎಲ್ಲಾ ಗಂಡಸ್ರೂ ಮನ್ಮಥನ ಹಾಗ್ಯೇ ಇರೋಕೆ ಸಾಧ್ಯವೇ? ಹುಡುಗಿ, ಹೆಂಗಸು, ತಾನು ಎಷ್ಟೇ ರೂಪವತಿಯಾಗಿರ್ಲಿ, ಎಷ್ಟೇ ವಿದ್ಯಾವತಿಯಾಗಿರ್ಲಿ, ತನ್ನ ಗಂಡ ಹೀಗಿರ್ಬೇಕು ಅಂತ ಬಯಸೋ ಅಧಿಕಾರ, ಹಕ್ಕು, ಪಡೀಲಾರಳು. ಅವಳ ಪೂರ್ವಾರ್ಜಿತ ಕರ್ಮ, ಅನುಭವಿಸ್ಬೇಕು. ಅಲ್ವೇ, ಜೋಯಿಸ್ರೇ? "ತಲಿನೀ ಚೇಸಿನ ಪೂಜಾಫಲಮೂ...."

ಪು. ಜೋ :— ಮತ್ತೆ, ಅಷ್ಟಲ್ದೆ........

ಭೀಮು :— ನಾಕು ಹುವ್ವಾಕಿದ್ರೆ ನರಿ ಮುಖದೋನು, ಆರು ಹುವ್ವಾಕಿದ್ರೆ ಆಡು ಮುಖದೋನು, ಎಂಟ್ವಾಕಿದ್ರೆ ಒಂಟೇ ಮುಖ, ಹತ್ತ್ವಾಕಿದ್ರೆ ಹಯವದನ, ಹದಿನಾರಾದ್ರೆ ಹನುಮಂತ್ರಾಯ, ಹೀಗೇ improvementಉ. ಇಲ್ದೆಹೋದ್ರೆ ಎಲ್ಲಾ ಗಂಡಂದ್ರಿಗೂ ಹೆಂಡ್ತಿಯೋರು ಸಿಗ್ಬೇಕಲ್ಲ! ಆ ವ್ಯೆಸೂರ್ನೋರ್ನ್ನೂ ಮಡದಿ ಬೇಕಲ್ಲ! ರೂಪ ಅಂತೂ ಸ್ವರೂಪವಾಯ್ತು! ವಿದ್ಯೆ? ಏನ್ pass ಮಾಡಿರಬಹುದೋ!

ಪು. ಜೋ :— (I.C.S. pass ಮಾಡಿದಾನೆ ಎನ್ನುವ ತೆರದಲ್ಲಿ)ಹನ್ನೆರಡ್ರೂಪಾಯಿ ಪರೀಕ್ಷೆ ಪ್ಯಾಸ್ಮಾಡ್ಬಿಟ್ಟಿದಾನೆ!

ಭೀಮು:— ತ್ಸುತ್ಸು ತ್ಸುತ್ಸುತ್ಸುತ್ಸು....ಹನ್ನೆರಡ್ರೂಪಾಯಿ ಪರೀಕ್ಷೇ! ಅಬ್ಬಬ್ಬಬ್ಬ! ಪರವಾಗಿಲ್ಲ ಹುಡುಗ! ಆದ್ರೆ, ಜೋಯಿಸ್ರೇ, ಆ ಹುಡಿಗೀ ಈ ಪರೀಕ್ಷೇನ pass ಮಾಡಿ ಆಗಲೇ........

ಪು. ಜೋ :--- ಅವ್ಳೂ ಮಾಡಿದ್ದಾಳೆ. ಇಲ್ಲ ಅನ್ನೋಲ್ಲ. ಇವನಿಗೇನ್ ಬಿ. ಎ. ಗಿ. ಎ ಪ್ಯಾಸ್ಮಾಡೋಕಾಗ್ತಾ ಇರ್ಲಿಲ್ಲ ಅಂತಿಳ್ಕೊಂಡ್ಯೇನು?

ಭೀಮು :— ಉಹುಹು. ಆಗ್ತಾ ಇತ್ತು. ಮೇಷ್ಟ್ರು ಬಹುಶಃ ಬೇಡ ಅಂದಿರಬಹುದು?

ಪು. ಜೋ :— ಹಾಗಲ್ವೋ. ಯಾಕೋ ಇವ್ನಿಗೆ ಓದು, ಮಣ್ಣು ಹುಯ್ಕೊಳ್ಳೋಕೇ? ಇವರಪ್ಪಿಗೆ ಇವ್ನೊಬ್ನೇ ಮಗ. ಮನೆಯೋ ಕುಬೇರನ ಭಂಡಾರ.

ಭೀಮು :— ಸರಿ ಮತ್ತೆ. ಒಪ್ದೆ, ಜೋಯಿಸ್ರೇ, ನೀವ್ಹೇಳಿದ್ದು. ಮೈಯಿ ಮನಸ್ಸು ಎಲ್ಲಾದನ್ನೂ ದಣಿಸಿ ಎಂ.ಎ., ಎಂ.ಎಸ್‌ಸಿ. ಪ್ಯಾಸುಗ ಳ್ಮಾಡಿದ್ರೂ ಮೂವತ್ರೂಪಾಯ್ನೂ ಸಂಪಾದ್ನೆ ಮಾಡೋದಿಕ್ಕೆ ಅವಕಾಶ ಕೊಡ್ದೆ ಇರೋ ಕಾಲ್ದಲ್ಲಿ, ಬೆಳ್ಳಿ ಚಂಚ ಬಾಯಿಲ್ಲಿಟ್ಕೊಂಡ್ಹುಟ್ಟಿ ಅಪ್ಪನಾಸ್ತಿ ಬಲದ್ಮೇಲೆ ಅಂಬೆಗಾಲ್ಹಾಕ್ತಿರೋ ಈ ಅಳಿಯನಿಗೆ E.C.P.S. ಯಾಕೆ?

ಅವನು E.P.S.ಉ ಜೋಯಿಸ್ರೇ E.P.S.ಉ !

ಪು.ಜೋ :— ಅದೇನೋ ಅದು ?

ಭೀಮು :— ಹಾಗಂದ್ರೆ, ಕಾಲೇಜು ಗೀಲೇಜು ಎಲ್ಲಾ ದಂಡ, Public serviceಗೆ eligibleಉ, ಅಂದ್ರೆ ಮನೆ, ಮಡದಿ, ಮಕ್ಕಳು ಅಂತ ಹಾಯಾಗಿ ಇರಬಹುದು ಅಂತ.

ಪು.ಜೋ :— ಹೂ....ನೋಡಿದ್ಯಾ....ಅದೇ....ಹಾಯಾಗಿರಬಹುದೋ ಇಲ್ವೋ, ನೀನೇ ಹೇಳು.

ಭೀಮು :— ನಾನೇನ್ಹೇಳೋದು ? ಚಂಚ ಚಂಚವಾದ್ರೇನು, ಬೆಳ್ಳೇದು ಅಂದ್ಮೇಲೆ ಹೊಟ್ಟೆ ತುಂಬೇ ತುಂಬುತ್ತೆ. ಹಾಯಾಗಿರಬಹುದು. ಅಂತೂ ನನ್ನ ಹೆಂಡ್ತಿ ತಂಗಿ ಗಂಡ ಯಾರು, ಎತ್ತ, ಹೇಗೆ ಅಂತ ತಿಳ್ಕೊಂಡ್ಹಾಗಾಯ್ತು ; ಏನ್, ಚಂದ್ರೂ ; ಫರವಾಗಿಲ್ಲ ಅಲ್ವೇ ? ನಡೀರಿ, ಜೋಯಿಸ್ರೇ....ಈಗ ಸಧ್ಯಕ್ಕೆ ನನ್ಹೆಂಡ್ತಿ....ಅಂದ್ಹಾಗೇ ಒಂದ್ವಿಷಯ. (ಜೇಬು ತಟ್ಟಿಕೊಳ್ಳುತ್ತ) ಈ ನನ್ನ ಪ್ರಾಣೇಶ್ವರಿ,—ಹುಡುಗ್ರು, ಜೋಯಿಸ್ರೇ, ನೀವು ಗುಟ್ಟಾಗಿಡೋ ಮಾತುಗಳ್ನ ನಾವು ಬಹಿರಂಗವಾಗಾಡ್ಬಿಡ್ತೇವೆ ಅಷ್ಟೆ; ಹೃದಯ ನಿಮ್ಮದು ನಮ್ಮದು ಒಂದೇ–ನೀವು ಚೆನ್ನಾಗಿದಾಳೆ ಅಂತ ಹೇಳಿದ್ರಿ. ನಾನು ನಂಬಿಯೂ ಇದ್ದೇನೆ. ಆದ್ರೂ ಅವಳ್ನ ನಾನು ಒಂದ್ಸರ್ತಿ ನೋಡ್ಬಿಡೋದು ಅಗತ್ಯ ಅಂತ ನನಗ್ತೋರತ್ತೆ.

ಪು.ಜೋ :— ಅಲ್ವೋ, ಇದೇನೋ ಈಗ್ಹೀಗೆ ಪ್ರಾರಂಭ ಮಾಡ್ದಿ ? ಅದಕ್ಕೆಲ್ಲಾ ನಾನು ಜವಾಬ್ದಾರಿ ತೊಗೊಳ್ಲಾರೆ. "ಅವಳ್ನ ನೋಡ್ಬೇಕು ಅಂತಾನೆ" ಅಂತ ನಾನಂದ್ರೆ, ಅವಳು ಮನೆ ಹಿಂಬಾಗ್ಲಿಂದಾಲೇ ಪರಾರಿ ಆಗ್ಬಿಡ್ತಾಳೆ, ಖಂಡಿತ. ನಾನೇನ್ಮಾಡ್ಲೋ ?

ಭೀಮು :— ನೀವದಕ್ಕೆಲ್ಲಾ ಯೋಚ್ನೆ ಮಾಡ್ಬೇಡಿ. ಆ ನಾಗರಹಾವು ಹುತ್ತದಲ್ಲಿ ಇದ್ರೆ, ಪುಂಗಿ ಊದಿ ಅದನ್ನ ಹೊರಗೆ ಹೊರಡ್ಸೋ ಜವಾಬ್ದಾರಿ ನನಗಿರ್ಲಿ, ನಿಮ್ಮ ಕೆಲಸ, ನಾನು ಆಗಾಗ್ಯೆ, ನಿಮ್ಮ ಕಿವೀಲಿ ಕೆಲವು ಸಲಹೆಗಳ್ನ ಕೊಡ್ತಾ ಇರ್ತೇನೆ. ಅದ್ರಂತೆ ನೀವು ನಡ್ಕೊಂಡ್ಬಿಡಿ. ಅಷ್ಟು

ಸಾಕು. ಅಲ್ದೆ ನನ್ನ ನಡವಳಿಕೇನೂ ಸ್ವಲ್ಪ ಹಾಗೇ ಹೀಗೇ ಹೋದ್ರೂ ಗಾಬ್ರಿ ಬೀಳ್ದೆ ನನ್ನ ಜೊತೇಗೇ ನೀವೂ ಬರ್ಬೇಕು.

ಪು. ಜೋ :— ಊ....ಅದ್ಬೇಕಾದ್ರೆ....ಆಗಲಿ....

ಭೀಮು :— ನಡೀರಿ, ಹಾಗಾದ್ರೆ.... thanks.

ಪು. ಜೋ :— (ಎರಡು ಹೆಜ್ಜೆ ಹೋಗಿ) ಅಲ್ವೋ, ಭೀಮು, ಹೀಗೇ ಬಂದ್ಬಿಡ್ತೀಯಾ? ಬಟ್ಟೆ ಗಿಟ್ಟೆ ಬದ್ಲಾಯ್ಸಿ, ಹೆಂಡ್ತೀನ್ನೋಡೋಕ್ಹೋಗೋನೂ........ ಶೃಂಗಾರ ಗಿಂಗಾರ ಮಾಡ್ಕೊಂಡೂ........

ಭೀಮು :— ಹಹಹಹ.... ಯಾಕೆ ಜೋಯಿಸ್ರೇ? ಈಗ್ತಾನೆ ಹೇಳಿದ್ರಿ "ಗಂಡಸ್ಗೆ ಅಂದ ಚೆಂದ ಅಂತ ಉಂಟೇನೋ" ಅಂತ? ನನಗ್ಯಾಕೆ ಶೃಂಗಾರ? ಅವಳು ಶೃಂಗಾರ ಮಾಡ್ಕೊಂಡಿದ್ರೆ ಸಾಕು....ನೋಡೋಣ....

ಪು. ಜೋ :— ಅಬ್ಬಾ ಅಬ್ಬಾ ಅಬ್ಬಾ, ಏನ್ ಹುಡುಗ್ರೋ, ಗುರುವಿಗೆ ತಿರುಮಂತ್ರ ಹಾಕೋ ಶಿಷ್ಯಂದ್ರು.... ನನ್ಮಾತು ನನಗೇ ತಿರಿಗಿಸ್ತೀಯಲ್ಲ! ಹುಂ....ನಡಿ....ಅಂದ್ಹಾಗೇ.... ನೋಡು, ನೀವು....ಹೀಗೇ ಹೋಗಿ, ಅಗೋ ಅಲ್ಲಿ ಬಲಕ್ಕೆ ತಿರಿಗಿ.... ಎರಡ್ನೇದೇ ಅವರ ಬಂಗಲಿ. ನಾನು, ಹೀಗೆ ಅಡ್ಡ ದಾರೀಲಿ ಬಂದ್ಬಿಡ್ತೇನೆ. ನೀವು ಗೇಟು ಸೇರೋದ್ರೊಳ್ಗೆ ಬಂದ್ಬಿಡ್ತೇನೆ.

ಭೀಮು :— ಯಾಕೆ?

ಪು. ಜೋ :— ಹೋಗೋದ್ಹೋಗ್ತಾ ಮೂರು ಜನ ಹೋಗ್ಬಾರ್ದು ಅಂತ.... ಅಲ್ದೆ, ಅಗೋ ಅದೇ ಕೃಷ್ಣ ಭಾಗವತರ ಮನೆ, ಸಂಗೀತಗಾರರು.

ಭೀಮು :— ಯಾಕೆ, ನಮ್ಮದ್ವೇಲಿ ಅವರ ಕಛೇರಿಗೆ ಏರ್ಪಾಟ್ಮಾಡ್ಬೇಕೂ ಅಂತ್ಲೇನು?

ಪು. ಜೋ :— ಉಹುಹುಹು... .... ನಮ್ಮ ರಾವ್‌ಸಾಹೇಬ್ರುಂದಿದ್ರು, "ಚಿಕ್ಕವ್ಳಿಗೂ ಸ್ವಲ್ಪ ಪಾಠ ಹೇಳ್ಸಿದ್ರೆ ವಾಸಿ" ಅಂತ, ಮೊನ್ನೆ ಹೇಳ್ಕಳ್ಸಿದ್ದೆ....ಬರ್ಲಿಲ್ಲ....ಜ್ಞಾಪಿಸಿ ಬಂದ್ಬಿಡ್ತೇನೆ.... ಒಂದೇ ನಿಮಿಷ.

ಭೀಮು :— ತಡೀರಿ, ತಡೀರಿ, ಯೊರಿಗೆ ಸಂಗೀತ ? ನನ್ನ ಅರ್ಧಾಂಗಿ ಸಹೋದರೀಗೇ ?

ಪು. ಜೋ :— ಹೂಹೂ, ಶಾಂತೂಗೇ....ಅವಳ್ಹೆಸರು ಶಾಂತೂ ಅಂತ.

ಭೀಮು :— ಅವರ್ಗ್ಗೇ ? ಜೋಯಿಸ್ರೇ, ನೀವು ಅಡ್ಡದಾರೀಲಿ ಬೇಕಾದ್ರೆ ಬನ್ನಿ....ಅವರು ಬರ್ದೆ ಇದ್ರೆ ಶನಿ ಕಳೀತು....ಜ್ಞಾಪಿಸ್ಬೇಕಾದ್ದಿಲ್ಲ....

ಪು. ಜೋ :— ಯಾಕೋ, ಯಾಕೋ ?

ಭೀಮು :— ನಾನಿದೇನೆ, ಬನ್ನಿ, ನೀವಾಯೋಚ್ನೆ ಬಿಡಿ.

ಪು. ಜೋ :— ನೀನೇ ಹೇಳ್ಕೊಡ್ತೀಯಾ ? ಅಂದ್ಹಾಗೇ ನೀನೂ ಕಲಿತ್ಕೋತಾ ಇದ್ಯೆಲ್ಲೋ !

ಭೀಮು :— ಕಲಿತ್ಕೋತಾ ಇದ್ದೆ. ಹೇಳ್ಕೊಡ್ಲೂಬಹುದು. ಆದ್ರೆ ನನ್ನ ಸಾಧ್ನೇಗೆ ಪಾಠ ಹೇಳ್ಕೊಡ್ತಾ ಕೂತ್ಕೊಳ್ಳೋಕೆ ಪುರಸೊತ್ತೆಲ್ಲಿರುತ್ತೆ ನನ್ಗೆ ? ಸತ್ಯಲೋಕದಿಂದ ಇಳಿದ್ಬಂದಿರೋ ನನ್ನೀ ಸರಸ್ವತೀ ವೀಣಾವಾದನ ನಾನ್ಕೇಳ್ತಾ ಕೂತಿರ್ಬೇಡ್ವೇ ? (ಚಂದ್ರೂ ಬೆನ್ನು ತಟ್ಟುತ್ತಾ) ಇಗೋ ಇವ ನಿದಾನ್ನೋಡಿ.

ಪು. ಜೋ :— ಇವ್ನು ?

ಚಂದ್ರು :— ಭೀಮು ?

ಭೀಮು :— ಹೂನ್ನೋ....ಹೂ, ಜೋಯಿಸ್ರೇ, ಎಂಥಾ ಸಂಗೀತಗಾರ ಅಂತೀರಿ ?

ಚಂದ್ರು :— ಲೋ, ಭೀಮೂ !

ಭೀಮು :— Shut up ! (ಪು. ಜೋ. ಗೆ) ತುಂಬಾ ನಾಚಿಕೆ ಸ್ವಭಾವ ಇವಂದು. Radioಲಿ ಹಾಡಿದಾನೆ, ಜೋಯಿಸ್ರೇ. ಆ ಭಾಗವತರೆಷ್ಟು ಕೇಳ್ತಾರ್ರೀ ತಿಂಗ್ಳಿಗೆ ?

ಪು. ಜೋ :— ಅವರು, ತಿಂಗ್ಳಿಗೆ ೨೦ ರೂಪಾಯಿಗೆ ಕಮ್ಮಿ ಒಪ್ಪೋದೇ ಇಲ್ಲ.

ಭೀಮು :— ಲೆಖ್ಖ ತಿಂಗಳಿಗೆ, ಬರೋದು ದಿನ ಬಿಟ್ಟು ದಿನ, ಮಲೇರಿಯ ಹಾಗೇ....ಲೋ ! ಚಂದ್ರು, ನೀನು ಅದ್ರಲ್ಲಿ ಅರ್ಧಕ್ಕಾದ್ರೂ ಒಪ್ಕೋತೀಯೆ ಅಲ್ವೇನೋ ? (ಚಂದ್ರು ಉತ್ತರ ಕೊಡುವ ಮುನ್ನ) ನೋಡಿದ್ರಾ "ಹು" ಅಂತಾನೆ. ಅಗ್ಗದ ಶಿಟ್ಟಿ, ಮುಗ್ಗಿದ ಜೋಳ, cheap rateಉ, nasty musicಉ ಅಂತಿಳ್ಕೋಬೇಡಿ. ಶಾಸ್ತ್ರೋಕ್ತವಾಗಿ ಪೊಗದಸ್ತಾಗಿ ಕೂತ್ಕೊಂಡು ಪಲ್ಲವೀನೂ ಹಾಡಬಲ್ಲ. ಆದ್ರೆ ನಮಗೆ ಸಾಮಾನ್ಯವಾಗಿ ಅಂಥಾ ಸಂಗೀತ ಬೇಕೇ ಬೇಕಾಗೋಲ್ಲ. ದಿನವೆಲ್ಲಾ ದುಡಿದು ಮನೇಗ್ಬಂದು, "ಶಾಂತೂ", (ಚಂದ್ರುಗೆ) ಶಾಂ....ತು ಅಲ್ವೇ ಅವಳ್ಹೆಸರು ?.... ಹಹಹಹ.... "ಒಂದು ಹಾಡು, please" ಅಂದ್ರೆ ಚಾಲಾಮೇಲಾನೋ ಕೋನೀಯಾಡೀನೋ ಪ್ರಾರಂಭ ಮಾಡ್ಬಿಟ್ರೆ, ಮಾರ್ನೆದಿನ ಕೆಲಸಕ್ಕ್ಹೊರಡೋ ಹೊತ್ಗೇ ಆ ಹಾಡುಗಳು ಮುಗಿಯೋದು ! ನಮಗ್ಬೇಕಾದ್ದೀಗ short and sweet. ಒಂದು ಭಂಡಿ ಸಜ್ಜಿಗೇಗಿಂತ ಎರಡು ಉಂಡೆ ಸತ್ಯನಾರಾಯಣನ ಪ್ರಸಾದ ಕ್ಕೆಲ್ಹಾಕ್ಬಿಟ್ರೆ ತೃಪ್ತೋಸ್ಕಿ ! ಇವನಿಗದೂ ಬರತ್ತೆ, ಇದೂ ಬರತ್ತೆ. ಕನಕದಾಸರ ಪದಗಳಿಂದ ಹಿಡಿದು ಕನ್ನನ್ ಬಾಲ ಟ್ಯೂನ್‌ವರ್ಗೂ ಸರ್ತಿ. ಸಿಗಿದ್ಹಾಕ್ಬಿಡ್ತಾನೆ. ಅಲ್ದೆ ಇನ್ನೊಂದು. ಯಾವ್ದಾದ್ರೂ ಒಂದು ಸುಂದರ ಮೂರ್ತೀನ ನೋಡ್ದ, ಮನಸ್ಸಿಗೊಪ್ತು ಅನ್ನಿ ; ಸ್ಫೂರ್ತಿ ತಾನಾಗ್ತಾನೇ ಹೊರಟೇ ಬಿಡತ್ತೆ ; ಸ್ವತಃ ಕೀರ್ತನೆಗಳ್ನ compose ಮಾಡ್ತಾನೆ ಅಂದ್ರೇ !

ಚಂದ್ರು :— ಭೀಮು....ನೀನು....

ಭೀಮು :— ತಡಿಯೋ. Qualifications ಎಲ್ಲಾ ಹೇಳ್ಬೇಡ್ವೇನೋ ? ಇನ್ನು ಕೆಲಸಕ್ಕೆ ಅದಕ್ಕಿಂತ ಮುಖ್ಯವಾಗಿ ಬೇಕಾದ್ದು recommendationಉ, ಶಿಫಾರ್ಸು ಅಂತಂತಾರಲ್ಲ ಜೋಯಿಸ್ರೇ, ಕೆಲಸ ಕೊಡೋ ಕಮಿಟಿ ಕೆಲಸಾನೆಲ್ಲಾ ಒಂದು farceಉ ಅಂತ ತೋರ್ಸೋ ಶಿಫಾರ್ಸು, ಅದೂ ತೊಗೊಳ್ಳಿ. ನಂದು.... ನಿಮ್ಮ ರಾವ್‌ಸಾಹೇಬ್ ರಾಮರಾಯರ ಮೊದಲನೆ ಮಗಳ ಗಂಡನಾದ ನಂದು ! ಕೆಲ್ಸ ಕೊಡೋಲ್ಲ ಅಂದ್ರೆ consequences ಗೊತ್ತೇ

ಇದೆ. ನಡೀರಿ, ಜೋಯಿಸ್ರೇ, ಆ ಭಾಗವತರಿಗೇನ್ ಮಾತು ಕೊಟ್ಟಬಿಟ್ಟಿಲ್ವಲ್ಲ?

ಪು.ಜೋ:— ಇಲ್ಲ, ಇಲ್ಲ, ಹೇಳಿದ್ದೇ....ಬರ್ಲಿಲ್ಲ ಅವ್ರು....

ಭೀಮು:— ಕೆಟ್ರು, ಅವ್ರು........ ಅಹಂಕಾರಕ್ಕೆ ಶಿಕ್ಷೆಯಾಯ್ತು ಬದುಕಿದ್ವಿ ನಾವು.... ಚಂದ್ರು, ಅನುರಾಗಕ್ಕೆ....

ಪು.ಜೋ:— ಏನು?

ಭೀಮು:— ಏನಿಲ್ಲ, ನನಗೆ ಇವನ್ಮೇಲೆ ತುಂಬಾ ಅನುರಾಗ........ ಇವನಿಗೊಂದು ಕೆಲ್ಸ ಕೊಡ್ಸಿದೆನಲ್ಲಾ ಅಂತ....ಸಂತೋಷ....

ಪು.ಜೋ:— ಭಗವಂತನ ಇಛ್ಛೆ!.... ಭಗವಂತನ ಇಛ್ಛೆ!!.... ಹೀಗೇ ಆಗುತ್ತೆ ಅಂತ ಯಾರಿಗ್ಹೇಳೋಕೆ ಸಾಧ್ಯ? ಈಗ ಆ ಕೃಷ್ಣ ಭಾಗವತರ ಕೈಗ್ಹೊರಟ್ಹೋಗ್ತಾ ಇತ್ತು, ಇಪ್ಪತ್ತು....ಇವನ ಕೈಗೆ ಬೀಳೋ ಹಾಗಾಯ್ತು.

ಭೀಮು:— ಅಷ್ಟೇನೇ? ಅಯ್ಯೋ ತಾವ್ಹೇಳಿದ ಭಗವಂತ, ಇನ್ನೂ ದೊಡ್ಡ BIG ಭಗವಂತ!! ಅವನ ವ್ಯಾಪಾರ ಯಾರಿಗ್ಗೊತ್ತು? ಇನ್ನೂ ಏನೇನಾಗತ್ತೋ!

ಸೀನಿ:— (ಪ್ರವೇಶಿಸಿ) ಒಹೋಹೋ, ಜೋಯಿಸ್ರೇ, ನಾನ್ನಿಮ್ಮನೇಗೇ ಹೊರ್ಟಿದ್ದೆ.

ಪು.ಜೋ:— ಯಾಕೋ........ (ಭೀಮೂಗೆ) ಇವ್ನು ನಮ್ಮ ರಾವ್ ಸಾಹೇಬ್ರ ಮನೆಯವ.... (ಸೀನಿಗೆ) ಬುಲಾವೇನೋ? ಆ?

ಸೀನಿ:— ಊ........ ಅದ್ಯಾರೋ "ಮೈಸೂರ್ನಿಂದ ಬರ್ತಾರೆ; ಹೇಳ್ಕಳಿಸ್ತೀನಿ" ಅಂದಿದ್ರಂತೆ. ಬಂದ್ರೋ ಇಲ್ವೋ, ಅವರು clubಗ್ಹೋಗ ಬಹುದೋ, ಕೇಳ್ಕೊಂಡ್ಬಾ ಅಂದ್ರು....

ಪು.ಜೋ:— ಅಯ್ಯೋ, clubಊ ಬೇಡ ಒಂದೂ ಬೇಡ ಅನ್ನೋ.... ನಾವೂ ಅಲ್ಲೀಗೇ ಹೊರಟಿದ್ವು........

ಭೀಮು :— ಜೋಯಿಸ್ರೇ, ಇವನು ಬಂದಿದ್ದು ಶುಭ ಶಕುನ! ಮೂರು ಜನ ಅಲ್ಲ, ಈಗ ನಾಕಾದ್ವು, ನಡೀರಿ........ನಿಮ್ಮ ಅಡ್ಡದಾರೀಗೆ ನಮಸ್ಕಾರ ಹಾಕಿ, ಹೀಗೆ ರಾಜ ಬೀದೀಲೇ ಉದ್ದಕ್ಕೆ ಹೊರಟ್ಹೋಗೋಣ.

ಪು. ಜೋ :— ನಡಿ. ನಡಿ. ನಮ್ಮ ಪುಣ್ಯವೇ ಪುಣ್ಯ ಇವತ್ತು. ನನ್ನ ಅದೃಷ್ಟವೇ ಅದೃಷ್ಟ ಇವತ್ತು. ಬೆಳಗ್ಗೆ 'ವರ ಸಿಗ್ಲಿಲ್ವೇ' ಅಂತ ಯೋಚನೆ ಮಾಡ್ತಾ ಹೊರ್ಟೆ, ನೀನ್ ಸಿಕ್ಬಿಟ್ಟೆ ಈಗ....

ಭೀಮು :— ಸಂಗೀತಗಾರರಿಗೆ ಜ್ಞಾಪಿಸೋಣ ಅಂತ ಹೊರಟೆದ್ರಿ, (ಚಂದ್ರೂನ ತೋರುತ್ತಾ) ಇವನ್ಸಿಕ್ಬಿಟ್ಟ.

ಪು. ಜೋ :— ಹೂ. ಮೂರು ಜನ ಅಂತ ವದ್ದಾಡ್ತಾ ಇದ್ವು........

ಭೀಮು }
ಪು. ಜೋ } — (ಸೀನೀನ ತೋರುತ್ತಾ) ಇವನ್ಬಂದ್ಬಿಟ್ಟ!

ಭೀಮು :— "ಕನುಕೊಂಟಿನೀ", ಆಗ್ಲೇ ಕಿವೀಲಿ ಕೇಳಿಸ್ತಾ ಇದೆ! ಜೋಯಿಸ್ರೇ!

ನಾಲ್ವರೂ ನಿಷ್ಕ್ರಮಿಸುವರು

— ತೆರೆ —

## ದೃಶ್ಯ ೫

[ರಾಮರಾಯರ ಮನೆ ಮುಂದಿನ ಕೋಣೆ. ಸೀತಮ್ಮ ಸರ್ವಾಲಂಕೃತಳಾಗಿ, ಸೆಂಗು—ನೆರಿಗೆ ಸರಿಮಾಡಿಕೊಳ್ಳುತ್ತಾ ಪ್ರವೇಶಿಸಿ ಬೀದಿ ಬಾಗಿಲು ಸೇರಿ]

ಸೀತ :--- ತಿಮ್ಮಾ !

ತಿಮ್ಮ :--- (ಹೊರಗಿಂದ) ಅಮ್ಮಾ? (ಹಿಂಬಾಗಿಲಲ್ಲಿ ರಾ.ರಾ. ಕಾಣಿಸಿಕೊಳ್ಳುವರು)

ಸೀತ:--- ಕಾಮಾಕ್ಷಮ್ಮ ಬಂದ್ರೇನೋ ?

ತಿಮ್ಮ :— (ಹೊರಗಿಂದ) ಇಲ್ರಮ್ಮ , ಅದೇ ನೋಡ್ತಾ ಈವ್ನಿ.

ಸೀತ: --- ಬರೋತ್ಲೊ ಹೇಳೋ.

ತಿಮ್ಮ :--- (ಹೊರಗಿಂದ) ಊರ್ರಮ್ಮ .

(ಸೀತಮ್ಮ ಮೊದಲನೆ ದೃಶ್ಯದಲ್ಲಿ ಪತಿಯು ಕುಳಿತ ಸೋಫಾದಲ್ಲೇ ಕುಳಿತು, ರೇಡಿಯೋ ತಿರುಗಿಸಿ, ಪಕ್ಕದ ಸಣ್ಣಮೇಜಿನ ಮೇಲಿರುವ Illustrated weekly ತೆಗೆದುಕೊಂಡು ಪುಟ ತಿರುವಿಹಾಕುತ್ತಾ ಬೊಂಬೆಗಳನ್ನು ನೋಡುತ್ತಾ ಸಂಗೀತ ಕೇಳುವಳು. ರಾ.ರಾ. ಪ್ರವೇಶಿಸಿ, ಮುಗುಳ್ನಗೆ ನಕ್ಕು coat-rack ಸಮೀಪಿಸಿ ರುಮಾಲಿಟ್ಟುಕೊಂಡು, ಚಿತ್ರ ತೆಗೆದುಕೊಳ್ಳಲು ಅದು ಕೈತಪ್ಪಿ ಕೆಳಗೆ ಬೀಳುವುದು. ಈ ಶಬ್ದ ಸೀತಮ್ಮನ ಲಕ್ಷ್ಯ ಸೆಳೆಯುವುದು.)

ಸೀತ :— (ಒಂದು ಚಿತ್ರ ತೋರುತ್ತಾ) ಅಲ್ಲಾಂsದ್ರೇ, ನೋಡಿದ್ರಾ ಇದನ್ನ ಅನ್ಯಾಯ ಅನ್ಯಾಯ ! ತ್ಸುತ್ಸುತ್ಸುತ್ಸುತ್ಸು !

ರಾ.ರಾ :— (ಪತಿಯನ್ನು ಸಮೀಪಿಸುತ್ತಾ) ಶುದ್ಧ ಅನ್ಯಾಯ, ಶುದ್ಧ ಅನ್ಯಾಯ. ಅದೇ ನಾನೂ ಹೇಳ್ಬೇಕೂಂತಿದ್ದೆ.

ಸೀತ:--- (ಎದ್ದು ಪತಿಯ ಪಕ್ಕ ಸೇರಿ) ಅಷ್ಟ್ relief ಕೊಡೋಕೆ ಆಗ್ಲಿಲ್ವೇ ?........ ಪೋಲೀಸೂ ಮಿಲಿಟರೀ ಇಷ್ಟೂ ಇಟ್ಕೊಂಡಿಷ್ಟೇನೇ ? ಹೀಗೆ ಜನಗಳನ್ನ ಸಾಯೋಕ್ಬಿಟ್ರೆ........ಯಾಕ್ನಗೋದೂ ?

ರಾ.ರಾ :— ಸಾಯಂಕಾಲ ಸತ್ತೋರ ಬೊಂಬೆಗಳ್ನ ನೋಡ್ಕೊಂಡ್ಕೊತ್ಕೊಂಡ್ಬಿಟ್ಯೋ ಇಲ್ವೋ ? (weekly ಕಸಿದು ಮೇಜಿನ ಮೇಲೆ ಬಡಿದು) ಇದೊಂದ್ ಹಾಳ್ ದರಿದ್ರ, ಮೂರ್ಹೊತ್ತೂ ಹೊಡ್ಕೋತಾ ಇರತ್ತೆ (ರೇಡಿಯೋ ನಿಲ್ಲಿಸಿ) ಸತ್ರು. ಇನ್ನೂ ಸಾಯ್ತಿದಾರೆ. ನಾವೇನ್ಮಾಡೋಕಾಗತ್ತೇ ? ಹೋಗ್ನಿಲ್ಲಿಸಬಲ್ವೇ ?........ ಅಂದ್ರೆ ನನಗೆ ಈ social and political welfareನಲ್ಲಿ interest ಇಲ್ಲ ಅಂತ ತಿಳ್ಕೋಬೇಡ. ಇದೆ. ನಿನಗಿಂತ ಜಾಸ್ತೀನೇ ಇದೆ....

....ಆದ್ರೆ ಮನೇ welfareನ ನೋಡ್ಕೊಂಡಲ್ವೇ ನೆರಮನೆ welfareಗಳ್ನ ನೋಡ್ಬೇಕಾದ್ದು? ಮನೇಲಿ ಕುದುರೆಗಳ್ನ ಬೆಳೆಸಿದ್ಹಾಗೆ ಬೆಳೆಸಿಟ್ಕೊಂಡು ಹೆಣ್ಮಕ್ಕಳ್ನ, ಅವ್ರಿಗೆ ಮದ್ವೆ ಯೋಚ್ನೆ ಮಾಡೋದ್ಬಿಟ್ಬಿಟ್ಟು ಮಂಗಳ ಗೌರಿ ಹಾಗೆ ಅಲಂಕಾರ ಮಾಡ್ಕೊಂಡು, ಸೋಫಾಲ್ಕೂತ್ಕೊಂಡು, ರೇಡಿಯೋ ತಿರಿಗಿಸ್ಕೊಂಡು, ಸತ್ಕೋರ ಬೊಂಬೇಗೆ "ತ್ಸುತ್ಸುತ್ಸುತ್ಸುತ್ಸು" ಅಂತ ಕನಿಕರ ತೋರಿಸ್ತಾ, ಇರೋರ ಯೋಗಕ್ಷೇಮಾನ ವಿಚಾರಿಸದೆ ಕಾಲ ಕಳೀತಿದ್ದೀಯಲ್ಲಾ, ಅನ್ಯಾಯ, ಅನ್ಯಾಯ, ಶುದ್ಧ ಅನ್ಯಾಯ!

ಸೀತ:— ಮುಗೀತೋ ಮುಗೀತೋ............

ರಾ.ರಾ:— ಇಲ್ಲ, ಇನ್ನು ಸ್ವಲ್ಪ ಬಾಕಿ ಇದೆ. ನೀನ್ಹ್ಯಾಗೆ ಕಾಲ ಕಳೆದ್ರೂ ನಿನ್ನ ಕೇಳೋರಿಲ್ವೇ! ಅದ್ರೆ ನಾನ್ ತಲೆ ಎತ್ಕೊಂಡೋಡಾಡೋ ಹಾಗಿಲ್ಲ. ಪಕ್ಕದ್ಮನ್ಯೋರೆಲ್ಲಾ ಏನಂದ್ಕೋತಿದಾರಂತೆ ಗೊತ್ತೇನು? ಆ ನಿಮ್ಮ ಸಮಾಜದ ಸೆಕ್ರೆಟ್ರೀಗೆ,—ಅವಳು ಮಾಡೋ ಭಾಷಣಗಳ್ನೆಲ್ಲಾ ಬರ್ಕೊಡ್ತಾನಲ್ಲ, ಅವಳ ಗಂಡ,—ನಿನ್ನೆ ತಾನೇ clubನಲ್ಹೇಳಿದ್ರೂ........

ಸೀತ:—ಸಾಕೂ.... (ಸೆರಗು ಕಣ್ಣಿಗೆ ಹಚ್ಚಿ ಸೀರೂರೆಸಿಕೊಳ್ಳುತ್ತಾ) ಸ್ಹಾಕ್ಹು.... ನ್ಹಂಗ್ಹೆಲ್ಲಾ ಗ್ಹೊತ್ತಿದೆ....ಮಾತು ತಿರಿಗ್ಸೋಕೆ ಚೆನ್ನಾಗ್ಬರತ್ತೆ,

ರಾ.ರಾ:— ಅಯ್ಯಯ್ಯೋ, ನಂಗೆ ಮಾತು ತಿರಿಗ್ಸೋಕೆ ಬರೋಕಿಂತ ನಿನಗೆ ಕಣ್ಣಲ್ಲಿ ನೀರು ತರಿಸೋಕೆ ಚೆನ್ನಾಗ್ಬರತ್ತಲ್ಲೇ! ಅಳ್ಬೇಡ, ನಿಲ್ಸು, ಆಮೇಲೆ ಸಮಾಜದಲ್ಲಿ ಯಾರಾದ್ರೂ- "ಇದ್ಯಾಕ್ರೀ ಸೀತಮ್ನೋರೇ, ನಿಮ್ಮುಖ ಇವತ್ತು ಎಂದಿನ್ಹಾಗೆ ಕಳಕಳಿಸ್ತಾ ಇಲ್ಲ" ಅಂತ ಕೇಳ್ಯಾರು!

ಸೀತ:— ಅಯ್ಯೋ, ನೀವ್ಹೋಗ್ಬಾರ್ದೇ ನಿಮ್ಮ ಹಾಳು clubಗೇ? (ತಾನು ಒಳ ಬಾಗಿಲು ಕಡೆಗ್ಹೊರಡಲು)

ರಾ.ರಾ:— (ಹಿಂಬಾಲಿಸುತ್ತಾ) ಸೀತಾ, ಸೀತಾ, No...No...No... ಇಷ್ಟಕ್ಕೆಲ್ಲಾ ಇಷ್ಟು ಕೋಪಿಸ್ಕೊಂಡ್ಬಿಟ್ರೆ ಹ್ಯಾಗೇ?

ಸೀತ.— ನೀವು ಸುಮ್ನಿರಿ, ನನ್ಮಾತಾಡಿಸ್ಬೇಡಿ.

ರಾ.ರಾ:— ಅದ್ಹ್ಯಾಗೆ ಸಾಧ್ಯವೇ ? cosmic raysಗಿಂತ powerful ಆಗಿರೋ ನಿನ್ನ cosmetic faceನ resistಮಾಡೋಕೆ........

ಸೀತ:--- ಬೇಡಾ, ಬೇಡಾ.... ohhh!... (ಒಳ ಬಾಗಿಲ ಹೊಸಿಲು ದಾಟುವ ಹೊತ್ತಿಗೆ ರಾ.ರಾ. ಹೋಗಿ ಅವಳ ಕೈ ಹಿಡಿದು ನಿಲ್ಲಿಸಿ ಒಳಗೆ ಕರೆಕೊಳ್ಳುತ್ತಾ)

ರಾ.ರಾ:— ಇಲ್ವೇ, ಇಲ್ವೇ. ಬಾರೇ.... (ಸೀನಿ ಪ್ರವೇಶಿಸಿ, ಪ್ರಣಯ ಕಲಹದ ಸಂದರ್ಭ ಕಂಡು, ಬಾಗಿಲು ಕಡೆ ಮುಖ ಮಾಡಿ ಕಣ್ಮುಚ್ಚಿಕೊಂಡು)

ಸೀನಿ:— ಆ....ಊ....ಆಹೆಮ್ !

ರಾ.ರಾ:— ಓ !....ಸೀನಿ !.... ಏನೋ ?

ಸೀನಿ:— ಅವ್ರೆಲ್ಲಾ ಬಂದ್ರು ಸ್ವಾಮೀ. (ಹೊರಗೆ ಓಡಿಹೋಗುವನು)

ರಾ.ರಾ:--- ಸೀತಾ !

ಸೀತ:— ಇನ್ನೂ ಸ್ವಲ್ಪ ಗಟ್ಟಿಯಾಗ್ಹ್ಯಾಗಿ, ಎಲ್ರೂ ಕೇಳ್ಳಿ ನಿಮ್ಮ ಮುದ್ದಿನ್ನ....ಅಯ್ಯೋ ರಾಮು !

ರಾ.ರಾ:— ಆ ? ನನ್ಹೆಸರ್ಮಾತ್ರ ನೀನ್ಹ್ಯಾಗಬಹುದೂ........

ಸೀತ:— **ನೀವು ಸುಮ್ನಿರ್ತೀರೋ ಇಲ್ವೋ ಅಂದ್ರೇ ?**

ಪು.ಜೋ:— (ಹೊರಗೆ) ರಾವ್ ಸಾಹೇಬ್ರೇ !

ರಾ.ರಾ:— ಅಗೋ ಬಂದ್ಬಿಟ್ರು........ ಲೇ, ನಾನು ಸುಮ್ನಿರ್ತೀನೆ. ....ಅಗೊ ಅಗೋ ನಿನ್ನ ಅಳಿಯಂದಿರೂ ಬಂದ್ಹಾಗಿದೆ....ಅವರ್ಹೊರಟ್ಹೋದ್ಮೇಲೆ ಮುಂದರಿಸೋಣ ನಮ್ಮ....ಸಂಭಾಷಣೆ.... (ಪು.ಜೋ, ಭೀಮು, ಚಂದ್ರು ಪ್ರವೇಶಿಸಲು): ಓಹೊಹೊಹೊಹೊ ದಯಮಾಡಿಸಬೇಕು, ದಯಮಾಡಿಸಬೇಕು.... ನೀವು ಮರೆತ್ಬಿಟ್ರೇನೋ, ಏನ್ಸಮಾಚಾರ, ವಿಚಾರಿಸ್ಕೊಂಡ್ಬಾ ಅಂತ ಸೀನೀನ ಕಳಿಸ್ದೆ.

ಪು.ಜೋ:— ಮರಿಯೋದುಂಟೆ, ರಾವ್ ಸಾಹೇಬ್ರೇ ! ಈಗದೆಲ್ಲಾ

ಇಲ್ಲಿ, ನಿಮ್ಮ ಸರೋಜನ ಮದ್ವೆ ಆಗ್ಹೋಯ್ತು ಅಂತಿಟ್ಕೊಳ್ಳಿ. (ನಿಂತಿರುವ ಭೀಮು ಚಂದ್ರೂಗೆ) ಬನ್ರಯ್ಯ, ಬನ್ನಿ, ಬನ್ನಿ....

ರಾ.ರಾ :— ದಯಮಾಡಿ, ದಯಮಾಡಿ, ಕೂಡಿ ಕೂಡಿ....... ಹೀಗ್ಕೂಡಿ.

ಪು.ಜೋ :— ಕೂತ್ಕೊಳ್ರೋ.... (ರಾ.ರಾ.ಗೆ) ತಾವೂ ಕೂಡೋಣಾಗ್ಲಿ.... (ತಾನೂ ಕುಳಿತು)

ರಾ.ರಾ :— ಅದೇನೋ ಸರೋಜನ ಮದುವೆ.... (ಸರೋಜ ಕಿಟಕಿಯಲ್ಲಿ ಕಾಣಿಸಿಕೊಳ್ಳುವಳು. ಜೋಯಿಸ ಭೀಮು ಗಮನಕ್ಕೆ ತರುವನು)

ಪು.ಜೋ :— ಹೂ, ಆದ್ಹಾಗೇ ಅಂತ್ಹೇಳಿದೆನಲ್ಲಾ !

ರಾ.ರಾ :— ಓಹೊಹೊ.... ಇವರು ಯಾವಾಗ ದಯಮಾಡಿಸಿದ್ರು ಮೈಸೂರಿಂದ ?

ಪು.ಜೋ :— ಮೈಸೂರ್ನೋನಿನ್ನೂ ಬರ್ಲೇ ಇಲ್ಲ. ಬೆಳಿಗ್ಗೆ ಅನಾನ್ಕೂಲ್ವಾಯ್ತು, ರಾತ್ರಿ ಗಾಡೀಗೆ ಬರ್ತೀನೆ ಅಂತ ತಂತಿ ಕಳ್ಸಿದಾನೆ....

ರಾ.ರಾ :— ಮತ್ತೇ........? (ಭೀಮು, ಚಂದ್ರು ಯಾರು ಎಂಬ ಪ್ರಶ್ನೆ ಬರುವಂತೆ ನೋಡಲು)

ಪು.ಜೋ :— ಅಯ್ಯೋ, ನಾನ್ನೋಡಿ, ಪರಿಚಯವೇ ಮಾಡ್ಕೊಡ್ಲಿಲ್ವೇ ! ಇಗೋ, ಇವ್ನೇ ಸರೋಜನ ಗಂಡ !

ಭೀಮು :— (ರಾ.ರಾ.ಗೆ) ನಮಸ್ಕಾರ !

ಪು.ಜೋ :— (ಭೀಮೂಗೆ ರಾ.ರಾ.ನ ತೋರುತ್ತಾ) ನಿಮ್ಮಾವ !

ರಾ.ರಾ :— ಹಹಹಹ (ನಮಸ್ಕಾರ ಮುದ್ರೆ)

ಪು.ಜೋ :— (ಭೀಮೂಗೆ) ಅಗೋ (ಸೀತಮ್ಮನನ್ನು ತೋರುತ್ತಾ) ಅವ್ರು ನಿಮ್ಮತ್ತೆ ! (ಭೀಮು, ಸೀತ ಪರಸ್ಪರ ನಮಸ್ಕಾರ ಹುದ್ರೆ ಹಾಕಿ ನಗುಮುಖತೋರುವರು) ಇನ್ನು (ಚಂದ್ರೂನ ತೋರುತ್ತಾ) ಇವನು....ಇವನ ವಿಷಯ ಆಮೇಲ್ಹೇಳ್ತೀನೆ.

ಒಬ್ಬೊಬ್ರದಾಗಾಗ್ಲಿ. ನಾನಿವತ್ತು ಬೆಳಿಗ್ಯೆ ಇಲ್ಲಿಂದ ಹೊರಟ್ನಲ್ಲ, ರಸ್ತೇನಲ್ಲಿ ಇವನು ಸಿಕ್ಬಿಡಬೇಕೇ? ಆಗ಼್್ಲ ನನಗೆ ವಿಷಯ ಹೊಳೀಲಿಲ್ಲ. ಮಾತಿಗೆ ಮಾತ್ಬಂತು....ಥಟ್ನೆ ಹಿಡಿದೆ....ಒಪ್ಬಿಟ್ಟ....ಇವನ ತಂದೇನೂ ನಾನೂ ಹಿಂದೆ ಬಾಲ್ಯ ಸ್ನೇಹಿತರಾಗಿದ್ವು.... ಬಹಳ ಒಳ್ಳೇ ಮನುಷ್ಯ!.... ಚೆನ್ನಾಗಿ ಓದಿಸ್ದ.... ಬೇಕಾದಷ್ಟಾಸ್ತಿ ಬಿಟ್ಟ.... ಮದುವೆ ಮಾಡಿಸೋ ಅದೃಷ್ಟ ಅವನಿಗಿರ್ಲಿಲ್ಲ, ಪಾಪ.... ಇವನೂ ತಂದೇ ಹಾಗೇ.... ನೋಡಿ, ಇನ್ನು ಮಿಕ್ಕದ್ದೆಲ್ಲಾ ನಿಮ್ಮ ನಿಮ್ಮ ಸಂತೋಷ.

ರಾ.ರಾ:— ಸರಿ. ಸರಿ. ತಾವ್ಹೇಳ್ಬಿಟ್ಮೇಲೆ....ಅಂ....ಜೋಯಿಸ್ರೇ.... ಇವ್ರಿಗೆ....ನಮ್ಮ ಸರೋಜನ ವಿಷಯ.... (ಭೀಮು, ಜೋಯಿಸ ಪಿಸುಗುಟ್ಟುವರು)

ಸೀತ:— ನೀವು ಸುಮ್ನಿರ್ಬಾರ್ದ್ದೇ ಅವರ್ಮಾತಾಡ್ತಾ ಇರೋವಾಗ?

ರಾ.ರಾ:— (ಸತಿಗೆ) yes... yes... (ಜೋಯಿಸರಿಗೆ) ಊ....ಆಮೇಲೆ?

ಪು.ಜೋ:— ಆಮೇಲೇನೂ, ಅವ್ನೊಪ್ಕೊಂಡಿದಾನೆ ಅಂತ್ಹೇಳಿದ್ಮೇಲೆ ........ಅಂದ್ಹಾಗೇ, ಸರೋಜ ಇದಾಳೇನು ಮನೇಲಿ?

ಸೀತ:— ಇದಾಳೆ.

ರಾ.ರಾ:— ಇದಾಳೆ.

ಪು.ಜೋ:— ಸಂತೋಷ. ಒಳ್ಳೇದೇ ಆಯ್ತು. Photo ಕೊಟ್ಟಿದ್ರಲ್ಲ, ಅದನ್ನ ತೋರಿಸ್ದೆ. ಒಪ್ಪಿದಾನೆ. ಆದ್ರೂ ಹ್ಯಾಗೂ ಮನೇಲೇ ಇರೋವಾಗ, ಒಂದುಸಾರಿ ನೋಡ್ಬಿಡೋದು ... ಉತ್ತಮ ಅಂತ....

ರಾ.ರಾ:— ಹೌದ್ಹಾದು.... ಆದ್ರೇ.... (ಸೀತಮ್ಮನಿಗೆ) ನೋಡೇ.... ಅಲ್ಲೇ ಹೋಗಿ.... ಉಂ.... ಹೇಳೇ.... ಕರ್ಕೊಂಡ್ಬಾರೇ.... (ಭೀಮೂಗೆ) ಏನಿಲ್ಲ.... ಅವಳು.... ಒಂದು ತರಹ.... delicacy ಅನ್ನಿ.... "ತಾನು ಯಾರನ್ನೂ ನೋಡೋದೇ ಇಲ್ಲ, ತನ್ನೂ ಯಾರೂ ನೋಡ್ಬೇಕಾದ್ದೇ ಇಲ್ಲ" ಅಂದಿದ್ಳು.... ಆದ್ರಿಂದ....

ಭೀಮು :— ಓಹೋ, ಹಾಗೇನು ? ಹಾಗಾದ್ರೆ (ಸೀತಮ್ಮನಿಗೆ) ನೀವು ತೊಂದ್ರೆ ತೊಗೋಬೇಡಿ. ಹೆಂಗಸರ ಮನಸ್ಸಿನ್ನ ನೋಯಿಸೋ ಸ್ವಭಾವ ಅಲ್ವೇ ಅಲ್ಲ ನಂದು, in general. ಇನ್ನು, in particular, ಹೆಂಡ್ತೀ delicate feelingsನ wound ಮಾಡೇನೇ ? ನಾನೇನೂ ಅವರ್ನ ನೋಡ್ಬೇಕಾದ್ದಿಲ್ಲ ; Photo ನೋಡಿದೇನೆ, ಸಾಕು. ಆದ್ರೆ ನಂದೊಂದು ತರಹಾ principleಉ. ಸಂಸಾರ ಸುಖವಾಗಿ ನಡೀಬೇಕಾದ್ರೆ ಹೆಂಡ್ತಿ ಆಗೋಳು ಗಂಡನ್ನೂ ಒಪ್ಬೇಕು ಅಂತ. ಅವಳಿಗಿಷ್ಟವಿಲ್ದೆ ಹೋದ್ರೆ ಬಲವಂತ ಎಂದಿಗೂ ಮಾಡ್ಕೂಡ್ದು ಅಂತ. ಆದ್ರಿಂದ ಅವರ್ಗೂ ನನ್ನ ನೋಡೋಕೆ ಒಂದು ಅವಕಾಶ ಸಿಕ್ಲಿ, 'ಬೇಕು ಬೇಡ' ಅಂತ್ಹೇಳೋಕೆ ಒಂದು opportunity ಇರ್ಲಿ ಅಂತ 'ಕರೆಸಿ' ಅಂದೆ ಅಷ್ಟೆ. ನಮ್ಮಲ್ಲಿ divorce ಇಲ್ದೆ ಇರೋದ್ರಿಂದ, ಮದ್ವೇಗ್ಮುಂಚೇನೇ ಇಬ್ರೂ ಸಂತೋಷವಾಗಿ ಒಪ್ಪೋದು ಅಗತ್ಯ. ಆಮೇಲೆ ನನ್ನ ಬಣ್ಣ ಕಪ್ಪು, ಕಣ್ಣು ಸೊಟ್ಟ ಅಂತ ಕೊರಗ್ಬಾರ್ದು ನೋಡಿ! But... ನಿಜವಾಗ಼್ೂ, ಅವರು "ನೋಡ್ಬೇ ಬೇಕಾದ್ದಿಲ್ವೇ ಇಲ್ಲ" ಅಂತ ನಿರ್ಧಾರ ಮಾಡ್ಕೊಂಡು, "ಗಂಡ ಹ್ಯಾಗ್ಬೇಕಾದ್ರೂ ಇರ್ಲಿ, ನಾನ್ಮದ್ವೆ ಮಾಡ್ಕೊಳ್ತೀನೆ" ಅಂತ ಇದ್ರೆ, ಅವ್ರಿಗೆ ತೊಂದ್ರೆ ಕೊಡ್ಬೇಡಿ. ಅಂತರಪಟ ಎಳೆದ್ಮೇಲೇ, ಶಾಸ್ತ್ರೋಕ್ತವಾಗ್ಯೇ ಒಬ್ಬರ್ನೊಬ್ರು ನೋಡ್ತೀವೆ.

ರಾ.ರಾ :— ಭೇಷ್, ಭೇಷ್ !... (ಸೀತಮ್ಮನಿಗೆ) ಬೇಡ ಬಾರೇ.... ಒಳ್ಳೇದೇ ಆಯ್ತು.... ಅಲ್ವೇ, ಜೋಯಿಸ್ರೇ ?

ಪು.ಜೋ :— ಅಲ್ವೇ ?.... (ಸೀತಮ್ಮನಿಗೆ) ಏನಮ್ಮ, ಹಾಗಾದ್ರೆ ಮುಹೂರ್ತ ಇಟ್ಬಿಡ್ಲೋ ? (ಸರೋಜ ತನ್ನ ಕೋಣೆಯ ಬಾಗಿಲು ತೆಗೆದು ಹೊಸಲಿನ ಹತ್ತಿರ ಕಾಣಿಸಿಕೊಳ್ಳುವಳು) ಅಗೋ ! ಸರೋಜಾ !

ಸರೋಜ :— (ಪ್ರವೇಶಿಸುತ್ತಾ) ಹಹಹಹಹ....ಏನಪ್ಪಾ, clubಗ್ಹೋಗ್ಲೇ ಇಲ್ವೇ ಇವತ್ತು ? ಅಮ್ಮಾ, ನೀನೂ ಸಮಾಜಕ್ಕ್ಹೋಗೇ ಇಲ್ಲ ?

ಸೀನಿ :— (ಪ್ರವೇಶಿಸಿ) ಅಮ್ಮಾ, ಕಾರ್ ಬಂದಿದೆ. ಕಾಮಾಕ್ಷಮ್ನೋರು ಬಂದ್ರು....

ಸೀತ :— ಓ....ಬಂದೆ.... (ಬೀದಿ ಕಡೆ ಹೊರಡಲು)

ಸರೋಜ :— ನಾ ಹೇಳ್ತೀನ್ನೀನಿಲ್ಲೇ ಇರು...... .... (ತಿಂನು ಸೀನಿಯನ್ನು ಸಮೀಪಿಸಿ) ಸೀನಿ, ಜಾಣ ನೀನು (ಅವನ ಬೆನ್ನು ತಟ್ಟಿ) ಕಾಮಾಕ್ಷಮ್ಮನಿಗ್ಹೇಳು, ಇವತ್ತು ಅಮ್ಮನಿಗೆ ಬರೋಕಾಗೋಲ್ವಂತೆ, ಏನೋ ಕೆಲಸ ಇದೆಯಂತೆ ಅಂತ........ ಹೋಗು........ ಹೋಗು (ಅವನನ್ನು ಹೊರಗಟ್ಟಿ) ತಪ್ಪೇನಮ್ಮ ನಾನ್ಹೇಳ್ಕಳ್ಸಿದ್ದು ? ಮನೇಗೆ ಯಾರ್‍ಯಾರೋ guests ಬಂದಿರೋವಾಗ ಹೊರಗ್ಹೊರಟ್ಹೋಗೋದು incorrectಉ ಅಂತ ನಾನು ತಿಳ್ಕೊಂಡೇ........ ಜೋಯಿಸ್ರೇ, ಬೆಳಗ್ಗೆ ಕೇಳಿದ್ರಲ್ಲ ನನ್ನ, "walking ಆಯ್ತೇ" ಅಂತ, ಇಗೋ ಈಗ ಹೊರಟಿದ್ದೆ ; again, ಹೋಗೋದು incorrectಉ ಅಂತ ನಿಂತ್ಬಿಟ್ಟೆ.

ರಾ.ರಾ :— ಇಲ್ಲ, ಇಲ್ಲ ...ಸರೋಜ, ಏನ್ ಪರವಾಇಲ್ಲ.... ನೀನು ಬೇಕಾದ್ರೆ, ಹೋಗು........

ಭೀಮು :— ಛೆಛೆಛೆ.... ಇದೇನ್, ಜೋಯಿಸ್ರೇ, ನನಗೆ....ಅರ್ಥವಾಗೋಲ್ಲ........ಮಗಳು ಮನೇಲಿರ್ತೀನೆ ಅಂದ್ರೆ, ತಂದೆ "ಹೋಗು" ಅಂತಂತಿದಾರಲ್ಲ ?

ಪು.ಜೋ :— ತಪ್ಪೂ, ತಪ್ಪೂ.... ರಾವ್ ಸಾಹೇಬ್ರೇ.... ತಪ್ಪೂ.... ಗಂಡ ಮನೇಗ್ಬಂದಿರೋವಾಗ.... (ಸರೋಜಳ ಪಕ್ಕ ಸೇರಿ ಮೆಲ್ಲನೆ) ಸರೋಜ, ನೀ ಜಾಣೆ....ಇರೂ... ನೋಡಿದ್ಯಾ ಇವನ್ನ ? ನೀನ್ಬೇಡ ಅಂದ್ಬಿಟ್ರೆ ಹೊರಟೇ ಬಿಡ್ತಾನೆ. ಆದ್ರೆ, ಸರೋಜ, ಈ ಒಂದ್ಸಾರ್ತೀನಾದ್ರೂ ನನ್ಮಾತ್ಕೇಳು.... ಬಹಳ ಒಳ್ಳೇ ಹುಡುಗ.... ...ನೋಡಿದ್ಯೋ ಇಲ್ವೋ, ನಿನ್ಕಡೇನೇ ಮಾತಾಡ್ತಾನೇ ; ಹೆಸರು "ಭೀಮು" ಆದ್ರೂನೂ ಸ್ವಭಾವ "ಧರ್ಮರಾಯ"ಂದು ; ಮನೆಯೋ ದೊಡ್ಡ ಬಂಗಲಿ ; ಬೇಕಾದಷ್ಟು ಜನ ಆಳು ಕಾಳು ; ಐಶ್ವರ್ಯವಂತೂ.... ನೀನು ಚಕ್ರವರ್ತಿನಿ ಹಾಗಿರಬಹುದು, ಸರೋಜ ! ಹಿಂದಿನ್ಹಾಗೇ ಈ ಸಾರೀನೂ ನೀನು ಒಲ್ಲೆ ಅಂದ್ರೆ.... ನೀನೇ ಯೋಚ್ನೆ ಮಾಡ್ಕೋ....ತಿಳಿದೋಳು....ನಾನ್ಹೇಳ್ಬೇಕಾದ್ದಿಲ್ಲ....ಆದ್ರೊಂದು ....ಒಂದೊಂದ್ಸಾರಿ ನಿನ್ಹಾಗೇ ಅವನೂ ಹಟವಾದೀ........

ಸರೋಜ:— ಓೀೀೀ !

ಪು. ಜೋ:— ಹೂ....ಅವ್ನಿಗೆ ಸಂಗೀತ ಅಂದ್ರೆ ಆಗೋಲ್ಲ. ಇಲ್ಲೀ ಗ್ಬರ್ಬೇಕಾದ್ರೆ, "ಏನ್ಬೇಕಾದ್ರೂ ಮಾಡಿ, ಸಂಗೀತ ಮಾತ್ರ ಹೇಳಿಸ್ಬೇಡಿ" ಅಂದ. ಅದಕ್ಕೋಸ್ಕರ್ ಈಗ್ನೀನು ಹಾಡ್ಬೇಳ್ಬೇಡ. ಮದ್ವೆ ಆಗ್ಹೋಗ್ಲಿ, ಆಮೇಲ್ನಿನ್ನಿಷ್ಟ, ಅವನ್ಬೇಕಾದ್ಮಾಡ್ಕೊಳ್ಳಿ, ನಿನ್ನಪಾಡಿಗ್ನೀನ್ ವೀಣೆ ಇಟ್ಕೊಂಡ್ಬಾರಿಸ್ತಿರು. (ಭೀಮೂ ಕಡೆಗೆ ಬರುತ್ತಾ) ಭೀಮೂ, ನೀನೇನೂ ಯೋಚ್ನೆ ಮಾಡ್ಬೇಡ, ಸಂಗೀತದ ವಿಷಯ ಹೇಳ್ಬಿಟ್ಟಿದ್ದೇನೆ. ರಾವ್ ಸಾಹೇಬ್ರೇ, ಇವ್ನಿಗೆ ಸಂಗೀತ ಅಂದ್ರೆ ತಲೆನೋವು ....... ಅದರ ಜ್ಞಾನವೇ ಇಲ್ಲ........

ಸರೋಜ:--- (ಹಾಡುವಳು) — "ಸಾಕ್ಷಾತ್ಕಾರನೀ, ಸದ್ಭಕ್ತಿ।"

ಪು. ಜೋ:— ಅಯ್ಯಯ್ಯೋ, ಸರೋಜಾ, ಹೋಯ್ತು, ಹೋಯ್ತು.

ಸೀತ:— ಸರೋಜ, ಬೇಡವ್ಮ.

ರಾ. ರಾ:— ಲೇ, ನಿನ್ನ ಸದ್ಭಕ್ತೀಗೆ ಸಾಕ್ಷಾತ್ಕಾರ್ವಾಗ್ಲಿ, ಹೋಗೇ ಹೊರಗೇ ... ಇಲ್ಲಾ ಒಳಗೇ !

ಸರೋಜ:— ಹಹಹಹ.... "ಸಾಕ್ಷಾತ್ಕಾರನೀ ಸದ್ಭಕ್ತಿ...."

(ರಾ. ರಾ. ಮತ್ತು ಸೀತಮ್ಮ ತಡಿಯಲೆತ್ನಿಸುವರು. ಜೋಯಿಸ "ಸುಮ್ಮನಿರಿ" ಎಂದು ಸಂಜ್ಞೆ ಮಾಡಲು, ಅವರು ಒಳರ್ಥ ತಿಳಿದುಕೊಳ್ಳದೆ, ಹಾಗೆಯೇ ಕಿವಿಗಳಲ್ಲಿ ಬೆಟ್ಟು ಇಟ್ಟುಕೊಂಡಿರುವ ಭೀಮೂನೂ ನೋಡಿ ಏನುಮಾಡಲೂ ತೋರದೆ ಇರುವರು)

ಸಾಕ್ಷಾತ್ಕಾರನೀ, ಸದ್ಭಕ್ತಿ
ಸಂಗೀತಜ್ಞಾನ ವಿಹೀನಲುಕು,
ಜೋಯಿಸ್ರೇ ಸಂಗೀತ ಜ್ಞಾನ ವಿಹೀನಲುಕು
ಮೋಕ್ಷಮು ಗಲದಾ ? ಭುವಿಲೋ
ಜೀವನ್ಮುಕ್ತುಲುಗಾನಿ.... ...........

(ಕೀರ್ತನೆ ಪೂರ್ತಿ ಹಾಡಿ)

ಜೋಯಿಸ್ರೇ, ಅವ್ರಿಗೆ ಸಂಗೀತ ಇಷ್ಟ ಅಂದ್ರಲ್ಲಾ, ಸಾಕೋ ಇನ್ನೊಂದ್ ಹಾಡ್ಲೋ ?

ರಾ.ರಾ :--- ಸಾಕೇ ಸಾಕೇ ಸಾಕು, ತೊಲಗು ಸಧ್ಯ! ನಿನ್ನ ಸಂಗೀತ, ನಿನ್ನ ಜ್ಞಾನ, ನಿನ್ನ ಮೋಕ್ಷಾ! (ಸರೋಜ ಇದನ್ನು ಸಹಿಸದೆ ಗಂಭೀರ ಕ್ರೋಧ ಮಿಶ್ರವುಳ್ಳ ಮುದ್ರೆಯಿಂದ ತಾವೆಯನ್ನು ನೋಡಲು)

ಭೀಮು :— (ರಾ.ರಾ.ಗೆ) ದಯವಿಟ್ಟು ಕ್ಷಮ್ಸಿ. ತಾವು ಅವರ್ನ ಈ ರೀತಿ ಆಗ್ರಹಪೂರ್ವಕವಾಗಿ ಮಾತಾಡ್ಸಿದ್ದಕ್ಕೆ ಕಾರಣ ನನಗೆ ಅರ್ಥವಾಗ್ಲಿಲ್ಲ. ಅವರ ಸೊಗಸಾದ "ವೀಣಾ ವಾದನ",—ವೀಣೆ ಆಲೈಸ್ತಾ ಇದ್ದಾಗೇ ಇತ್ತು. ನಿಮಗೆ ಅದರ ಇಂಪು ಸಹಿಸದೆ, ಸೊಗಸದೆ ಇದ್ದ ಪಕ್ಷದಲ್ಲಿ ದೋಷ ಅವರ್ದಲ್ಲ. ಏನ್ ಜೋಯಿಸ್ರೇ ?

ಪು.ಜೋ :— ಅದ್ಹ್ಯಾಗಾದೀತೋ ? ಘನ ಘನ ಘನವಾದ ಸಂಗೀತ. ಏನು ಸುಶ್ರಾವ್ಯವಾಗಿತ್ತು !

ರಾ.ರಾ :--- ಸಂಗೀತ ಮುಂ—ಮೋಚ್ತು, ಜೋಯಿಸ್ರೇ; ಯಾರಿಗ್ಬೇಕಿವಳ ಸಂಗೀತ ? ಇವರಿಗೆ ಸಂಗೀತ ಅಂದ್ರೆ ಆಗೋಲ್ಲ....ತಲೇ ನೋವು ಅಂದ್ರಿ. ಇವಳು ಪ್ರಾಣ ..ಅನಿಲ–ಸಂಯೋಗ ಅಂತ....

ಭೀಮು :— ಏನು ? 'ಸಂಗೀತ ಅಂದ್ರೆ ಆಗೋಲ್ಲ' ?' ತಲೆ ನೋವು' ? ತಾವೇನೋ ತಪ್ಪು ತಿಳ್ಕೊಂಡ್ಬಿಟ್ಟಿರ್ಬೇಕು, ಜೋಯಿಸ್ರೇ....

ಪು.ಜೋ :— ಹಾದ್ಹ್ಹಾದು. ಇವ್ನಿಗೆ ಸಂಗೀತ ಅಂದ್ರೆ ಪಂಚಪ್ರಾಣ, ಕೇಳ್ದೆ ಇದ್ರೆ ತಲೆ ನೋವು ಅಂತ್ಹೇಳಿರ್ಬೇಕು. ಅದೇ ಅಲ್ವೇ, ಸರೋಜ, ನಾನ್ಹೇಳಿದ್ದು ?

ಸರೋಜ :— ಆ ?

ಪು.ಜೋ :— ಹೂ, ನೀನ್ನೋಡಾ ಅಂದಿ, "ಅವ್ರಿಗೆ ಸಂಗೀತ ಇಷ್ಟ ಅಂದ್ರಲ್ಲಾ' ಸಾಕೋ ಇನ್ನೊಂದ್ಹಾಡ್ಲಾ" ಅಂತ.... (ಸರೋಜ ತುಟಿ ಕಡಿದು ಕೊಳ್ಳುವಳು)

ಭೀಮು :— Exactly, ನೋಡಿದ್ರಾ ? ಇಲ್ದಿದ್ರೆ ಅವರಷ್ಟು ತೊಂದ್ರೆ ತೊಗೊಂಡು ಯಾಕೆ ಹಾಡ್ತಾ ಇದ್ರು ?

ಸರೋಜ :— ಓ ? (ಭೀಮು, ಪು.ಜೋ ಈರ್ವರನ್ನೂ alternateಆಗಿ ನೋಡುವಳು)

ರಾ.ರಾ :— ಹೌದೂ....ಆದ್ರೆ....ನೀವು, ಕಿವೀಲಿ ಬೆಟ್ಟಿಟ್ಕೊಂಡೂ....

ಭೀಮು :— Oh ! ನನ್ನ pose ನಿಮ್ಮನ್ನ mislead ಮಾಡ್ತೋ ? ಅರ್ಥವಾಯ್ತು. ಆದೂ, ಅವರ ಸೊಗಸಾದ ಸಂಗೀತಕ್ಕಾತ್ರ, ಎಷ್ಟು ಬೇಕೋ ಅಷ್ಟು, ಜಾಗ ಬಿಟ್ಕೊಂಡು, ಬಾಕಿ extraneous ಶಬ್ದ ಯಾವ್ದೂ ಒಳಗೆ ಹೋಗದೆ ಇರ್ಲಿ ಅಂತ, sound control ಮಾಡ್ತಾ ಇದ್ದೆ.

ಸರೋಜ :— ಓಃಃಃ ? (wounded at the deceit)

ರಾ.ರಾ :— ಓಃಃ ! (ಭೀಮೂಗೆ) ಹಾಗಾದ್ರೆ ನಿಮಗೆ ಸಂಗೀತ ಇಷ್ಟ ಅನ್ನಿ ?

ಭೀಮು :— ಇಷ್ಟಾ ? ಇಷ್ಟವಲ್ಲ, ಪ್ರಾಣ. ಅದ್ರಲ್ಲೂ ಇಂಥಾ ಕೋಕಿಲಗಾನ ಕೇಳ್ಬಿಟ್ರಂತೂ, ಹುಚ್ಚು.

ಸರೋಜ :— ಹುಚ್ಚು !

ಭೀಮು :— ಏನ್ ಜೋಯಿಸ್ರೇ !

ಪು.ಜೋ :— ಅಷ್ಟಲ್ದೆ ! ಸರೋಜಾ, ಶುದ್ಧ ಹುಚ್ಚು !

ರಾ ರಾ :— ಓ.... ಹಾಗಾದ್ರೆ.... ಅಂ.... ಇನ್ನೂ ರಾಗ ಗೀಗ ಅಸಾಧ್ಯವಾಗ್ಹಾಡ್ತಾಳೆ. ವೀಣೆ ಜೊತೇಗೆ ಹಾಡ್ಬೇಕಿನ್ನೂ, ನೀವ್ಕೇಳ್ಬೇಕು.

ಭೀಮು :— ಕೇಳ್ತೀನೆ ಕೇಳ್ತೀನೆ, ನಿಧಾನವಾಗಿ ಕೇಳ್ತೀನೆ.

ಸರೋಜ :— ಊಹೂ ?

ರಾ.ರಾ :— ಸರೋಜ, ಜಾಣೆ, ನೀ ಒಳ್ಳೆ ಕೆಲ್ಸ ಮಾಡ್ದಿ. ಇನ್ನು, ಸಾಕು ಹೋಗು.

ಸರೋಜ :— ನಾನ್ಹೋಗೋಲ್ಲ. ನಂಗೇನ್ ನಿಮ್ಮ ಮೋಸ ಅರ್ಥವಾಗ್ಲಿಲ್ಲ ಅಂತ ತಿಳ್ಕೊಂಡಿದ್ದೀರೇನು? ([illegible], ಜೋಯಿಸನ ನಗಲು) ನಗೀ, ನಗೀ!

ರಾ.ರಾ :— ಮೋಸ?!

ಪು.ಜೋ :— (ನಗುತ್ತ) ಹೂ, ಗೊತ್ತಾಗ್ಲಿಲ್ವೇ, ರಾವ್ ಸಾಹೇಬ್ರೇ? ಸರಿಯಾದ ರೀತೀಲಿ "ಸಂಗೀತ ಹೇಳಮ್ಮ" ಅಂದಿದ್ರೆ 'ಧರಣಿಮಂಡಲ' ಒಪ್ಪಿಸ್ದೆ ಬಿಡ್ತಿದ್ಳೇ? ನಾವ್ನಾವ್ ಮಾತಾಡ್ಕೊಂಡು ಬೀಸಿದ್ವು ಮಾಯಾ ಜಾಲಾನ, ಬಿದ್ಬಿಟ್ಳು ಬಲೆ ಒಳಗೆ! ಹಹಹಹಹ....

ರಾ.ರಾ :— (ನಗುತ್ತ) ಓ! ಅಯ್ಯಯ್ಯೋ! ಸರೋಜ! ಇಷ್ಟೇನೇನೇ? (ಸೀತಾಗೆ) ನೋಡಿದ್ಯೇನೇ? (ಭೀಮೂಗೆ) ಭೇಷ್, ಭೇಷ್! ಹಾಗಾದ್ರೆ ನೀವು ಅವಳ್ನ ಮದ್ವೆ ಮಾಡ್ಕೊಳ್ಳೋಕೆ ಒಪ್ತೀರಿ ಅನ್ನಿ?

ಭೀಮು :— ಇಂಥಾ sweet angleನ ಒಪ್ಕೊಳ್ಳೋಲ್ಲ ಅನ್ನೋ ಧಡ್ಡನೂ ಇದಾನ್ಯೇ ಈ ಧರೇಲಿ? ಒಪ್ತೇನೆ, ಒಪ್ತೇನೆ, ಒಪ್ತೇನೆ. ಆದ್ರೆ, ನಾಹೇಳಿದೆನಲ್ಲ, ಅವರ್ನೂ ಕೇಳ್ಬಿಡಿ, ಒಪ್ಪಿದ್ರೆ ಆಗ್ಲಿ, ಇಲ್ದಿದ್ರೆ............ (ಎದ್ದು ಕೈಗೆ hat ತೆಗೆದುಕೊಳ್ಳುವನು)

ರಾ.ರಾ :— ಅಯ್ಯಯ್ಯೋ.... ಸ್ವಲ್ಪ ತಡೀರಿ.... ಸರೋಜ....?

ಸೀತ :— ಸರೋಜಾ?

ಸರೋಜ :— ಹಹಹಹಹಹಹ.... Sweet angel!.... ಮಾಯಾ ಜಾಲ!.... ಬಲೆ ಬೀಸಿದ್ರಿ.... ಬಿದ್ಬಿಟ್ಟೆ ಅಲ್ವೇ? ಹಹಹಹಹಹಹ........ ನೀವೆಲ್ಲಾ ಸೇರ್ಕೊಂಡೂ.... ನಂಗೆ ಅವಮಾನ ಮಾಡ್ಬೇಕು ಅಂತ ಈ ನಾಟ್ಕ get up ಮಾಡಿದ್ರಿ ಅಲ್ವೇ? ಹಹಹಹಹಹ.... ರೇಗಿಸ್ಬಿಟ್ರೆ, ಆ ಪುರಾಣದ ಚಂಡೀನ imitate ಮಾಡ್ತೇನೆ, ಬೇಡಾ ಅಂದ್ಬಿಡ್ತೇನೆ, ತಪ್ಪಿಸ್ಕೊಂಡ್ಬಿಡ ಬಹುದು ಅನ್ನೋ ಧೈರ್ಯದ್ಮೇಲೆ, 'ಒಪ್ತೇನೆ, ಒಪ್ತೇನೆ, ಒಪ್ತೇನೆ', ಅಂತ ಒತ್ತಿ ಒತ್ತಿ ಹೇಳಿದ್ರಿ, ಅಲ್ವೇ? ಹಹಹಹಹಹಹ.... ಪಾಪ....

ನನಗೆ 'ಬೇಡ' ಅಂತ್ಹೇಳೋಕೆ ಒಂದು chance ಬೇರೆ! (Putting up a stern face) ಧೈರ್ಯವಿದ್ರೆ ಓಡ್ಹೋಗೋಕೆ ಸಿದ್ಧವಾಗಿ ಕೈಗೆ ತೊಗೊಂಡಿರೋ hat ಇನ್ನ ಕೆಳಗಿಡ್ಲೀ! ನಾನ್ ಮಾಡ್ಕೊಳ್ತೀನೆ-ಮಾಡ್ಕೊಳ್ತೀನೇ! ಮಾಡ್ಕೊಳ್ತೀನೇ!! ಜೋಯಿಸ್ರೇ, ಈಗ್ಲೆ ಗ್ನಗಿ! (Striking an attitude and looking at Bhimu)

ಭೀಮು:— ಸ್ವಲ್ಪ ತಡೀರಿ, ಜೋಯಿಸ್ರೇ. (coat rack ಕಡೆಗೆ ಹೋಗಿ) ರಾವ್ ಸಾಹೇಬ್ರೇ, with your permission, (Hat rackಗೆ ಸೇರ್ಸಿ) ನನಗೆ ಧೈರ್ಯ ಸ್ವಲ್ಪ ಜಾಸ್ತಿ, ಆದ್ರಿಂದ (coatಊ ಬಿಚ್ಚಿ rackಗೆ ಹಾಕಿ ಹಿಂತಿರುಗಿ ಕುಳಿತು ಜೋಯಿಸರಿಗೆ) ಮುಹೂರ್ತಾ! ಮುಹೂರ್ತಾ!! (ಸರೋಜನ್ನ ನೋಡಲು)

ಸರೋಜ:— ಆ?!

ಭೀಮು:— **ಈಗ್ಲೆ ಗ್ನಗಿ, ಜೋಯಿಸ್ರೇ!** ನಾನೂ ಪುರಾಣದ ಕಾಲದ ಉದ್ದಾಲಕ ಅಲ್ಲ. **ನಗೀ ಜೋಯಿಸ್ರೇ, ನನ್ಹೆಂಡ್ತಿ "ನಗಿ" ಅಂತ ಆಜ್ಞಾಪಿಸ್ತಾ ಇರೋವಾಗ, ನಗೀ ಜೋಯಿಸ್ರೇ, ನೀವೂ ನಗಿ ರಾವ್ ಸಾಹೇಬ್ರೇ! ನಗೋ, ಚಂದ್ರೂ!....**

ಸರೋಜ:— ಓ೬೬೬! He is mad! He is mad! He is M-A-D! (ಸರ್ರನೆ ತನ್ನ ಕೋಣೆಗೆ ಹೋಗಿ ಬಾಗಿಲು ಬಡಿದುಕೊಳ್ಳುವಳು)

ಭೀಮು:— (ಇದನ್ನು ನೋಡಿ ತಕ್ಷಣ ನಗು ನಿಲ್ಲಿಸಿ) ದಯವಿಟ್ಟು ಕ್ಷಮಿಸಿ ರಾವ್ ಸಾಹೇಬ್ರೇ, ನಿಮ್ಮ daughterನ ಹೀಗೆ treat ಮಾಡಿದ್ದಕ್ಕೆ....

ರಾ.ರಾ:— No, no, noo! I am most pleased! ಇಷ್ಟೇ ಸಾಲ್ದು ಅವಳ್ಗೆ.... ಜೋಯಿಸ್ರೇ, ಇಷ್ಟ್ ದಿವ್ಸಕ್ಕೆ ಇವತ್ತು ಇವ್ಳಿಗೆ ಸರಿಯಾದ doctor ಸಿಕ್ಕಾಗಾಯ್ತು. ಪೆಚ್ಚುಬಿದ್ಹೋಯ್ತು ಅವಳ ಮುಖ....ಏನ್ ಮಸಿ ಹಚ್ಕೊಂಡ್ಳು, ಏನ್ ಮಸಿ ಹಚ್ಕೊಂಡ್ಳು!

ಸೀತ:— ಏನೋ ನಮ್ಮ ಪುಣ್ಯ, ಅವಳಷ್ಟು ಹುಚ್ಚುಚ್ಚಾಗಾಡಿದ್ರೂನೂ........

ಭೀಮು :— ಏನೂ ಪರವಾಗಿಲ್ಲ. ಈ ತರಹ ಹುಚ್ಚಿಗೆ ಹುಚ್ಚೇ ಮದ್ದು. ನಮ್ಮ stock ಇದಕ್ಕೆ ಬೇಕಾದಷ್ಟಿದೆ. ಇನ್ನೂ, ಪಾಪ, ಅವ್ರಿಗೆ, over dose ಆದೀತೇನೋ ಅಂತ ಭಯ. Excuse me again, 'ಅವ್ರು' ಅಂದೆ. ಮದ್ವೆ ಆಗ್ಹೋಯ್ತು ಅಂತ ಈಗ ನನ್ನ ಭಾವನೆ.

ರಾ.ರಾ :— ಅನ್ನು, ಅನ್ನು, ಅಯ್ಯಯ್ಯೊ, ನಾನ್ಹೋಡಿ.... never ........ ಆಳಿಯ ಆಗ್ಹೋದ್ಮೇಲೆ........

ಭೀಮು :— No matter... ಈಗ್ಲಾನ್ ತಮ್ಮ ದೊಡ್ಮಗ in ಕಾನೂನು........ಅಲ್ವೇ? ಜೋಯಿಸ್ರೇ, ರಾತ್ರಿ ಈ ಒಂಟಿ ಪಿಶಾಚಿ ಊರಿಗ್ಹೋಗೋದು cancel. ಜೋಡಿಯಾಗೇ ಹೊರಟ್ಹೋಗ್ತೇವೆ. ಮುಹೂರ್ತಾ........

ಪು.ಜೋ :— ಏನ್ ರಾವ್ ಸಾಹೇಬ್ರೇ, ನಿಮ್ಮ ಮನಸ್ಸೆಲ್ಲಾ ಒಪ್ತಾದ್ರೆ........

ರಾ.ರಾ :— ಅಯ್ಯಯ್ಯೋ.... ನನ್ಮನಸ್ಸಿನ್ಕೇಳ್ಬೇಡಿ ... ಅವಳಿಲ್ಲಾದ್ರೂ ಮನಸ್ಬದ್ಲಾಯಿಸ್ಬಿಟ್ಟ್ಬಾಳು....ನನಗೆ....ನನಗೆ....ಈಗ ಎದ್ದಿದೇನೋ, ಇದು ಸ್ವಪ್ನವೋ ಅನಿಸ್ತಾ ಇದೆ.... (ಹೆಂಡತಿಗೆ) ಏನೇ? ನಗಲೋ ಅಳಲೋ ಗೊತ್ತಾಗೋಲ್ವಲ್ಲೇ ಅವಳವಸ್ಥೇಗೆ.

ಸೀತ :— ಇಷ್ಟು ಬೇಗ ನಮ್ಮ ಅದೃಷ್ಟ ಹೀಗೆ ತಿರುಗುತ್ತೆ ಅಂತ ಎಣ್ಸಿರ್ಲಿಲ್ಲ ಜೋಯಿಸ್ರೇ.

ಪು.ಜೋ :— ಸರಿ.... ಇವನು ಮಧ್ಯಾಹ್ನ ಒಪ್ಕೊಂಡಾಗ್ಲೇ, ನಾನೆಲ್ಲಾ ಯೋಚ್ನೆ ಮಾಡಿ ಸೆಟಲ್ ಮಾಡ್ಬಿಟ್ಟಿದೇನೆ. ನಾಡಿದ್ದು ಪಂಚಮಿ ಲಗ್ನ ಬಹಳ ಪ್ರಶಸ್ತವಾಗಿದೆ. ಆದ್ರೆ ಇನ್ನು ಕೇವಲ ಎರಡೇ ದಿವ್ಸ ಇದೆ. ನಿಮಗೆ ಹೊತ್ತು ಸಾಲದು. ಲಗ್ನಪತ್ರಿಕೆಗಳ್ನ ಮಾಡ್ಸಿ, ಯಾರ್ಯಾರನ್ನ ಕರೆಸ್ಬೇಕೋ....

ಭೀಮು :— ಆ ಜೋಯಿಸ್ರೇ, ರಾವ್ ಸಾಹೇಬ್ರೇ, ಇದರಲ್ಲಿ ನಂದೂ ಒಂದ್ಮಾತು ತೊಗೋಬೇಕು. ನನಗೆ ತಕ್ಕಷ್ಟಿಗ್ಗೆ ಐಶ್ವರ್ಯ ಇದೆ. ತಮಗೂ

ಇದೆ ಅನ್ನೋದು ಕಾಣ್ತಾ ಇದೆ ಹಾಗೆ ಬಳಗಗಳನ್ನೆಲ್ಲಾ ಕರೆದು ಯಾಕೆ ಕರಗಿಸ್ಕೋಬೇಕು ಕೈಲಿರೋ ಲಕ್ಷ್ಮೀನ? ಹಿಂದೆ ಕಾಲ ಚೆನ್ನಾಗಿತ್ತು. ಮೂರು ದಿನದ ಉಪನಯನ ಆರು ದಿನದ ಮದುವೆ ಚೆನ್ನಾಗಿರ್ತಾ ಇತ್ತು. ಅಲ್ದೆ ಸರಿಯಾದ ವಯಸ್ನಲ್ಲಿ ಲಗ್ನಗಳಾಗ್ತಾ ಇದ್ವು. ಈಗ ನನಗೆ ೩೦ ಆಗ್ಹೋಯ್ತು; ನಿಮ್ಮ ಮಗಳ್ಗೆ ಇಪ್ಪತ್ತೆರಡಕ್ಕೆ ಬಂದಿರಬಹುದೋ ಏನೋ! ಹೊರಗ್ನೋರ್ಮುಂದೆ ಹದಿನೆಂಟು ಅಂತ ಹೇಳ್ಕೊಳ್ಳೋಣ, ಅಭ್ಯಂತರವಿಲ್ಲ. ಎಷ್ಟು ವರ್ಷಾತ್ ಭವೇತ್ ಕನ್ಯಾ ಅಷ್ಟೇ ವರ್ಷಾತ್ ಭವಳು ಅವಳು! ಅಷ್ಟಾದ್ರೂ ನಮ್ಮನ್ನ ಉರುಟಾಣಿ ಊಂಜಲಿಗೆ ಕೂಡ್ಸಿದ್ರೆ ಲಕ್ಷಣವಾಗಿ ಕಾಣೋಲ್ಲ ಅಂತ ನನ್ನ ಅಭಿಪ್ರಾಯ. ಏನ್ ಜೋಯಿಸ್ರೇ, ನನ್ನ ಆಲೋಚನೆ, ಇವರ ಕಡೆ ಬರ್ಲೇಬೇಕಾದವರ್ನ ಕರೆಸ್ಲಿ; ನನ್ಕಡೆ ಅಪ್ಪಿಲ್ಲ, ಅಮ್ಮಿಲ್ಲ, ಅಣ್ಣ ಇಲ್ಲ, ತಮ್ಮ ಇಲ್ಲ, ಇರೋರೆಲ್ಲಾ ನಮ್ಮ ಅಡಿಗ್ನೋನು ಶಂಕರ, ಜವಾನ್ರು ಹೈದರ್, ಸಿದ್ದ; ಅವರೂ ಬರೋಹಾಗಿಲ್ಲ ಮನೆ ಬಿಟ್ಟು; ಮುಗಿದ್ಹೋಯ್ತು. ಎರಡು ದಿವಸದ ಶಾಸ್ತ್ರ ಮುಗಿಸ್ಬಿಡಿ. ಸಾಕು. ಏನ್ಹೇಳ್ತೀರಿ?

ಪು. ಜೋ:— ಸರಿಯೇ ಅನ್ನು. ಏನ್ ರಾವ್ ಸಾಹೇಬ್ರೇ?

ರಾ ರಾ:--- (ಸೀತಮ್ಮನಿಗೆ) ಏನೇ?

ಸೀತ:--- ಹಾಗೇ ಮಾಡಬಹುದು. ಅವರ್ಹೇಳಿದ್ಹಾಗೇ ಸರಿಯಾದ ವಯಸ್ನಲ್ಲಿ....

ರಾ.ರಾ:— 'Agreed' ಅಂದ್ಬಿಡ್ತಾರ್ದೇ ಒಂದ್ಮಾತ್ನಲ್ಲಿ; epitomise ಮಾಡು ಅಂತ ನಾನ್ಹೇಳ್ತಾ ಇರ್ತೇನೆ, ನೀನು elaborate ಮಾಡ್ತಾನೇ ಇರ್ತಿ........

ಪು. ಜೋ:— ಹಾಗಾದಪಕ್ಷದಲ್ಲಿ ಪಂಚಮಿ ಲಗ್ನ....?

ರಾ.ರಾ:— ಅಯ್ಯೋ, ಪಂಚಮೀನೋ, ಪಾಡ್ಯಾನೋ, ಬಿದಿಗೇನೋ, ಏಕಾದಶೀನೋ, ಎಂದೋ ಒಂದು, ನೀವು ಹಸೇ ಮೇಲೆ ಬಂದ್ಕೂತ್ಕೋ ಅಂದಾಗ ಸಿದ್ಧ, ಏನೇ?

ಸೀತ.--- (aside) ಸಾಕ್ಸಮ್ನಿರಿ, ಹುಚ್ಚುಚ್ಚಾಗ್ಮಾತಾಡ್ಬೇಡಿ. ಅವ್ರೇನಾದ್ರೂ ತಿಳ್ಕೊಂಡಾರು.

ರಾ.ರಾ:— (aside) ಅಲ್ವೇ, ಏನಾದ್ರೂ ತಿಳ್ಕೊಂಡ್ಬಿಡ್ತಾರಲ್ವೇ? Thank you, thank you! (ಪ್ರಕಾಶ) ಆ—ಜೋಯಿಸ್ರೇ....ಅಮೇಲೆ....

ಪು.ಜೋ:— ಆಹಾಮೇಲೆ........ (ಚಂದ್ರೂನ ತೋರುತ್ತಾ) ಇವನ ವಿಷಯ. ಒಂದಧ್ಯಾಯ ಮುಗಿದ್ಹಾಗಾಯ್ತಲ್ಲ!....

ರಾ.ರಾ:—
ಸೀತ:—
} ಹು, ಹು, ಹು....

ಪು.ಜೋ:— ಶಾಂತೂಗೆ,........ಸಂಗೀತಕ್ಕೆ........ ಆ ಕೃಷ್ಣಭಾಗವತರಿಗ್ಹೇಳಿದ್ದೆ ಅಂತಂದಿರ್ಲಿಲ್ವೇ?

ರಾ.ರಾ:— ಹು, ಹು, ಬರ್ತಾರೆ ಅಂದಿದ್ರಿ, ಪತ್ತೇನೇ ಇಲ್ಲ.

ಪು.ಜೋ:— ಇವತ್ತು ಜ್ಞಾಪಿಸೋಣ ಅಂತ ಇದ್ದೆ. ಅಷ್ಟ್ರಲ್ಲಿ ನಮ್ಮ ಭೀಮು ಹೇಳಿದ. ಇವ್ನೂ ಸಂಗೀತ ಬಹಳ ಚೆನ್ನಾಗ್ಹೇಳ್ಕೊಡ್ತಾನಂತೆ.

ಭೀಮು:— ಸಂಗೀತ ಬಹಳ ಚೆನ್ನಾಗ್ಹೇಳ್ಕೊಡ್ತಾನೆ. ನನ್ನ ಪ್ರಿಯ ಸ್ನೇಹಿತ.

ಸೀತ:— ಓ....ಸಂತೋಷ .......ಸಂತೋಷ.........ಅವರ ಸ್ನೇಹಿತರು ಅಂದ್ಮೇಲೆ.... ಸಂತೋಷ. ಪಾಠ ಎಂದ್ನಿಂದ ಪ್ರಾರಂಭ ಮಾಡಬಹುದು?

ರಾ.ರಾ:— ಎಂದ್ನಿಂದ ಅಂತೆ! ನೀನ್ಕೇಳೋದೆಲ್ಲಾ ಅದೆ. ಒಳ್ಳೆ ಕೆಲ್ಸಗ್ಳೆಲ್ಲಾ ಯಾವಾಗ ಅಂದ್ರೆ ಆವಾಗ್ನಿಂದ್ಲೇ. ಇದಾಳೇನೇ, ಶಾಂತು, ಮನೇಲಿ?

ಸೀತ:— ಇಲ್ಲ, friend ಮನೇಗೆ ಅಂತ ಹೋದ್ಳು.

ಪು.ಜೋ :— ಇದ್ದಿದ್ರಾಗಿತ್ತೇ. ನಾಳೆ ನಾಡಿದ್ದು ಮದ್ವೆ ಗಲಾಟೆ.... ಆಮೇಲೆ....

ರಾ.ರಾ :— ಅಯ್ಯೋ, ಆಮೇಲೂ ಬೇಡ, ಈಮೇಲೂ ಬೇಡ. ಏಳಿ ಹೇಳ್ತೀನೆ. (ಸೀತಮ್ಮನಿಗೆ) ಎಲ್ಹೋಗಿರ್ತಾಳೆ, ಆಡಿಗೂಡಿ ಆ ಶಕುಂತಲಾ ಮನೇಗೆ! (ಚಂದ್ರುವಿಗೆ) ತಾವು ಒಂದು two minutes wait ಮಾಡಿದ್ರೆ, ಬಂದ್ಬಿಡ್ತಾಳೆ. (ಭೀಮೂಗೆ, ಜೋಯಿಸರಿಗೆ) ನಾವು, ಹಾಗೇ ಪೇಟೆ ಕಡೆ ಹೋಗಿ ಶಾಸ್ತ್ರಕ್ಕಾದ್ರೂ ಒಂದಿಷ್ಟು ಲಗ್ನಪತ್ರಿಕೆಗಳು, occasionಗೆ ಒಂದು ಇಷ್ಟು ಬಟ್ಟೆ ಬರೆ, ಇತರೇ ಸಾಮಾನುಗಳು purchase ಮಾಡ್ಕೊಂಡು ಬಂದ್ಬಿಡೋಣ. (ಸೀತಮ್ಮನಿಗೆ) ಏನೇ, ಮನೇ thingsಉ, provisionsಉ, ಹಪ್ಳ, ಮೆಂತಿಟ್ಟು, ಚಟ್ನೇಪುಡಿ ಅವೆಲ್ಲಾ ನಿನ್ನ departmentಉ. Eleventh hourನಲ್ಲಿ ಅದಿಲ್ಲ ಇದಿಲ್ಲ ಅನ್ಬೇಡಿ....ನಡೀರಿ, ಜೋಯಿಸ್ರೇ. (ಚಂದ್ರೂಗೆ) ಒಂದು ಎರಡ್ನಿಮಿಷ, please......

ಚಂದ್ರು :--- ಆಗಲಿ....ಆಗಲಿ....

ರಾ.ರಾ :— (ಸೀತಮ್ಮನಿಗೆ) ಲೇ, ಇಂಥಾ ಶುಭ ಮುಹೂರ್ತದಲ್ಲೂ ನಮ್ಗಂತೂ ಕಾಫಿ ಸಮಾರಾಧ್ನೆ ಮಾಡಿಸ್ಲಿಲ್ಲ. ಅವ್ರು ಸಂಗೀತದ ಮೇಷ್ಟ್ರು ........ ಅವರಿಗಾದ್ರೂ.... ಸರಬರಾಯಿ ... ಹಹಹಹ....

ಸೀತ :— ನಂಗೆಲ್ಲಾ ಗೊತ್ತಿದೆ (ಒಳಬಾಗಿಲಲ್ಲಿ ನಿಷ್ಕ್ರಮಿಸುವಳು).

ರಾ.ರಾ :— ನಡೀರಿ ಜೋಯಿಸ್ರೇ, (ಭೀಮೂಗೆ) ಹೊರಡೋಣ....

ಭೀಮು : — ಬಂದ್ಬಿಟ್ಟೆ.... (ರಾ.ರಾ. ಮತ್ತು ಜೋಯಿಸ ತೆರೆಯಲ್ಲಿ ಮರೆಯಾಗಲು ಚಂದ್ರೂನ ಸಮೀಪಿಸಿ) ಭಯವಾಗತ್ತೇನೋ ?

ಚಂದ್ರು :— ಭೀಮೂ, ಏನ್ ಅವಾಂತ್ರ ಮಾಡ್ಬಿಟ್ಯೋ ? ಅವಳ್ಬಂದ್ರೆ ಏನಂತ್ಹೇಳ್ಳೋ ?

ಭೀಮು :— ಅಯ್ಯೋ, poor Adonis! ಇಷ್ಟೇನೇ ? "ಎಂಥಾ ಅವಕಾಶ ಒದಗಿಸ್ಕೊಟ್ಟೆ, thanks" ಅಂತ್ಹೇಳೋದು ಬಿಟ್ಬಿಟ್ಟು, ಎಳೇ ಕರು ನಡುಗಾಡ್ನಲ್ಲಿ ಒದ್ದಾಡೋ ಹಾಗಾಡ್ತಿದ್ದೀಯಲ್ಲೋ !

ಚಂದ್ರು :--- ಉಹುಹು.... ಹೆದರ್ಕೆ ಅಂತಲ್ವೋ....

ಭೀಮು :— ಭಯ.... never mind .. go ahead and wish you good luck .. ನಿನ್ನ tuition ಮುಗಿಸ್ಕೊಂಡು ನೆಟ್ಗೆ ರೂಮಿಗೆ ಬಂದ್ಬಿಡು....ನಾನೂ ಅಷ್ಟೊತ್ಗೆ ಬಂದ್ಬಿಡ್ತೀನಿ. ಮಾತಾಡೋದ್ಬೇಕಾದಷ್ಟಿದೆ ........ ಅವರು ಕಾಯ್ತಿದಾರೆ.... So......

ಚಂದ್ರು :— ಹೂ....

ಭೀಮು :— Right... (ನಿಷ್ಕ್ರಮಿಸುವನು)

(ಚಂದ್ರು ಅತ್ತ ಇತ್ತ ನೋಡುತ್ತಿರಲು ಸೀತ ಮಧ್ಯದ ಬಾಗಿಲಲ್ಲಿ ಕಾಣಿಸಿಕೊಂಡು)

ಸೀತ :--- ಅಯ್ಯೋ, ಕೂತ್ಕೊಳ್ಳೀ....ಇಗೋ Illustrated weekly ಇದೆ.... ಅಲ್ಲಿ paper ಇದೆ.... Radio ಬೇಕಾದ್ರೆ ಹಾಕ್ಕೊಳ್ಳಿ.... ಈಗ ಬಂದ್ಬಿಡ್ತಾಳೆ.... ನಾನೂ ಬಂದೆ (ನಿಷ್ಕ್ರಮಿಸುವಳು. ಚಂದ್ರು, ರೇಡಿಯೋಪಕ್ಕದ ಸೋಫಾದಲ್ಲಿ ಕುಳಿತು ನೆಪಕ್ಕೆಂಬಂತೆ weekly ನೋಡುವನು.........)

[ತೆರೆಯಲ್ಲಿ: ಶಾಂತು—All right, ಶಕುಂತಲಾ, I am sorry, ನಾಳೆ ಖಂಡಿತ ಹೋಗೋಣ. Good evening. ಶಕುಂತಲ. Good evening]

ಶಾಂತು :— (ಪ್ರವೇಶಿಸಿ ಚಂದ್ರುನ ನೋಡಿ) ಓ!.... Good evening!

ಚಂದ್ರು :—G...G...ood evening!

ಶಾಂತು :— ಇದೇನು ...ನೀವು....?

ಸೀತ: --- (ಪ್ರವೇಶಿಸಿ) ಓ, ಬಂದ್ಯಾ ಶಾಂತೂ....ಅವರ್ದೇಳಿರ್ಬೇಕೆಲ್ಲಾ ನಿಂಗೆ....ನೋಡು, ಸಧ್ಯಕ್ಕೀತಂಬೂರೀನೇ ತೊಗೊಂಡಿರು, ಸರೋಜಂದು ........ ನಾಳೆ ಬೇರೆ ತರ್ಸೋಣ ... ಕಾಫೀಗಿಟ್ಟಿದೆ ... ಆಗತ್ಲೊ ಕರೀತೇನೆ....

ಶಾಂತು :— ಆಗ್ಲಮ್ಮ. (ಸೀತ ನಿಷ್ಕ್ರಮಿಸಲು ಹತ್ತು ಸೆಕೆಂಡ್ ಚಂದ್ರುನ ನೋಡಿ) ಹುಂ.... (ತಂಬೂರಿ ಸಮೀಪಿಸಿ ಎತ್ತಿಕೊಳ್ಳುವಳು)

ಚಂದ್ರು :— (ಸಮೀಪಿಸಿ) ಇಲ್ಕೊಡಿ.

ಶಾಂತು :— ಫರವಾಗಿಲ್ಲ, ಅಷ್ಟೇನ್ ಭಾರ ಇಲ್ಲ.

ಚಂದ್ರು :— ಭಾರ ಅಂತಲ್ಲ ...ಆದ್ರೂನೂ....

ಶಾಂತು :— ಬೇಡ, ನಡೀರಿ....

ಚಂದ್ರು :— Pleeease!

ಶಾಂತು :--- ಹೆಹಹಹಹಹ.... AAAll Right! (ಚಂದ್ರೂ ಕೈಗೆ ತಂಬೂರಿ ಕೊಟ್ಟು ತನ್ನ ಕೋಣೆ ಕಡೆಗೆ ಹೊರಟು) ಬನ್ನಿ. (ಮರೆಯಾಗುವಳು. ಚಂದ್ರು ಹಿಂಬಾಲಿಸುವನು)

— ತೆರೆ —

## ದೃಶ್ಯ ೬

(ಶಾಂತು ರೂಮು. Door curtain ವಾರೆ ಮಾಡಿ ಪ್ರವೇಶಿಸಿ)

ಶಾಂತು :--- Come in, please. (ಚಂದ್ರು ಪ್ರವೇಶಿಸುವನು. ಅವನ ಕೈಲಿರುವ ತಂಬೂರಿ ತೋರುತ್ತಾ) ಇಲ್ಕೊಡಿ ಅದನ್ನ.

ಚಂದ್ರು :— ಇರ್ಲಿ, ಇರ್ಲಿ, ಹೀಗಿಟ್ಕೊಳ್ಳೋಣ.

ಶಾಂತು :--- ಇಟ್ಕೊಳ್ಳೋರಂತೆ, ಇಲ್ಕೊಡಿ. (ಇಸಗೊಂಡು ಅದನ್ನು ಒಂದು ಮೂಲೆ ಕಡೆ ಎತ್ತಿಕೊಂಡು ಹೋಗುತ್ತಾ) ನಿಮ್ಹಿಂದೆ ಇರೋ ಕುರ್ಚೀನಲ್ಲಿ ಕೂತ್ಕೋಬಹುದು. (ಚಂದ್ರು ಕೂಡುವನು. ಶಾಂತು, ತಂಬೂರಿ ಗೋಡೆಗೊರಗಿಸಿ ಮೇಜನ್ನು ಸೇರಿ ಅದಕ್ಕೆ ಬೆನ್ನು ಕೊಟ್ಟು, ಕೈಕಟ್ಟಿ, ಚಂದ್ರೂನ ಒಳೆಂಟು ಸೆಕೆಂಡ್ ನೋಡಿ) ಉಂ೦೦೦.... ಇದನ್ನ ಹ್ಯಾಗೆ ಏರ್ಪಾಟ್ಮಾಡಿದ್ರಿ?

ಚಂದ್ರು :— (ಎದ್ದು) ಉಹ ಹು....ನಾನು....

ಶಾಂತು :--- ಕೂತ್ಕೊಂಡೇ ಮಾತಾಡ್ಬಹುದು....

ಚಂದ್ರು :— (ಕುಳಿತು) ಅಂ.... you see...

ಶಾಂತು :— Let me please. ಅದಕ್ಕೇ ನಿಮ್ಮನ್ನೇಳಿದ್ದು, ಈ ಮೇಷ್ಟ್ರ partಇನ್ನ ಹ್ಯಾಗೇಪಾರ್ಟ್ಮಾಡಿದ್ರಿ ಅಂತ.

ಚಂದ್ರು :— ಉಹು....ಇದು.... accidental ಆಗಿ....ಆಗ್ಹೋಯ್ತು. ಜೋಯಿಸ್ರೂ, ನಾನೂ, ನಿಮ್ಮ ಭಾವಾನೂ....

ಶಾಂತು :— ಭಾವ ?

ಚಂದ್ರು :— ಓ ! ನಿಮಗ್ಗೊತ್ತಿಲ್ಲ....ನಿಮ್ಮ sister ಮದ್ವೆ settle ಆಯ್ತು.

ಶಾಂತು :— ಏನು ? ಸರೋಜನ ಮದ್ವೆ ?

ಚಂದ್ರು :— ಹೂ....ಅವರ husbandನೇ ನಾನ್ಹೇಳಿದ್ದು 'ಭಾವ' ಅಂತ.

ಶಾಂತು :— ತಡೀರಿ, ತಡೀರಿ, ಯಾವಾಗ ?

ಚಂದ್ರು :— ಈಗೆಲ್ಲಾ ಒಂದು half an hour ಆಗಿರಬಹುದಷ್ಟೆ. ನಿಮ್ಮ father ನಿಮ್ಮನ್ಕರಿಯೋಕೆ ಬಂದಾಗ ಅವರ ಜೊತೇಗೆ ಒಬ್ಬ........

ಶಾಂತು :— ಜೋಯಿಸರ ಜೊತೇಗೆ ಮಾತಾಡ್ತಾ ಇದ್ರು........

ಚಂದ್ರು :— ಅವ್ನೇ, ಅವ್ನೇ........

ಶಾಂತು :— ಓ.... ಅವರೂ.... ಸರೋಜನ್ನ....

ಚಂದ್ರು :— ಮದ್ವೆ ಮಾಡ್ಕೊಳ್ಳೋಕೆ ಒಪ್ಪಿದ. ನಿಮ್ಮ sisterಊ ಸಹ ಒಪ್ಕೊಂಡ್ರು....

ಶಾಂತು :— ಓ.............. That is......that is......

ಚಂದ್ರು :— ಕೋಪಿಸ್ಕೋಬೇಡಿ, perfectly all right. ನಿಮ್ಮ

sisterಗೆ ಸರಿಯಾದ husbandಉ ಅವ್ನು. ಒಂದು ten minutesನಲ್ಲಿ ಎಲ್ಲಾ settleಆಗ್ಹೋಯ್ತು.

ಶಾಂತು :— .........of all wonders, the most wonderful ! ಪಾಪ !

ಚಂದ್ರು :— ಯಾಕೆ ? ನನ್ನ friendಗೋಸ್ಕರ ನೀವೇನೂ pity ಮಾಡ್ಬೇಡಿ. ಅವನ ಜೊತೇಲಿ ನಿಮ್ಮ sister ಒಂದು ತಿಂಗಳು ಸಂಸಾರ ಮಾಡೋದ್ರೊಳಗೆ, shrewdomನಿಂದ saintdomಗೆ ವರ್ಗವಾಗ್ಹೋಗ್ಬಿಡ್ತಾರೆ.

ಶಾಂತು :— ಹೋಗ್ಲಿ. ಅದಾಯ್ತು. ನೋಡೋಣ. ಈಗ ನೀವು Materia medicadomನಿಂದ ಮಾಯಾ ಮಾಳದಗೌಳವ domಗೆ ಹೇಗೆ ವರ್ಗ ತೊಗೊಂಡ್ರಿ ?

ಚಂದ್ರು :— ಜೋಯಿಸ್ರು ಆದ್ಮೇಲ್ರೋ ಕೃಷ್ಣ ಭಾಗವತರಿಗ್ಹೇಳ್ಬೇಕು ಅಂದ್ರು. ಭೀಮು ನನ್ನ suggest ಮಾಡ್ದ.

ಶಾಂತು :— ನೀವು ಒಪ್ಕೊಂಡ್ರೀ ?

ಚಂದ್ರು :— (ನಗುತ್ತಾ) ನಿಮಗೊಸ್ಕ್ರ ಇಲ್ದೆ ಹೋದ್ರೇ....

ಶಾಂತು :— ಛಿ ಛಿ ಛಿ, ಕೂತ್ಕೊಳ್ಳೀ, ಮೇಷ್ಟ್ರಿಗೆ ಶಿಷ್ಯಂದ್ರ ಮೇಲೆ ಇಷ್ಟು ಕೋಪ ಬಂದ್ಬಿಟ್ರೆ ಹೇಗೆ ? ಅಥವಾ, ಪಾಪ, ಯಾವ್ದಾದ್ರೂ ನೆಪ ಸಿಕ್ಕಿದ್ರೆ ಸಾಕು ಹೊರಟ್ಬಿಡೋಣ ಅಂತಿರಬಹುದು. ಈ ಸಂಗೀತದ ಪಾಠದ್ಮೇಲೆ ನಿಮಗೆ ಹ್ಯಾಗೆ interest ಇದ್ದೀತು ! ಇವತ್ರಾತ್ರಿ ತಾನೇ ನೀವು ಹೊರಡೋದು ಊರ್ಗೆ ?

ಚಂದ್ರು :— ಆ ? ಊರ್ಗೆ ?

ಶಾಂತು :— ಹೂ. ನಿಮ್ಮೂರ್ಗೆ ? (ಒಂದು ಪುಸ್ತಕ ತೆಗೆದು ಅದರ ಮಧ್ಯೆಯಿಂದ ಒಂದು ಕಾಗದ ಎಳೆದು ತೋರುತ್ತಾ) Irresistable bad habit, ಓದ್ಬಿಟ್ಟೆ.

ನಿನ್ನೆ ನೀವೀ ಪುಸ್ತಕ ಕೊಟ್ಟಾಗ ಈ ಕಾಗದ ಇದ್ರೊಳ್ಗೇ ನಿಂತ್ಬಿಟ್ಟಿತ್ತು. ನಾಡಿದ್ದು wednesday ಲಗ್ನ ಅಂತೆ! ನಾಳೆ ವರಪೂಜೆ! ಇನ್ನೂ ಇಲ್ಲೇ ಇದೀರಿ? ಇವತ್ರಾತ್ರೀನಾದ್ರೂ ಹೊರಡ್ಬೇಡ್ವೇ?

ಚಂದ್ರು :— ನಾನು ಹೋಗೋಲ್ಲ.... I am not going...... ಓ.... I am sorry...... I **cannot** go.

**ಶಾಂತು** :— ಯಾಕೆ?

ಚಂದ್ರು :— ಇವತ್ರಾತ್ರಿ ಮೈಸೂರ್ನಿಂದ ನಿಮ್ಮ husband ಬರ್ತಾರೆ.

**ಶಾಂತು** :— ಆ?

ಚಂದ್ರು :— ಹೌದು. ಅವರು ಬರ್ತಾರೆ. ಬಂದು, ನಾಳೆ ನಿಮ್ಮನ್ನೋಡ್ತಾರೆ. ಒಪ್ತಾರೆ. ಜೋಯಿಸ್ರು ಹೇಳಿದ್ರು. ನಾಡಿದ್ದು ನಿಮ್ಮ sister ಮದ್ವೆ ಜೊತೇಗೇ ನಿಮ್ಮ ಮದ್ವೇನೂ ಆಗೋ probability ಕಾಣುತ್ತೆ. ಅದಕ್ಕೋಸ್ಕರ, ನೀವು invite ಮಾಡ್ತೀರಿ ಅನ್ನೋ ಭರವಸೇ ಮೇಲೆ, ನೋಡ್ಕೊಂಡೇ ಹೊರಟ್ಹೋಗೋಣ ಅಂತ ನಿಂತ್ಕೊಂಡೆ.

**ಶಾಂತು** :— ಓ!........ (ತತಪತಿಸಿ) ನಿಮಗೆ ನಾನು disappoint ಮಾಡ್ಬೇಕಾಗುತ್ತೆ. Invitation ಕೊಡೋಲ್ಲ ಅಂತಲ್ಲ. ಆದ್ರವತ್ತಾಗೋದು ನಮ್ಮ sister ಮದ್ವೆ ಒಂದೇ .......ಆದ್ರಿಂದ, I don't want that you should...... (ಗಡಿಯಾರ ನೋಡಿ) ಇನ್ನೂ ರೈಲಿಗೆ ಹೊತ್ತಿದೆ....ನನ್ನಿಂದ ನಿಮಗೆ ........ ಹೋಗೋದಾದ್ರೆ ಹೋಗಬಹುದು....

ಚಂದ್ರು :— No...... ನಾನ್ಹೋಗೋಲ್ಲ........

**ಶಾಂತು** :—................ ಹಹಹಹಹ very well then. ನಮ್ಮಿಬ್ರ ಮದುವೆಯೂ ಆಗೋಲ್ಲ ನಾಡಿದ್ದು; ಹಹಹಹ ... that's good... hence why worry? (ತಂಬೂರಿ ತಂದುಕೊಡುತ್ತಾ) ತೊಗೊಳ್ಳಿ, ಸಂಗೀತವಾದ್ರೂ ಹಾಡೋಣ. ಒಂದೆರಡ್ನಿಮಿಷ ತಲೆಯೆಲ್ಲಾ ಒಂದು ತರಹ ಆಗ್ಹೋಯ್ತು.

ಚಂದ್ರು :— ಪಾಪ........ (ಕೃತಿ ಮಾಡುವನು)

ಶಾಂತು :— ಯಾಕೆ ?

ಚಂದ್ರು :— ಆ ವೈಸೂರ್ನಿಂದ ಬರ್‍ತಾರೆ.......... ಪ್ಚ್......

ಶಾಂತು :— ಪ್ಚ್ ಪ್ಚ್, ಪಾಪ ! ... ...

ಚಂದ್ರು :— ಆ ?

ಶಾಂತು :— ಆ ನಿಮ್ಮ ಹಾರ್ದ್ಹಳ್ಳಿ ವಿಶ್ವೇಶ್ವರ ಭಟ್ರ ಮಗಳೂ....

ಚಂದ್ರು :— ಓ ! ಹಹಹಹಹ.

ಶಾಂತು :— ಹಹಹಹಹಹ........

ಚಂದ್ರು-ಶಾಂತು :— ಪಾಆಆ-ಪ !

ಚಂದ್ರು :— ಹೂ, ಹೋಗಲಿ.... to business... ಹಾಡಿ....

ಶಾಂತು :— ಛಿ, ಛಿ, ನಿಮ್ಮನ್ನ appoint ಮಾಡಿರೋದು ಹೇಳ್ಕೊಡೋಕೆ ಅಂತೆ.... ಹೇಳ್ಕೊಡಿ.

ಚಂದ್ರು :— ಆದ್ರೂ ನಾನ್ಹೇಳ್ದಷ್ಟು, ನೀವು obey ಮಾಡ್ಬೇಕು ಅನ್ನೋದನ್ಮರೀಬೇಡಿ.

ಶಾಂತು :— Oh ! All right... ಯಾವ್ದಾದ್ಹಾಡ್ಲಿ ? ನನ್ಗೇನ್ ಅಷ್ಟು ಬರೋಲ್ಲ.

ಚಂದ್ರು :— ಬಂದಷ್ಟೇ ಆಯ್ತು, ಯಾವ್ದಾದ್ರೂ ಸರಿ, ಹೇಳಿ........

ಶಾಂತು :— (ಒಂದು ಕೀರ್ತನೆ ಹಾಡುವಳು) ನೋಡಿದ್ರಾ ...

ಚಂದ್ರು :— ನಿಮ್ಮ sister ತರಹಾನೇ.... .. ಆದ್ರೆ ಅವರು ಕಷ್ಟ ಪಟ್ಟಿದಾರೆ........ ಅದ್ಕ್ಯಾಗೆ ಪಟ್ರೋ ಕಾಣೆ .. ... ನೀವೂ ಸ್ವಲ್ಪ ಅಭ್ಯಾಸ ಮಾಡ್ಬಿಟ್ರೆ....ಸಾಕು ...ಈಗ ನಾನು ಯಾವುದ್ನೋ ಹೇಳ್ಕೊಡ್ಲಿ ?

ಶಾಂತು :— ...........ಅವತ್ತೀವ್ಹಾಡಿದ್ರಲ್ಲ, ಅದನ್ನ್ಹೇಳ್ಕೊಡಿ........

ಚಂದ್ರು :— ಯಾವ್ದು ?

ಶಾಂತು :— ಆ "..............."ಅಂತ ಬಂತಲ್ಲ.

ಚಂದ್ರು :— ಓಹೋ, ಅದೇ ? ಅದೇನ್ ನಿಮಗೆ ಆ ಹಾಡಿನ್ಮೇಲೆ ಅಷ್ಟು.... ಪ್ರೀತಿ ?

ಶಾಂತು :— ಅದು ನಂಗೆ ತುಂಬಾ ಚೆನ್ನಾಗಿದೆ....ಯಾವತ್ತಿಂದ್ಲೋ ಕೇಳ್ಬೇಕೊಂತಿದ್ದೆ.

ಚಂದ್ರು :— ಹಹಹಹ .. all right ..

(ಶಾಂತು bookಉ penಉ ಕೊಡುವಳು. ಚಂದ್ರು ಹಾಡು ಬರೆದುಕೊಟ್ಟು ಹೇಳಿಕೊಡುವನು)

ಶಾಂತು :— ಅಬ್ಬ, (ನೋಟ್ ಬುಕ್ಕಿನಲ್ಲಿ ಪುಟ ಬರೆಸಿಕೊಳ್ಳುತ್ತಾ) ತುಂಬಾ.... ...

ಚಂದ್ರು :— Delicateಉ ! ಪಾಪ !

ಸೀತ :— (ಒಳಗಿನಿಂದ) ಶಾಂತೂ !

ಶಾಂತು :— ಓ, Mother. (ತಾಯಿಗೆ) **ಬಂದೇ.** (ಚಂದ್ರೂಗೆ) one minute ! (ಒಳಗೋಗುತ್ತಾಳು) ...... (ಕಾಫಿ ಸಮೇತ ಬಂದು ಲೋಟ ನೀಡಿ) **ತೊಗೊಳ್ಳಿ.**

ಚಂದ್ರು :— ಏನಿದು ?

ಶಾಂತು :— ಇದೂ, ನೀರಿನ್ನ ಮರಳ್ಸಿ, ಕಾಫಿ ಪುಡಿ ಸೇರ್ಸಿ, decoctionನ ಶೋಧಿಸಿ, ಹಾಲು ಬಿಸೀ ಮಾಡಿ ಅದಕ್ಕೆ ಬೆರೆಸಿ, ಮೇಲೆ ಸಕ್ರೆ ಸೇರ್ಸಿ.... oh ! I am sorry, ದಯವಿಟ್ಟು ಕ್ಷಮ್ಸಿ, ಗುರುಗ್ಳೇ, ಮರ್ತಿದ್ದೆ ; ಇದೂ coffee !

ಚಂದ್ರು :--- ಅಬ್ಬ, ನೀವಿಷ್ಟು ......

ಶಾಂತು :— ಮಾತಾಡಬಲ್ಲೆ ಅಂತ ಊಹಿಸಿರ್ಲಿಲ್ಲ ಅಲ್ಲ? ಹಹಹಹ....

never mind. Drink away your surprise. ಕುಡೀರಿ.

ಚಂದ್ರು :— ನಿಮ್ಗೆಲ್ಲಿ ?

ಶಾಂತು :— ನಾನ್ಕಾಫಿ ಕುಡ್ಯೋಲ್ಲ.

ಚಂದ್ರು :— ಯಾಕೆ ?

ಶಾಂತು :— ಅದರ ಅಭ್ಯಾಸವೇ ಇಲ್ಲ

ಚಂದ್ರು :— ಓ ! ಹಾಗಾದ್ರೆ ನಾನೂ ಕುಡಿಯೋಲ್ಲ.

ಶಾಂತು :— ಅಯ್ಯಯ್ಯೋ, ನೀವ್ಯಾಕೆ ಕುಡೀಬಾರ್ದು, ತೊಗೊಳ್ಳಿ.

ಚಂದ್ರು :— ಬೇಡ. ಇವತ್ನಿಂದ ನಾನೂ ಕಾಫಿ ಕುಡ್ಯೋಲ್ಲ.

ಶಾಂತು :— ಛಿ ಛಿ, ನಾಳೆ ಇಂದ ಬೇಕಾದ್ರೆ ಬಿಟ್ಬಿಡೋರಂತೆ. ಇವತ್ತು ತೊಗೊಂಡ್ಬಿಡಿ.

ಚಂದ್ರು :— ಊಹೂ.

ಶಾಂತು :— ತಡೀರಿ ...ಹಾಗಾದ್ರೆ.... (ಒಳಗೋಡಿ ಇನ್ನೊಂದು ಲೋಟ ತಂದು) ಇಗೋ ಇದ್ನಂಗೆ....ತೊಗೊಳ್ಳಿ ಆರ್ಹೋಗತ್ತೆ.

ಚಂದ್ರು :— (ಲೋಟ ತುಟಿಗೆ ತೆಗೆದುಕೊಂಡು ಹೋಗಿ) ಎಲ್ಲಿ, ಆ ನಿಮ್ಮ cupಉ ಖಾಲಿ ಅಲ್ವಲ್ಲ ?

ಶಾಂತು :— (ನಿಟ್ಟುಸಿರಿ ಸಮೀಪಿಸಿ ಲೋಟ ತೋರಿ) ಹುಂ.... Satisfied ?

ಚಂದ್ರು :— Not entirely (ತನ್ನ ಲೋಟದಿಂದ ಅಷ್ಟು ಹಾಕಲು)

ಶಾಂತು : - ಅಯ್ಯಯ್ಯೋ ಬೇಡ ಬೇಡಾ ...

ಚಂದ್ರು :— ಸಮಭಾಗವಾಗಿರ್ಲಿ, ನನಗೆ ಜಾಸ್ತಿ ಕೊಟ್ಟು ನೀವು sampleಗೆ ತಂದಷ್ಟಾಗೆ ತಂದಿದೀರಿ ... ಊಂ ... Now.... go ahead.

(ಇಬ್ಬರೂ ಕುಡಿಯುತ್ತಾ ಮಾತನಾಡುತ್ತಿರಲು, ಸರೋಜ ಬಾಗಿಲಲ್ಲಿ ಕಾಣಿಸಿ ಕೊಳ್ಳುವಳು. ಚಂದ್ರು, ಶಾಂತು ಇವಳನ್ನು ನೋಡುವುದಿಲ್ಲ)

ಚಂದ್ರು :— ಅಂತೂ, ಪಾಪ, ನನ್ನಿಂದ ನಿಮ್ಮ ಅಭ್ಯಾಸ ತಪ್ಪಿಸಿದ್ಹಾಗಾಯ್ತು.

ಶಾಂತು :— ಏನ್ಮಾಡೋದು, ನಾಳೆ ಇಂದ ನಿಮ್ಮ ಅಭ್ಯಾಸಾನ ನೀವ್ಬಿಟ್ಬಿಡ್ತೀರಲ್ಲ ! ಒಂದಕ್ಕೊಂದ್ ಸರ್ಹೋಯ್ತು.

ಸರೋಜ :— (ಮುಂದೆ ಬರುತ್ತಾ) ಸರಿಹೋಯ್ತು. (ಸೀತಮ್ಮ ಬಾಗಿಲಲ್ಲಿ ಕಾಣಿಸಿಕೊಳ್ಳುವಳು) ಇದೇನೋ ಸಂಗೀತ ಕಲಿತ್ಕೋತಾ ಇರೋದು ? (ತಂಬೂರಿ ತೋರುತ್ತಾ) ಯಾರನ್ಕೇಳಿ ತೊಗೊಂಡ್ಬಂದ್ಯೇ ಇದನ್ನೀನಿಲ್ಲಿ ? (ಹಿಂತಿರುಗುತ್ತಾ) ಪಾರುಪತ್ಯ ಜೋರಾಗ್ಹೋಯ್ತು.

ಸೀತ :--- ಏನೇ ಇದು, ಸರೋಜ ?

ಸರೋಜ :— ಇದೂ, ತಂಬೂರಿ. ನಂದು. ತೊಗೊಂಡ್ಹೋಗ್ತೀನಿ (ನಿಷ್ಕ್ರಮಿಸುವಳು)

ಸೀತ :--- (ಒಳಗೆ ಬರುತ್ತಾ) ಹೋಗ್ಲಿ ಸುಮ್ನಿರಮ್ಮ, ಶಾಂತು. (ಚಂದ್ರೂಗೆ) ನೀವೇನೂ ತಿಳ್ಕೋಬೇಡಿ.

ಚಂದ್ರು :— ಏನಿಲ್ಲ,.... ಪಾಠಾನೂ ಆಗ್ಹೋಗಿತ್ತು.

ಸೀತ :— ಏನು, ಹೇಗೇ, ಕಲಿತ್ಕೊಂಡ್ರೆ ಬರಬಹುದೋ ?

ಚಂದ್ರು :— ಬರಬಹುದ್ಯಾಕೆ, ಬರತ್ತೆ. ಸ್ವಲ್ಪ ಅಭ್ಯಾಸ ಬೇಕು ಅಷ್ಟೆ.

ಸೀತ :— (ಶಾಂತೂಗೆ) ಕೇಳಿದ್ಯೇನೇ ? (ಚಂದ್ರೂಗೆ) ನಾನೂ ಅದೇ ಹೇಳ್ತಾ ಇರ್ತೀನಿ. ನಮ್ಮಾತ್ಕೇಳಿದ್ರಲ್ವೇ ? ಅದಕ್ಕೇ ಮೇಷ್ಟ್ರು ಅಂತ್ಯಾರನ್ನಾದ್ರೂ ಇಟ್ರೆ, ಅವರ ಬಲವಂತಕ್ಕಾದ್ರೂ ಒಂದ್ಗಂಟೇನಾದ್ರೂ ಅಭ್ಯಾಸ ಆಗತ್ತೆ ಅಂತ್ಕೋಡ್ದೆ....ನಿಮ್ಮನೆ ಎಲ್ಲಿ.... ದೂರವಾದ್ರೆ car ಕಳಿಸ್ತೀನಿ.

ಚಂದ್ರು :— ಏನಿಲ್ಲ.... ನಾನು ... Central Hotelನಲ್ಲಿದೇನೆ.

ಸೀತ :— ಯಾಕೆ ಹೋಟ್ಲು ? ಮನೆ ಅದು....

ಚಂದ್ರು :— ಮನೆ.... ಕೀರ್ನಹಳ್ಳೀಂತಿದೆ........ ಅಲ್ಲಿ........

ಸೀತ :— ಕೀರ್ನಹಳ್ಳಿ ? ಯಾವ ಕೀರ್ನಹಳ್ಳಿ ? ಶ್ರೀಕಂಠೈನೋರೂ ಅಂತಿದಾರಲ್ಲಾ....

ಚಂದ್ರು :— ಹು, ಹೂ, ಶ್ರೀಕಂಠೈನೋರು ನಮ್ತಂದೇಗೆ ದೂರದ್ಸಂಬಂಧ.

ಸೀತ :— ಓಹೋ.... ನಮ್ಗೂ ಅವರು ದೂರದ್ಸಂಬಂಧ.... ನಿಮ್ಮ ತಂದೆ ಹೆಸರು ?

ಚಂದ್ರು :— ಕೃಷ್ಣಪ್ನೋರೂಂತ. ಆಕದೇಲಿಲ್ಲಾ ಸುಮ್ನೆ ಕೀರ್ನಹಳ್ಳಿ ಸಾವ್ಕಾರ್ರು ಅಂತಾರೆ.

ಸೀತ :— ಓಹೋ, ಸರಿಹೋಯ್ತು. ಆ ಕೃಷ್ಣಪ್ನೋರ್ಮಕ್ಳೇ ನೀವು ? ಶ್ರೀಕಂಠೈನೋರು ಹೇಳ್ತಾ ಇದ್ರು ... ನಿಮ್ಮ ತಂದೆ ಅವರ್ನ ನಾವು ಕಾಣೆವೂ ಅನ್ನೋದಷ್ಟೇ ಹೊರ್ತು, ಎಲ್ಲಾ ವಿಚಾರವೂ ಕೇಳಿ ಬಲ್ವು. ನೀವು.... ಈ ಊರ್ನಲ್ಲಿ.... ಓದ್ತಾ ಇರ್ಬೇಕೂಂತ್ಕಾಣತ್ತಲ್ಲಾ.... (ಶಾಂತೂಗೆ) ಅಲ್ವೇನೇ ? ಅವ್ರೇಳ್ತಾ ಇದ್ರಲ್ಲ ?

ಚಂದ್ರು :— ನಾನು.... ಊ.... (ಶಾಂತೂನ ನೋಡಲು)

ಶಾಂತು :— ಅವರೂ ನಮ್ಮ collegeನಲ್ಲೇ ಓದ್ತಾ ಇದಾರಮ್ಮ.

ಸೀತ :— ಏನು ? ನೀವೂ medical collegeನಲ್ಲೇ ಓದ್ತಾ ಇದೀರೇನು ?

ಚಂದ್ರು :— ಹೌದು.

ಸೀತ :— ಓ ! ನೋಡಿದ್ದೀನೇ ಶಾಂತು, ನೀನು ?

ಶಾಂತು :— ನೋಡಿದ್ದೇನಮ್ಮ, ನೋಡ್ದೆ ಏನು ?

ಸೀತ :— ಓ ! ತುಂಬಾ ಸಂತೋಷ. ನಿಮ್ಮ college studiesಗೂ ಎಷ್ಟೋ help ಆಗತ್ತೆ ಮುಂಚೇನೇ ಹೇಳ್ಬಾರ್ದಾಗಿತ್ತೇನೇ, ಶಾಂತು ? ನೋಡು, ಒಂದೇ ಜನ ಅಂತಂದ್ರೂ ಎಲ್ಲೆಲ್ಲೋ ಇದ್ಬಿಡ್ತೀವೆ. ಈ ಸಂಗೀತದ ನೆಪದಿಂದ ತಿಳಿದ್ಹಾಗಾಯ್ತು.

ಸೀನ :— (ಪ್ರವೇಶಿಸಿ) ಪಾರ್ವತಮ್ನೋರ್ಬಂದಿದಾರೆ.

ಸೀತ :— ಬಂದೆ. (ಚಂದ್ರೂಗೆ) ನಾ ಬರ್ತೀನೆ.

ಚಂದ್ರು :— (ತಾನೂ ಎದ್ದು) ನಾನೂ ಬರ್ತೀನಿನ್ನು ಭೀಮು ರೂಂನಲ್ಲಿ ಕಾಯ್ತಾ ಇರ್ತಾನೆ ನಂಗೋಸ್ಕರ.... ನಾಳೆ ಎಷ್ಟೊತ್ತಿಗೆ ಬರ್ಬೇಕು ?

ಸೀತ :— (ಶಾಂತೂಗೆ) ಏನೇ ?

ಶಾಂತು :— ಎಷ್ಟೊತ್ತಿಗ್ಬೇಕಾದ್ರೂ ಬರ್ಲಿ.... ರಜ ಇದ್ಯೆಲ್ಲಾ....

ಸೀತ :— ಓಹೋ, ಅಂದ್ಹಾಗೇ ರಜ ಇದ್ಯೆಲ್ಲಾ.... ನಿಮಗ್ಯಾವಾಗನ್ಕೂಲ್ವಾಗತ್ತೋ ಬರಬಹುದು.

ಚಂದ್ರು :— ರಜ ಇದೆ ಸರಿ. ಆದ್ರೆ ನಾಳೆ ... ...ಮದ್ವೆ ಗಲಾಟೆ ಪ್ರಾರಂಭ ......

ಸೀತ :— ಓ ! ಹೌದ್ಹಾದು.... ಆದ್ರೆ ದ್ವಿತೀಯ ವಿಘ್ನ ಆಗ್ಬಾರ್ದು....

ಚಂದ್ರು :— ಹೌದೂ.... ಇನ್ನೊಂದೂ.... ಇವತ್ತು, ಅವ್ರು, ಪಾಪ, ಯಾವ್ದೋ engagement ಇಟ್ಕೊಂಡಿದ್ದಾಗಿತ್ತು, ನನ್ನಿಂದ ತಪ್ಪೋಯ್ತು. ಆದ್ರಿಂದ ನಾಳೆ ಅವರನ್ಕೂಲ ನೋಡ್ಕೊಂಡು ಇಷ್ಟೊತ್ತಿಗೆ ಬಾ ಅಂದ್ರೆ ಅಷ್ಟೊತ್ತಿಗೆ ಬರ್ತೀನೆ.

ಸೀತ :— (ಶಾಂತೂಗೆ) ಏನೇ ?

ಶಾಂತು :— ಒಳ್ಳೆ ಚೆನ್ನಾಗಿದೆಯಮ್ಮ ನೀಹೇಳೋದು. ನಾನ್ಹೇಳೋ ಕಾಗತ್ತೇನಮ್ಮ ಮೇಷ್ಟ್ರಿಗೆ ಇಷ್ಟೊತ್ತಿಗ್ಬನ್ನಿ ಅಂತ. ಅವರ engagementsಉ ಅದನ್ನೋಡ್ಕೊಂಡು ಇಷ್ಟೊತ್ತಿಗ್ಬರ್ತೀನಂತ್ಹೇಳ್ಲಿ, ಆದಕ್ಕೆ ತಕ್ಕಾಗೇನೇ ನಮ್ಮ engagementsನೂ adjust ಮಾಡ್ಕೋತೀವಿ.

ಚಂದ್ರು :— At this rate.......

ಸೀತ :— ಇದೇನೇ ಇದು ಹುಡ್ಗಾಟ? ಯಾವಾಗ್ದಾದ್ರೂ time fix ಮಾಡ್ಕೋಬಾರ್ದೇ? ನಾಳೆ ಬೆಳಿಗ್ಗೆ ಒಂಭತ್ತು ಗಂಟೇಗಿಟ್ಕೊಂಡ್ಬಿಡಿ, ಒಂದರ್ಧ ಗಂಟೆ....ಆಗ್ಬಹುದೇ?

ಶಾಂತು-ಚಂದ್ರು :— (ಒಬ್ಬರನ್ನೊಬ್ಬರು ನೋಡಿಕೊಂಡು ಒಟ್ಟಿಗೆ) ಹೂ, ಆಗ್ಬಹ್ದು.

ಸೀತ :— ಹಹಹಹ.... ಸರಿ.... (ಚಂದ್ರೂಗೆ) ನಾನ್ಬರ್ತೀನೆ.

ಚಂದ್ರು :— ನಮಸ್ಕಾರ.

ಸೀತ :— ಒಳ್ಳೇದು. (ನಿಷ್ಕ್ರಮಿಸುವಳು)

ಚಂದ್ರು :— (ಶಾಂತೂಗೆ) ನಾನೂ ಬರಬಹುದೋ?

ಶಾಂತು :— ನಮಸ್ಕಾರ.

ಚಂದ್ರು :— ಒಳ್ಳೇದು. (ಬಾಗಿಲು ಕಡೆಗೆ ತಿರುಗಲು)

— ತೆರೆ —

## ದೃಶ್ಯ ೭.

[ರಸ್ತೆ. ರಾವ್ ಸಾಹೇಬ್ ರಾಮರಾಯರೂ ಪುಟ್ಟಾಜೋಯಿಸರೂ ಪ್ರವೇಶಿಸುವರು]

ರಾ.ರಾ :— ಎಲ್ರೀ, ಜೋಯಿಸ್ರೇ, ನಡುರಸ್ತೇಲಿ ನನ್ನ ಬಿಟ್ಟು ಸ್ಟೇಷನ್ನಿಗ್ಹೋಗಿದ್ದು ಒಂದೇ ಆಯ್ತೇ ಹೊರ್ತು, ಆ ಮೈಸೂರ್ ಆಸಾಮಿ ಪತ್ತೇನೇ ಇಲ್ಲ.

ಪು.ಜೋ:— ಅದೇ ನನ್ಗೂ ಅರ್ಥವಾಗ್ದೆ ಇರೋದು. ಅವರಾತರಹ ಜನ ಅಲ್ಲ. ಬೆಳಿಗ್ಯೆ ಬರ್ತೀನೆ ಅಂದ, ಬರ್ಲಿಲ್ಲ. ರಾತ್ರಿ ಬರ್ತೀನೆ ಅಂದ ಬರ್ಲಿಲ್ಲ.

ರಾ.ರಾ:--- ರಾತ್ರಿ ಬಂತು, ಮನುಷ್ಯ ಬರ್ಲಿಲ್ಲ ಅನ್ನಿ. ಅವ್ನು ಬಂದ್ಬಿಟ್ಟಿದ್ರೆ, ನಮ್ಮ ಶಾಂತೂನ ಒಪ್ಸೇ ಒಪ್ಸೋನು ಅನ್ನಿ, ಎರಡ್ಮೂರ್ದಿನ್ವೇನೂ ಒಟ್ಗೇ ಹೊಡ್ಸೇಬಿಡ್ಬಹುದಾಗಿತ್ತೇ. ಖರ್ಚಿನ್ಕೂಡ ಖರ್ಚು ಕಳೆದ್ಹೋಗಿರೋದು.

ಪು.ಜೋ:— ಹಾಗೇ ಮಾಡ್ಬಹುದಾಗಿತ್ತು. ನಾಳೆ ಬೆಳಿಗ್ಯೆ ಏನಾದ್ರೂ ಇನ್ನೊಂದು ಕಾಗದ್ವೋ ತಂತೀನೋ ಬಂದ್ರೂ ಬಂದೀತು.

ರಾ.ರಾ:--- ಕಾಗದ ತಂತಿ ಇಟ್ಕೊಂಡೇನ್ಮಾಡೋದು, ಜೋಯಿಸ್ರೇ? ಹುಡುಗ........ಹುಡುಗ ತಾನೇ ಮೊದಲ್ ಬರ್ಬೇಕಾದ್ದು........ಆದ್ರೂ ಅದರ ವಿಷಯ ನಾನೇನಷ್ಟು worry ಮಾಡ್ಕೊಳ್ಳೋಲ್ಲ ಅನ್ನಿ. ಸಧ್ಯಕ್ಕೆ ದೇವರ ದಯದಿಂದ ನಮ್ಮ ಸರೋಜಂಗೆ ಒಬ್ಬ ಗಂಡ ಸಿಕ್ಕಲ್ಲ........ ಸರಿಯಾದ ಇಸಮ್ಮು. ನೀವ್ಹೇಳಿದ್ಹಾಗೇ, ಘಳಿಗೆ ಕೂಡ್ಬರ್ಬೇಕೂಂದ್ರೆ.... ನಾವ್ನಾವ್ ಒದ್ದಾಡಿ ಏನ್ ಪ್ರಯೋಜ್ನ ?

ಪು.ಜೋ:— ಅಷ್ಟಲ್ದೇ....ನಡೀರಿ ಆ ಲಗ್ನ ಪತ್ರಿಕೇದ್ನೋಡ್ಕೊಂಡ್ಹೊರಟ್ಹೋಗೋಣ....ಅಚ್ಹಾಕಿದಾನೇನೋ.

ರಾ.ರಾ:— ಹೂ....ಹೂ.... proof ready ಮಾಡ್ಬಿಟ್ಟಿರ್ತಾನೆ, ಬನ್ನಿ.

(ನಿಷ್ಕ್ರಮಿಸುವರು)

— ತೆರೆ —

## ದೃಶ್ಯ ೮

[ಇನ್ನೊಂದು ರಸ್ತೆ. ಭೀಮೂ, ಚಂದ್ರೂ ಪ್ರವೇಶಿಸುವರು]

ಭೀಮು :— Hearty congratulations, ನಿಮ್ಮಿಬ್ರಿಗೂ.

ಚಂದ್ರು :— ಯಾಕೋ ?

ಭೀಮು :— ಇಬ್ರಿಗೂ ನಾಡಿದ್ದು ಮದ್ವೆ ಆಗೋಲ್ವಲ್ಲ ಅಂತ ! ಚಂದ್ರು, that settles it.

ಚಂದ್ರು :--- ಏನ್ನ ?

ಭೀಮು :— ಹ್ಯಾಗಾದ್ರೂ ಮಾಡಿ ನಾಡಿದ್ದು ಆಗಿಸ್ಬೇಕು ಅಂತ........

ಚಂದ್ರು :— ಆ ? ಭೀಮು ?

ಭೀಮು :— Leave it to me. ಸಂದರ್ಭ ಸೃಷ್ಟಿ ಮಾಡಿ settle ಮಾಡಿಸ್ಬಿಡ್ತೀನೆ. (ಎದುರು ನೇಪಥ್ಯ ತೋರುತ್ತಾ) ಆಗೋ ರಾವ್ ಸಾಹೇಬ್ರೂ, ಜೋಯಿಸ್ರೂ ಬರ್ತ್ತಿದಾರೆ........ ಶುಭ ಸೂಚನೆ........ ನೀನ್ ಸ್ವಲ್ಪ ಮರೆಯಾಗು........

ಚಂದ್ರು :— ಲೋ, ಹುಷಾರೋ.... ಏನೇನೋ ಹೇಳ್ಬಿಟ್ಟು....

ಭೀಮು :— ನೀ ಹೋಗೋ ನೀನು.... ನನ್ಗ್ ಹೇಳ್ಕೊಡೋಕ್ಬರ್ತ್ತಾನೆ.
(ಚಂದ್ರು ಮರೆಯಾಗುವನು. ರಾ.ರಾ. ಮತ್ತು ಜೋಯಿಸ ಪ್ರವೇಶಿಸುವರು)

ರಾ.ರಾ :— ಇವ್ರ ಹಣೇಬರಹ ಎಲ್ಲಾ ಹೀಗೇ, ಜೋಯಿಸ್ರೇ. ಹೇಳಿದ್ಹೊತ್ತಿಗೆ ಕೆಲ್ಸ ಮಾಡೋಲ್ಲ.

ಭೀಮು :— ಓ ...ನಮಸ್ಕಾರ....

ರಾ ರಾ :— }
ಪು.ಜೋ :— } ಓಹೋ.... ಓಹೋ.... ಎಲ್ಲಿ ಒಬ್ರೇ.... ಒಬ್ನೇ....

ಭೀಮು :— ಇಲ್ಲ, ಇಲ್ಲ, ಚಂದ್ರು ಬಂದ್ಬಿಡ್ತಾನೆ. ಏನೋ ಯಾರ್ಮೇಲೋ ಕೋಪಿಸ್ಕೊಂಡ್ಹಾಗಿತ್ತಲ್ಲ?

ಪು.ಜೋ :— ಆ ಪ್ರಿಂಟ್ಮಾಡೋನು........

ರಾ.ರಾ :— "Proof ಕೊಟ್ಬಿಡ್ತೀನೆ ನೀವ್ ವಾಪಸ್ ಬರೋವಾಗ" ಅಂತ್ಹೇಳ್ಲಿಲ್ವೇ ?

ಭೀಮು :— ಹು, ಹೂ........

ರಾ.ರಾ :— ಈಗ್ಹೋದ್ರೆ, ಇನ್ನೊಂದ್ "one hourಉ, ಸಾರ್" ಅಂತ ಹಲ್ಕಿರಿದ.

ಭೀಮು :— ಹೋಗ್ಲಿ ಬಿಡಿ. ತಾವ್ ಹೊರಡಿ, ನಾನೂ ಚಂದ್ರೂ ಬೇಕಾದ್ರೆ ನೋಡಿ pass ಮಾಡ್ಬಿಡ್ತೀವೆ .......

ರಾ.ರಾ :— ಛೆ ಛೆ !

ಭೀಮು :— Don't worry. ನಾವೆಲ್ಲಾ ಒಂದೇ ಮನೆಯೋರೀಗ. ನೀವು ಬಾಕಿ ಕೆಲ್ಸ ನೋಡ್ಕೊಳ್ಳಿ.... ಅಂದ್ಹಾಗೇ, ಜೋಯಿಸ್ರೇ, ಆ ನಿಮ್ಮ ಮೈಸೂರಿನ ವರ ಬಂದ್ನೋ, stationಗ್ಹೋಗಿದ್ರಲ್ಲ? ಅವನು ಬಂದು ಒಪ್ಪಿಟ್ರೆ 'ಷಟಲ್' ಆಗ್ಹೋಗತ್ತೆ ಅಂದಿದ್ರಿ. ಆಗ್ಹೋಗ್ಬಿಡೋದಾದ್ರೆ, ಆ ಲಗ್ನಪತ್ರಿಕೆ change ಮಾಡೇ ಹೊಡೆಸ್ಬಿಡಬಹುದಲ್ಲ ?

ರಾ.ರಾ :— ನೋಡಿದ್ರಾ, ಜೋಯಿಸ್ರೇ, ಹ್ಯಾಗಿದೆ idea? (ಭೀಮೂಗೆ) ನಾನೂ ಅದೇ ಹೇಳ್ದೆ ಜೋಯಿಸ್ರಿಗೆ.... ಆ ಮೈಸೂರು ಆಸಾಮಿ ಪತ್ತೇನೇ ಇಲ್ಲ.

ಭೀಮು :— ಯಾಕೆ ? ಬರ್ಲಿಲ್ವೇ ಈಗ್ಲೂನೂ ?

ಪು ಜೋ :— ಊಹೂ....

ಭೀಮು :— ಓಹೋ. ನೀವಾಮೈಸೂರ್ನೋನು ಮೈಸೂರ್ನೋನು ಅಂತ ಮೋಹಿಸಿ ಕೂತ್ಬಿಟ್ಟಿದೀರಿ. ಇಲ್ದಿದ್ರೆ.... ಈಗ್ಲೊ....

ಪು. ಜೋ :— ಅದ್ಹ್ಯಾಗೋ ಆಗತ್ತೆ ? ಅವನು ಬರೋದೇ ಬೇಡ್ವೇ ?

ಭೀಮು :— ಬೇಡ ಅಂತ. ಅವನ್ಬರ್ದೆ ಹೋದ್ರೆ ಶಾಂತಾಬಾಯಿ ಮದ್ವೇನೇ ಆಗ್ಕೂಡ್ದು ಅಂತ ಏನಾದ್ರಿದ್ಯೇನು ? ಅವ್ನೇ ಗಂಡ ಆಗ್ಬೇಕು ಅಂತ ಬ್ರಹ್ಮ ಏನಾದ್ರೂ label ಹಾಕಿ ಕಳ್ಸಿದಾನೇನು ? ಅವ್ನಷ್ಟಂಥಾವ್ರು ಬೇಕಾದಷ್ಟು ಜನ ಸಿಕ್ತಾರೆ, ಜೋಯಿಸ್ರೇ.

ಪು. ಜೋ :— ಸಿಗ್ತಾರೋ. ಸಿಗೋಲ್ಲ ಅಂತ್ನಾನ್ಹೇಳ್ಲಿಲ್ಲ. ಶಾಂತೂಗೆ ವರ ಸಿಗೋಲ್ವೇ ? ಕಾಲಿಗ್ಬಿದ್ದು ತಾಳಿ ಕಟ್ತಾರೆ. ಆದ್ರೆ ಅದೆಲ್ಲಾ ಇನ್ನೆರಡು ದಿನವೂ ಇಲ್ವಲ್ಲೋ........ಹ್ಯಾಗೋ........?

ಭೀಮು :— ಎರಡು ದಿನ ? ಯಾಕೆ ಎರಡು ದಿನ, ಜೋಯಿಸ್ರೇ ? ನೀವು ಮನಸ್ಮಾಡಿದ್ರೆ ಎರಡು ನಿಮಿಷ್ದಲ್ಲಿ ನಡೆಸ್ಬಿಡಬಹುದು. (ರಾ ರಾ.ಗೆ) ತಮಗೆ ಬೇಕಾದ್ದೇನು ? ಹುಡುಗ ಚೆನ್ನಾಗಿರ್ಬೇಕು, ಸ್ಥಿತಿವಂತ್ನಾಗಿರ್ಬೇಕು, ಹುಡ್ಗೀಗೆ ಒಡ್ವೆ ವಸ್ತ್ರ....ಅಲ್ವೇ, ಜೋಯಿಸ್ರೇ ?

ಪು. ಜೋ :— ಅಷ್ಟೇ.

ರಾ. ರಾ :— ಅಷ್ಟೇ, ಅಷ್ಟೇ.

ಭೀಮು :— ಹಾಗಾದ್ರೆ ನಾನೊಂದು ಹೇಳ್ತೀನೆ, ಒಪ್ಪಿಗೆ ಇದ್ರೆ........

ರಾ. ರಾ :— ಏನು, ಏನು ?

ಪು. ಜೋ :— ಏನೋ ಅದು ?

ಭೀಮು :— ನಮ್ಮ ಚಂದ್ರಶೇಖರನಿಗ್ಯಾಕ್ಕೊಡ್ಬಾರ್ದು ?

ರಾ. ರಾ :— ಯಾವ ಚಂದ್ರಶೇಖರಾ ?

ಪು. ಜೋ :— ಯಾರೋ ಅದು, ಚಂದ್ರಶೇಖರಾ ?

ಭೀಮು :— ಅವ್ನೇ, ಜೋಯಿಸ್ರೇ, ನಮ್ಮ ಶಾಂತಾಬಾಯೀಗೆ ಸಂಗೀತ ಹೇಳ್ಕೊಡೋಕೆ ಗೊತ್ಮಾಡಿಲ್ವೇ ?

ಪು.ಜೋ :— ಅವ್ನೇ ?

ರಾ.ರಾ :— ಅವ್ನೇ ?

ಭೀಮು :— ಹೂ, ಯಾಕಾಗ್ಬಾರ್ದು ? ನೋಡೋಕೆ ಚೆನ್ನಾಗಿದಾನೆ. ವಯಸ್ಸು ಸರಿಯಾಗಿದೆ. ವಿದ್ಯೆ, ಅವ್ನು, ಬರೀ ಸಂಗೀತದ ಮೇಷ್ಟ್ರು ಅಂತಿಳ್ಕೋಬೇಡಿ, medical collegeನಲ್ಲಿ ಓದ್ತಾ ಇದಾನೆ.

ರಾ.ರಾ :--- ಆ ? ನಮ್ಮ ಶಾಂತೂನೂ....

ಭೀಮು :— ಬಹುಶಃ class-mates ಏನೋ. ಏನೋ, ಅವನೂ ಒಬ್ನೇ ಮಗ ಅವರಪ್ಪಿಗೆ, ಜೋಯಿಸ್ರೇ ! ಬೇಕಾದ್ದಾಗಿದೆ ಐಶ್ವರ್ಯ ! ನೀವ್ಕೇಳಿರ್ಬೇಕು ಕೀರ್ನಹಳ್ಳಿ ಕೃಷ್ಣಪ್ನೋರು ಅಂತ.

ರಾ.ರಾ :--- ಆ, ಕೀರ್ನಹಳ್ಳಿ ಕೃಷ್ಣಪ್ನೋರು ? ಅವರ್ಮಗ್ನೇ ಅವ್ರು ?

ಭೀಮು :— ಹೂ, ನಿಮ್ಮಂತಸ್ತು ಐಶ್ವರ್ಯಕ್ಕೇನೂ ಕಡಿಮೆ ಇಲ್ಲ.

ರಾ.ರಾ :— ಛೆ, ಛೆ, ಎಲ್ಲಾದ್ರೂ ಉಂಟೆ ? ಏನ್, ಜೋಯಿಸ್ರೇ, ನಮ್ಮ ಶ್ರೀಕಂಠೈನೋರು ಹೇಳ್ತಾ ಇರ್ಲಿಲ್ವೇ ? ಓಹೊಹೊಹೋಹೊ ! ಅವರ್ಮಗ್ನೇ ? ಅವರ್ವಿಷಯ ಚೆನ್ನಾಗಿ ಕೇಳ್ಬಲ್ಲು........ಬಹಳ ಅನುಕೂಲವಾದ್ದಾಗಾಯ್ತೋ. ಏನ್, ಜೋಯಿಸ್ರೇ ?

ಪು.ಜೋ :— ಹುಡ್ಗಾನೂ ಮುದ್ದಾಗಿದಾನೆ. ಶಾಂತೂಗೆ ತಕ್ಕಾಗಿದಾನೆ. ಆ ಮೈಸೂರ್ನೋನು, ಹೋಗ್ಲಿ, ಅವನ್ಗೆ ಅದೃಷ್ಟ ಇಲ್ಲ ಅಷ್ಟೆ. ಅದಕ್ಕೇ ರೈಲು ತಪ್ಪೋತು ಏನೋ !

ಭೀಮು :— ಹೂ, ಅದಕ್ಕೇ ಆ printerಉ ಕೂಡ proof ಕೊಡ್ಲಿಲ್ಲ. ಹೀಗೆ ಲಗ್ನಪತ್ರಿಕೆ change ಮಾಡೋ ಪ್ರಮೇಯ ದೇವರು ಅವನ ಕಿವೀಲಿ ಊದಿರಬಹುದು.

ಪು.ಜೋ :— ಹಾಗಿದ್ದಾಗಿದೆ. ಏನ್, ರಾವ್ ಸಾಹೇಬ್ರೇ ? ಅದ್ರೆ,

ಭೀಮು :— ನಾನೂ ಹೋಗಿ ಚಂದ್ರೂ ಕೂಡ ಮಾತಾಡಿ, settle ಮಾಡಿ, ಬೆಳಿಗ್ಗೆ ಅಷ್ಟೊತ್ತಿಗ್ಗೇ, ಜೋಯಿಸ್ರೇ, ನಿಮ್ಮನ್ಗೇ ಬಂದ್ಬಿಡ್ತೇನೆ. ಲಗ್ನಪತ್ರಿಕೆ draft ಮಾಡಿ, ಬದ್ಲಾಯಿಸಿ ಬರೀಬೇಕಲ್ಲ, ಎರಡ್ಮನ್ದೋವ್ರೂ ಸೇರ್ಸಿ, ತೊಗೊಂಡ್ಹೋಗಿ, ತಲೇಮೇಲ್ಹಾಕ್ತೊಂಡು, ತಂದೇಬಿಡೋಣ.... ಏನ್ಹೇಳ್ತೀರಿ ?

ರಾ.ರಾ :— Oh yes! Oh yes! ನೀವು ನಿಮ್ಮ friendಇನ್ನ ಒಪ್ಸೋದು ನಿಮ್ಮ ಭಾರ !

ಭೀಮು :— Oh yes! I accept. ನಿಮ್ಮ ಮನೆಯೋರ್ನ ಒಪ್ಸಿ, ಬಾಕಿ ಏರ್ಪಾಟೆಲ್ಲಾ ಮಾಡೋದು ನಿಮ್ಮ ಭಾರ.

ರಾ.ರಾ :— Oh yes. ನಾವಲ್ಲೀಗೆ ಕಾಗದ ಬರಿಯೋಲ್ಲ !

ಭೀಮು :— ಬರೀಕೂಡ್ದು ! That's the point. ಅದು ನನ್ನ ಜವಾಬ್ದಾರಿ. ತಾವ್ಹೊರಡಿ ಇನ್ನು.... ನಾಳೆ ಬೆಳಿಗ್ಗೆ, ಜೋಯಿಸ್ರೇ.

ಪು.ಜೋ :— ಹು, ಹು........

ರಾ.ರಾ :— ನಾವು ಬರ್ತೇವೆ.

ಭೀಮು :— ಒಳ್ಳೇದು. ನಮಸ್ಕಾರ. (ರಾ.ರಾ. ಮತ್ತು ಜೋಯಿಸ ನಿಷ್ಕ್ರಮಿಸುವರು) ಲೋ, ಚಂದ್ರು !

ಚಂದ್ರು :— (ಮರೆಯಿಂದ ಮುಂದೆ ಬಂದು) ಲೋ, ಭೀಮು, ನಿನಗೆ ಬುದ್ಧಿಗಿದ್ದಿ ಇದ್ಯೋ ಇಲ್ವೋ ? ಏನೋ ಇದು ಅವಾಂತ್ರ ?

ಭೀಮು :— ಬೇಡ ಅಂದ್ಬಿಡೋ, ಈಗೇನ್ ಕೊಳ್ಕೊಳ್ಳೋದ್ದು ; ಇನ್ನೇನಾದ್ರೂ ಒಂದು ನೆಪ ಹೇಳಿ cancel ಮಾಡಿಸ್ಬಿಡ್ತೇನೆ. ನಿಂಗೆ ಮದ್ವೇಗೆ ಇಷ್ಟವಿಲ್ದೆ ಹೋದ್ರೇ........

ಚಂದ್ರು :— ಅದಲ್ವೋ ನಾ ಹೇಳಿದ್ದು....?

ಭೀಮು :— ಅದಲ್ಲ ಅಲ್ಲ? (teasing) ಪಾಪ, ಹ್ಯಾಗಾದೀತೋ? ಆ ಬೇಲಿ ಮಗ್ಗಲ್ಲಿ ಕೂತ್ಕೊಂಡೇ imagine ಮಾಡ್ತಾ ಇದ್ದೀನೋ, ಲಗ್ನ ಮಂಟಪದಲ್ಲಿ ಕೂತ್ಹಾಗೇ.... ಅಂತರಪಟ ಬೇಗೆಳೀಬಾರ್ದೇ ಅಂತ ಅವರ್ನ ಬೈತಾ ಇದ್ಹಾಗೇ........

ಚಂದ್ರು :— ಅದಲ್ವೋ, ಭೀಮು....ನಿನ್ಮಾತ್ನಲ್ಲಿ ನಿನ್ಗೆ....ಏನ್ಮಾಡ್ತಾ ಇದೀನಿ ಅನ್ನೋದೇ ಹೊಳೆಯೋಲ್ಲ.

ಭೀಮು :— ಯಾಕೆ, ಏನಾಯ್ತೋ?

ಚಂದ್ರು :—ನಮ್ಮಪ್ಪನಿಗೆ telegram ಕೊಡ್ತೀನಿ ಅಂತ್ಹೇಳಿದ್ಯಲ್ಲಾ....

ಭೀಮು :— ಹೇಳಿದ್ನೇ ಹಾಗಂತ?.... (ತನ್ನನ್ನೇ ಪ್ರಶ್ನೆ ಮಾಡಿಕೊಂಡಂತೆ)

ಚಂದ್ರು :— ಲೋ, ನೀನ್ಮಾತಾಡ್ತಿರೋದ್ ನನ್ಹತ್ರ. ನಿನ್ಹೆಂಡ್ತಿ ಹತ್ರಲ್ಲ.

ಭೀಮು :— Yes, yes. ಚಂದ್ರೂ, ಭಯ ಪಡ್ಬೇಡ, telegram ಕೊಡೋಲ್ಲ.

ಚಂದ್ರು :— ಮತ್ತೇ?

ಭೀಮು :— ನಮ್ಮ ನಾಣಿ ಈ ಊರಲ್ಲೇ ಇದಾನಲ್ವೇನೇ?

ಚಂದ್ರು :— ಯಾರು, ನಾವ್ಹಿಂದೆ "ಆಷಾಢಭೂತಿ" ಆಡ್ದಾಗ, ಶಂಕ್ರಪ್ಪನ ಪಾರ್ಟ್ ಮಾಡಿದ್ದ್ನಲ್ಲಾ....?

ಭೀಮು :— ಹೂನೋ, ನಮ್ನಾಣಿ.

ಚಂದ್ರು :— ಇಲ್ಲೇ ಇದಾನೆ. ಯಾಕೆ?

ಭೀಮು :— ಆ ಶಂಕ್ರಪ್ಪನ ತಾತನ ಪಾರ್ಟ್ ಮಾಡ್ಸೋಕೆ........ನಡಿ, ನಿನ್ನ ತಲೆ ಓಡೋದು ತುಂಬಾ ನಿಧಾನ.

ಚಂದ್ರು :— ಭೀಮು....?

ಭೀಮು :— ನಡೀ, ಚಂದ್ರು........ ಈ ವಾಯು ಹ್ಯಾಗ್ಬೀಸಿದ್ರೆ ಹಾಗ್ಹಾರ್ತಿರ್ಬೇಕ್ನೀನು. ನಡಿ. (ಕರೆದೊಯ್ಯುವನು)

— ಅಂಕದ ತೆರೆ —

(ವಿರಾಮ ಐದು ನಿಮಿಷಗಳು)

ಅಂಕ ೨

## ದೃಶ್ಯ ೧

[ರಸ್ತೆ. ಒಂದು ಕಡೆಯಿಂದ ಕೀರ್‍ತನ್ಹಳ್ಳಿ ಕೃಷ್ಣಪ್ಪ ಬಿರುಸಿನಿಂದ ಪ್ರವೇಶಿಸುವರು. ಎದುರಿನಿಂದ ತಿಪ್ಪಾಭಟ್ರು ಪ್ರವೇಶಿಸಿ]

ತಿ. ಭ :— ಓಹೊಹೊಹೊಹೋ, ನಮಸ್ಕಾರಾ!

ಕೀ. ಕೃ :— ನಮಸ್ಕಾರಾ, ನಮಸ್ಕಾರಾ, ನಮಸ್ಕಾರಾ, ಸಾಕೇ? ದಾರಿ ಬಿಡಿ. (ಒತ್ತರಿಸಿ ಮುಂದುವರಿಯಲು)

ತಿ. ಭ :— ಅಲ್ಲ ......ಇದೇನಿದು, ಕೃಷ್ಣಪ್ನೋರೇ?

ಕೀ. ಕೃ :— (ನಿಂತು) "ಕೃಷ್ಣಪ್ನೋರೇ"? ಯಾರದು ನನ್ನ ಈ ಕೊಂಪೇಲಿ ಹೆಸರ್ಹಿಡಿದು ಕೂಗೋರು? (ತಿರುಗಿ ತಿ.ಭ ನ್ನು ಸಮೀಪಿಸಿ ನೋಡಿ) ಆಯ್ಯೊ, ತಿಪ್ಪಾ ಭಟ್ರೇ?

ತಿ. ಭ :— ಹೌದೂ, ತಿಪ್ಪಾಭಟ್ನೇ. ಈ ಬಡ ಬ್ರಾಹ್ಮಣ ತಮ್ಕಣ್ಣಿಗ್ಯಾಕ್ಬಿದ್ದಾನು?

ಕೀ. ಕೃ :— ಎಲ್ಲಾದ್ರೂ ಉಂಟೇ? ನನಗೆ....ನನಗೇ....ಈಗ ನನ್ನ ಮನಸ್ಸಿನ ಸ್ಥಿತಿ ಹೇಗಿದೆ ಅಂತ್ಹೇಳೋಕೆ ಬರೋಲ್ಲ. ರಾತ್ರಿ ರೈಲು ಪ್ರಯಾಣ ಬೇರೆ .......

ತಿ. ಭ :— ಯಾವ ಊರಿಗ್ಹೋಗಿದ್ರಿ?

ಕೀ. ಕೃ :— ಯಾವ ಊರಿಗೂ ಹೋಗಿರ್ಲಿಲ್ಲ. ನಮ್ಮೂರ್ನಿಂದ ಈಗ್ತಾನೆ ಬರ್‍ತಿದೀನೀ........

ತಿ. ಭ :— ಕೃಷ್ಣಪ್ನೋರೇ!

ಕೀ. ಕೃ :— ತಡೀರಿ....ಈಗ್ನಿಜ್ವಾಗ್ಲೂ ನಂಗೆ ಸಮಾಧಾನ್ವಾಗ್ನಿಂತು ಮಾತಾಡೋ ಪರಿಸ್ಥಿತೀಲಿಲ್ಲ ಮನಸ್ಸು. ದಯವಿಟ್ಟು, ಈ ಹಾಳೂರ್ನಲ್ಲಿ, ಅದ್ಯಾವ್ದೋ ಶೆಂಟ್ರಲ್ ಹೋಟ್ಲು ಅಂತಿದ್ಯೆಂತಲ್ಲಾ, ಅದೆಲ್ಲಿದೆ ಹೇಳಿ.

ತಿ. ಭ :— ಇದೇನ್ ಕೃಷ್ಣಪ್ನೋರೇ, ಇದೇನ್ ಹುಚ್ಚಿಮುದ್ದ........

ಕೀ. ಕೃ :— ನನಗಲ್ಲ ಹುಚ್ಚೊ ; ನನಗ್ಯಾಕ್ಹಿಡ್ದೀತೂ........ನನ್ನ ಮಗ, ಚಂದ್ರಶೇಖರ, ಅವಿವೇಕಿ........

ತಿ. ಭ :— ಅವನಿಗ್ಹಿಡಿದ್ಬಿಡ್ತೇ ಹುಚ್ಚು ?

ಕೀ. ಕೃ :— ಅಲ್ಲಾ. ಅವ್ನಾ ಶೆಂಟ್ರಲ್ ಹೋಟ್ಲಲ್ಲಿದಾನೆ. ಅವನ್ಗೆ ನಮ್ಮ ಹಾರ್ನ್ಹಳ್ಳಿ ವಿಶ್ವೇಶ್ವರ ಭಟ್ರಲ್ವೇ ?

ತಿ. ಭ :— ಹೂ, ಹೂ.... ಅವರಿಗ್ಹುಚ್ಚೇ ?

ಕೀ ಕೃ :— ಊಹೂ. ಅವರ ಮಗಳ್ನ ತಂದ್ಕೊಳ್ಳೋದು ಅಂತ್ಗೊತ್ಮಾಡಿ ಮೊನ್ನೆ ಬುಧವಾರ ಲಗ್ನ ಇಡಿಸಬಹುದು ಅಂತ ಕಾಗ್ದ ಬರೆದೆ ........

ತಿ. ಭ :—ಹೂ, ಹೂ....ಆ ಹುಡ್ಗೀಗೇನಾದ್ರೂ ಹುಚ್ಚ್ಹಿಡಿದ್ಬಿಡ್ತೇನು ? ಅನ್ಯಾಯ, ಅನ್ಯಾಯ.

ಕೀ. ಕೃ :— ಅಯ್ಯಯ್ಯೋ, ನೀವ್ ನನಗ್ಹುಚ್ಚ್ಹಿಡಿಸ್ಬಿಡ್ತೀರಿ ಇನ್ನು. ಅಲ್ರೀ, "ಲಗ್ನ ನಿಷ್ಕರ್ಷೆ ಮಾಡ್ಬಿಟ್ಟಹ್ದು, ತಕ್ಷಣ ಹೊರಟ್ಬಾ" ಅಂತ್ಕಾಗ್ದ ಬರೆದ್ರೆ, ಈ ಮಗ, ತಾನೂ ಬರ್ದೆ, ಕಾಗ್ದಾನೂ ಬರೀದೇ ಇಲ್ಲೇ ಕೂತ್ಬಿಟ್ಟಿದಾನಲ್ಲ ! ಏನ್ಹೂತಿಟ್ಟಿದ್ದೀತಿಲ್ಲಿ ? ನಾಲಕ್ಸಾವಿರ ರೂಪಾಯಿ ವರದಕ್ಷಿಣೇಗೊಪ್ಕೊಂಡು, ಒಂದ್ಸಾವಿರ ಮುಂಗಡಾನೂ ಕೊಟ್ಬಿಟ್ರು ಅಂದ್ರೇ........ಈಗ್ಮುಂದಿನ ಲಗ್ನದಲ್ಲಾದ್ರೂ ಮುಗಿಸ್ಬಿಡೋಣ, ನಾನೇ ಬಂದು ಒದ್ದು ಎಳ್ಕೊಂಡ್ಹೋಗೋಣ ಅಂತ ಖುದ್ದಾಗಿ ಬಂದೆ.

ತಿ. ಭ :— (ಸ್ವಗತ) ನನಗ್ಯಾಕೋ .......ನನ್ಗೇ ಹುಚ್ಚ್ಹಿಡೀತಾ ಇದ್ದಂಗಿದೆ. ಯಾಕಿವರ್ಹೀಗ್ಮಾತಾಡ್ತಾ ಇದಾರೆ ? (ಪ್ರಕಾಶ) ಕೃಷ್ಣಪ್ನೋರೇ, ತಮಗೆ, ಮೈಯಲ್ಲಿ, ಹುಷಾರಿದೆತಾನೇ ?

ಕೀ. ಕೃ :— ಯಾಕ್ರೀ, ಯಾಕ್ರೀ, ನನಗೇನಾಗಿದೆ ?

ತಿ. ಭ:— ನಾನೇನ್ಹೇಳ್ಲಿ? ತಮ್ಮ ಮಗ ಚಂದ್ರಶೇಖರಂಗೆ ಮದ್ವೆ ಆಯ್ತಲ್ಲ, ಮೊನ್ನೆ. ಬುಧವಾರಾ....

ಕೀ. ಕೃ:— ಇಲ್ಲಪ್ಪಾ, ಆಗ್ಲಿಲ್ಲ. ಆಗ್ಬೇಕು ಅಂತ ನಾನ್ತೀರ್ಮಾನ್ಸಿದ್ದೆ. ಅವನು ಊರಿಗ್ಬರ್ದೆ ಚಕ್ಕರ್ ಕೊಟ್ಟ.

ತಿ. ಭ:— ಅಲ್ರೀ, ನೀವು ನನ್ನ ತಮಾಷೆ ಮಾಡ್ಬೇಡಿ. ಲಗ್ನಪತ್ರಿಕೆ ಕೊಟ್ರೂ ನಾನು ಮದ್ವೇಗೆ ಬರ್ಲಿಲ್ಲ ಅನ್ನೋ ಕೋಪದ್ಮೇಲೇ........

ಕೀ. ಕೃ:— "ಲಗ್ನಪತ್ರಿಕೆ ಕೊಟ್ರೂ".... .......? ತಿಪ್ಪಾಭಟ್ರೇ, ಯಾರ್ನಿಮ್ಗೆ ಲಗ್ನಪತ್ರಿಕೆ ಕೊಟ್ಟೋರೂ? ನೀವ್ನನ್ನ ತಮಾಷೆ ಮಾಡ್ಬೇಡಿ.

ತಿ. ಭ:— ತಮಾಷೆ ಯಾಕೆ? ಮೊನ್ನೆ ಬುಧವಾರ ನಿಮ್ಮ ಚಂದ್ರೂಗೆ ನಮ್ಮ ಈ ಊರಿನ ರಾವ್ ಸಾಹೇಬ್ ರಾಮರಾಯರ ಮಗಳ್ನ ಕೊಟ್ಟು ಮದ್ವೆ ಆಗ್ಲಿಲ್ವೇ? ನೀವೂ ಅದಕ್ಕೆ ಬಂದಿರ್ಲಿಲ್ವೇ? ನಮ್ಮನ್ನೋರೆಲ್ಲಾ ಅದಕ್ಕೆ ಹೋಗಿರ್ಲಿಲ್ವೇ? ನೀವು ಅಸಾಧ್ಯವಾಗಿ ಬಳೆ, ವಂಕಿ, ಡಾಬು, ನಾಗಮುರಿಗೆ, ಎಲ್ಲಾ ಓದ್ಸಿದ್ದನ್ಹೇಳ್ಲಿಲ್ವೇ?

ಕೀ. ಕೃ:— ಭಟ್ರೇ, ಭಟ್ರೇ, ಭಟ್ರೇ, ಬೇಡೀ ಬೇಡೀ ಬೇಡೀ. ನನ್ನಲ್ಲಿ ಉರೀತಾ ಇರೋ ಕೋಪಕ್ಕೆ ತುಪ್ಪ ಹೊಯ್ಬೇಡಿ.

ತಿ. ಭ:— ನಾನ್ ಸುಳ್ಹೇಳ್ತಾ ಇದೇನೆ ಅಂತಿಳ್ಕೊಂಡಿದೀರಾ?

ಕೀ. ಕೃ:— ನಿಜ ಅಂತ ನನ್ನ ನಂಬು ಅಂತೀರಾ?

ತಿ. ಭ:— ಖಂಡಿತ್ವಾಗೂ ನಿಜ, ಕೃಷ್ಣಪ್ನೋರೇ. ನೀವ್ಹೇಳೋದೂ ನಿಜವೇ ಆದ ಪಕ್ಷದಲ್ಲಿ....ನಿಜ ಯಾವ್ದು ಅನ್ನೋದೇ ನನಗ್ಗೊತ್ತಾಗ್ತಾ ಇಲ್ಲ. ಬನ್ನಿ, ನಮ್ಮನೇಗ್ಬನ್ನಿ, ಲಗ್ನಪತ್ರಿಕೆ ಕೊಡ್ತೇನೆ. ಆಮೇಲಾದ್ರೂ ನಿಮಗೆ ನಂಬ್ಕೆ............

ಕೀ. ಕೃ:— ಲಗ್ನಪತ್ರಿಕೆ ಕೊಡ್ತೀರಾ?.... ಭಟ್ರೇ....ನನಗ್ಯಾಕೋ.... ನಿಮ್ಮಿಬ್ರ ಮಾತೂ ನಿಜ ಅಂತ ತೋರ್ತಾ ಇದೆ. ಏನೋ ಮೋಸ

ನಡೆದ್ಹೋದ್ಹಾಗಿದೆ.... ಇದಕ್ಕೇ ಈ ಅಯೋಗ್ಯ ಊರಿಗ್ಬರ್ಬೇಕು ಕೂತ್ಬಿಟ್ಬಿರ್ಬೇಕು! ಯಾವೋನವ್ನು? ರಾವ್ ಸಾಹೇಬ್ನೇ? ... ಹುಂ....ಭಟ್ರೇ, ಮೊದಲು ಆ ಲಗ್ನಪತ್ರಿಕೆ ನನ್ನ ಕೈಲಿಡಿ. ಆಮೇಲೆ ಆ ರಾವ್‌ಸಾಹೇಬನ ಮನೆ ತೋರ್ಸಿ....ದೇವ್ರಿದಾನೆ ...ಹಳ್ಳಿಯೋನ ಕೈ ನಾನೂ ತೋರಿಸ್ಬಿಡ್ತೀನೆ.

(ನಿಷ್ಕ್ರಮಿಸುವರು)

— ತೆರೆ —

## ದೃಶ್ಯ ೨

[ರಾ.ರಾ. ಮನೆ ಮುಂದಿನ ಕೋಣೆ. ಜೋಯಿಸರೊಡನೆ ಮಾತನಾಡುತ್ತ ಕುಳಿತಿರುವರು. ಸೀತ, ಕೆಟಲಿನಿಂದ ಕಾಫಿ ಲೋಟಗಳಿಗೆ ಹಾಕುತ್ತಿದ್ದಾಳೆ]

ರಾ ರಾ:— ನೀವ್ಹೇಳಿದ್ಹಾಗೇ, ಜೋಯಿಸ್ರೇ, ಘಳಿಗೆ ಒದಗ್ಬಂದ್ರೆ, ಕೆಲ್ಸಗ್ಳು ಹ್ಯಾಗೆ ನೆರವೇರ್ಹೋಗುತ್ವೆ ನೋಡಿದ್ರಾ? (ಸೀತಮ್ಮನಿಗೆ) ಏನೇ? ನೀನು ಸುಮ್ನೆ ನನ್ನ ಗೋಳ್ಹುಯ್ಕೋತಿದ್ದಿ, ನೋಡು, ಹ್ಯಾಗಾಗ್ಹೋಯ್ತು. (ಕಾಫಿ ಲೋಟ ತೋರುತ್ತಾ) ತೊಗೊಳ್ಳಿ, ಜೋಯಿಸ್ರೇ. (ತಾನೊಂದು ಲೋಟ ತೆಗೆದುಕೊಂಡು) ಆಗ್ಹೋಯ್ತೇನೇ ಕಾಫಿ?

ಸೀತ:— ಯಾಕೆ?

ರಾ.ರಾ:— ತಾವೂ ತೊಗೊಳ್ಳಿ. (ಒಂದು ಲೋಟ ಅಕೊಂಡು ತನ್ನ ಲೋಟದಿಂದ ಸ್ವಲ್ಪ ಬಗ್ಗಿಸುವರು).

ಸೀತ:— ನನ್ಗೇನ್ ನಿಮ್ಮ ಉಪಚಾರ ಬೇಡ. ನೀವ್ತೊಗೊಳ್ಳಿ, ಸಧ್ಯಕ್ಕೆ. ನಿಮಗ್ತಾನೆ ಆದರ ಹುಚ್ಚು.

ರಾ.ರಾ:— AAll right. ಬಿಡು. (ಎರಡು ಲೋಟದ್ದೂ ತಾನೇ ಕುಡಿದು) ನಿನಗಿದ್ದಿದ್ದೆಲ್ಲಾ ಅಳಿಯನ ಹುಚ್ಚು. ಅದೂ ಈಗ ಬಿಟ್ಹೋಯ್ತು ಇನ್ನು

ನಿನ್ನ ಯಾರೇ ಹಿಡ್ಕೊಳ್ಳೋರು? ಇಬ್ರು ಮಕ್ಳ ಮದ್ವೇನೂ ನಡೆಸ್ಬಿಟ್ಟಿದ್ದಿ. ನಮ್ಮ ಶಾಂತೂ ಮಾವಾನೂ ಘರವಾಗಿಲ್ಲ, ಜೋಯಿಸ್ರೇ. ಸ್ವಲ್ಪ old typeಉ, ಅಷ್ಟೆ. (ಸೀತಮ್ಮನಿಗೆ) ಏನೇ?

ಸೀತ: – ಆದ್ರೇನಂತೆ ಪಾಪ, ನಿಧಾನಸ್ಥರು. ಶಾಂತು ಪುಣ್ಯ........ ದೇವರ ಪೂಜೆ ಮುಗಿಯೋತ್ಲೂ ಕಾಫಿ ಕೊಡು ಅಂತ್ಹೇಳಿದ್ದೆ. ಏನ್ಮಾಡಿದ್ಳೊ!
(Tray, kettle, cups ತೆಗೆದುಕೊಂಡು ಒಳಗೆ ಹೋಗುವಳು)

ರಾ.ರಾ:— ಅಂಥಾ ಒಳ್ಳೆ ಹುಡುಗ ಆದ್ರೂನೂ ಒಂದ್ಬಿಡ್ಮಾಸಾದ್ರೂ ಕೇಳ್ಬೇಡ್ವೇ, ವರದಕ್ಷಿಣೆ ಅಂತ?

ಪು.ಜೋ:— ಅಲ್ದೆ, ಅದೇನ್ ಒಡವೆ ಹುಡ್ಗೀಗೆ! ಬಳೆ, ವಂಕಿ, ಡಾಬು, ನಾಗಮುರಿಗೆ! ಆ ಮೈಸೂರ್ನೋರು ಖಂಡಿತ ಇಷ್ಟು ಆಭರಣ ಇಡ್ತಿರ್ಲಿಲ್ಲ.

ರಾ.ರಾ:—ನಮ್ಮ ಭೀಮು, ನಿಜವಾಗ್ಲೂ ಅಸಾಧ್ಯ! ಏನೋಂತಿದ್ದೆ! ಅಬ್ಬಬ್ಬಬ್ಬಬ್ಬ..........ಅವ್ನ arrangement ನೋಡಿ. Telegram ಅಂದ. ಮಾರ್ನೆ ರೈಲ್ನಲ್ಲಿ ಹಾಜರ್ ಆತ. ನಿಮಿಷದ್ದಲ್ಲಿ ಒಪ್ಪಿಸ್ದ. ಮುಖ್ಯ ಆತನೂ ಒಳ್ಳೆಆತ. ಅವರ ಸ್ವಭಾವ ವಿಚಿತ್ರ ಅಂತ ಹೆದರ್ಸಿದ್ದ. ಏನಿಲ್ಲ. ಕಾಣ್ಲಿಲ್ಲ.

ಪು.ಜೋ:— ಧರ್ಮರಾಯ ಅಂದ್ರೇ........ಸಾಕ್ಷಾತ್ ಧರ್ಮರಾಯ!

[ತೆರೆಯಲ್ಲಿ ಕೀ.ಕೃ. ಬೀದಿ ಬಾಗಿಲು ಬಡಿಯುತ್ತಾ "ಪಯ್ ರಾವ್ ಸಾಹೇಬಾ" ಎಂದು ಕೂಗುವನು]

ರಾ.ರಾ:— ಇದ್ಯಾರಿದು........?

ಪು.ಜೋ:— ಹೀಗ್ಯಾಗ್ತಾರಲ್ಲ?

[ಪುನಃ ಕೀ.ಕೃ. "ಯಾರದು ರಾವ್ ಸಾಹೇಬಾ?" ಎಂದು ಕೂಗಿ ಪ್ರವೇಶಿಸು ವನು. ರಾ.ರಾ. ಮತ್ತು ಪು.ಜೋ. ಎದ್ದು ಆಶ್ಚರ್ಯದಿಂದ ಆತನನ್ನು ಸಮ್ಮೀಪಿಸು ವರು. ಇದನ್ನು ನೋಡದೆ—]

ಕೀ. ಕೃ :— ಯಾರ‍್ರೀ ಈ ಮನೇಲೀ, ರಾವ್ ಸಾಹೇಬಾ? ರಾಮ್ರಾಯ್ರೋ ಭೀಮ್ರಾಯ್ರೋ, ಎಲ್ಲವನು ?

ರಾ.ರಾ :— ಅಯ್ಯೋ, ಕೃಷ್ಣಪ್ನೋರು! ಎಲ್ಹೋಗಿದ್ರಿ?.... ಒಳ್ಗೆ ದೇವರ ಪೂಜೆ ಮಾಡ್ತಿದ್ರಿ?!

ಕೀ. ಕೃ :— ಠಕ್ಕು....ಮೋಸ....ಅಯೋಗ್ಯ!

ರಾ.ರಾ :— ಅಯ್ಯಯ್ಯೋ!

ಪು.ಜೋ :— (ಹತ್ತಿರ ಬಂದು) ಕೃಷ್ಣಪ್ನೋರೇ....ಯಾಕೇ ?

ಕೀ. ಕೃ :— (ಎಲ್ಲರನ್ನೂ ನೋಡಿ) ಓಹೋ.... ಈ ಮನೇಗೆ ದಿಕ್ಕು.... ಇದೀರೋ !

ಪು.ಜೋ :— ಅಲ್ಲ, ಕೃಷ್ಣಪ್ನೋರೇ........

ಕೀ. ಕೃ :— ನಿಲ್ಸೀ, ನೀವ್ಮಾತಾಡ್ಬೇಡಿ. ನಿಮ್ಮುಸಡಿ ನೋಡಿದ್ರೆ ಜೋಯಿಸ್ರು ಕಂಡ್ಹಾಗ್ಕಾಣಿಸ್ತೀರಿ. ನಿಮ್ಮಿಂದಾನೇರೀ ಇಂಥಾ ಅನ್ಯಾಯ, ಮೋಸಗ್ಳೆಲ್ಲಾ ಆಗೋದು. ನೀವೋ, ನಿಮ್ಮ ಶಾಲೋ, ನಿಮ್ಮ ರುದ್ರಾಕ್ಷೀನೋ, ನಿಮ್ಮ ವೀಭೂತೀನೋ, ಅಷ್ಟಾಘಭೂತಿಗಳು ನೀವು! (ಜೋಯಿಸರನ್ನು ಪಕ್ಕಕ್ಕೆ ಒತ್ತರಿಸಿ, ರಾ.ರಾ.ನ ಸಮೀಪಿಸಿ) ಸ್ವಾಮೀ, ತಾವು ಇದ್ದದ್ರ ಮಟ್ಗೆ ಸಾಚ ಕಾಣಿಸ್ತೀರಿ. ತಾವ್ದೇಳೀ, ಈ ಮನೆ ಯಜಮಾನನಂತೆ, ಆದ್ಯಾವೋನೋ ರಾವ ಸಾಹೇಬ್ನಂತೆ, ರಾಮ್ರಾಯ್ನಂತೆ, ಪಟ್ಣವಾಸ್ದೋನಿರಬಹುದು, ದೊಡ್ಮನುಷ್ಯನಿರಬಹುದು, ಆದ್ಹಾಗೆ ಹಳ್ಳಿಯೋರು ಅಂತ ನಮ್ಮನ್ನ ಮೋಸ ಮಾಡಬಹುದೇ? (ಲಗ್ನಪತ್ರಿಕೆ ತೋರುತ್ತಾ) ನೋಡಿ, ಇದಕ್ಕೇನ್ ಸ್ವಾಮೀ ಅರ್ಥ?

ರಾ.ರಾ :— ಯಾಕೆ.... ನನ್ಗೆ.... ನಿಮ್ಮ ಇದು.... ಅರ್ಥವಾಗ್ಲಿಲ್ಲ....

ಕೀ. ಕೃ :— ಹೌದು, ನಿಮಗೆ ಅರ್ಥವಾಗೋಕೇ........ಕಾರಣ........ ಗೊತ್ತಿಲ್ಲ....ಇಲ್ಕೇಳಿ, ನಾನು ಕೀರ್ನಹಳ್ಳಿ ಕೃಷ್ಣಪ್ಪ. (ಲಗ್ನಪತ್ರಿಕೆಯಲ್ಲಿ

'ಚಂದ್ರಶೇಖರ' ಎಂದು ಇರುವ ಸಾಲನ್ನು ತೋರುತ್ತಾ) ಇಗೋ, ಈ ಅಯೋಗ್ಯ, ಚಂದ್ರಶೇಖರ, ನನ್ಮಗ! ....... ಈಗ್ಗೊತ್ತಾಯ್ತೇ?

ರಾ.ರಾ:— 'ಅಲ್ಲ' ಅಂದೋರ್‍ಯಾರು, ಕೃಷ್ಣಪ್ನೋರೇ? (ಪು.ಜೋ.ಗೆ) ಯಾಕಿವರು ಹೀಗ್ಮಾತಾಡ್ತಾ ಇದಾರಲ್ಲ?........

ಪು.ಜೋ:— (ರಾ.ರಾ.ಗೆ) ನಿನ್ನೆ ಮೊನ್ನೆ ಎಲ್ಲಾ ಸ್ವಸ್ಥವಾಗಿದ್ರಲ್ಲಾ ................ಈಚಿಗೆ ಕೆಲವು ಕಡೆ ಎಲ್ಲಾ ಇದ್ದಕ್ಕಿದ್ದಾಹಾಗೇ ಮಿದುಳು ಕೆಟ್ಹೋಗಿ........ಹೀಗಾಗಿರೋದನ್ನ ಕೇಳಿದೇವಲ್ಲಾ....ಇವರ್‍ಗೂ ಈ ಮಧ್ಯೆ ಸಂಭ್ರಮ........

ರಾ.ರಾ:— ಬೆಳಿಗ್ಗೆ ಸರಿಯಾಗಿದ್ರಲ್ಲಾಽಂದೇ! ದೇವರ ಪೂಜೆ ಮಾಡಿ....ಕಾಫಿ,—ಈಗವ್ರು ಒಳಗ್ಹೋಗ್ಲಿಲ್ವೇ—'ಶಾಂತು ಕಾಫಿ ಕೊಟ್ರೋ ಇಲ್ವೋ ನೋಡ್ತೀನಿ', ಅಂತ. ನಾವಿಲ್ಲೇ ಕೂತಿದೀವಿ... ಇವರು ಹೊರಗ್ಹಾಗ್ಹೋದ್ರು....?

ಪು.ಜೋ:— ಏನೋ ಒಂದೂ ಗೊತ್ತಾಗೋ ಹಾಗೇ ಇಲ್ವೇ!

ಕೀ.ಕೃ:— ಏನ್ರೀ ಅದು, ನೀವ್ನೀವು ಒಬ್ರಿಗೊಬ್ರು ಕಿವಿ ಕಚ್ಚಾಡೋದೂ?

ಪು.ಜೋ:— (ರಾ.ರಾ.ಗೆ) ಡಾಕ್ಟರಿಗಾದ್ರೂ ಹೇಳ್ಕಳ್ಸೋಣ್ವೇ?

ಕೀ.ಕೃ:— ರೀ! (ಎಂದು ಪು.ಜೋ.ನ ಎಳೆಯುವನು)

ಪು.ಜೋ:— ಹಾಗಲ್ಲ, ಕೃಷ್ಣಪ್ನೋರೇ, ತಾವು....ಹೀಗೆ ದಯಮಾಡಿ, ಸ್ವಲ್ಪ ವಿಶ್ರಮಿಸ್ಕೊಳ್ಳಿ........

ಕೀ.ಕೃ:— ನಿಮ್ಮ ಉಪಚಾರ ನನಗ್ಬೇಕಿಲ್ಲ.... ಆ ರಾವ್ ಸಾಹೇಬನ್ನ ಮೊದಲು ತೋರ್‍ಸಿ.

ರಾ.ರಾ:— ಯಾಕೆ, ಕೃಷ್ಣಪ್ನೋರೇ, ನನ್ನ ಗುರ್ತು ಮರೆತ್ಬಿಟ್ರೇ?

ಪು.ಜೋ:— ಇವ್ರೇ ಅಲ್ವೇ ರಾವ್ ಸಾಹೇಬ್ರು?

ಕೀ. ಕೃ :— ಆ ? ಏನ್ರೀ, ನೀವೇನೇ ಆ ರಾವ್ ಸಾಹೇಬ ?

ಪು.ಜೋ :— ಹೂ, ನಾನೇ ಅಲ್ವೇ ಪುಟ್ಟಾಜೋಯಿಸ ?

ಕೀ ಕೃ :— (ಪು.ಜೋ.ನ ಲಕ್ಷ್ಯ ಮಾಡದೆ ರಾ.ರಾ.ನ ನುಂಗಿಬಿಡುವಂತೆ ನೋಡುತ್ತಾ ಹೆಜ್ಜೆಯ ಮೇಲೆ ಹೆಜ್ಜೆಯಿಟ್ಟು ಸಮೀಪಿಸುವನು. ರಾ.ರಾ. ಹಿಂದೆ ಹಿಂದೆ ಹೋಗುವರು) ನೀನೇನೋ ರಾಮರಾಯ ? ಆಂ ? ದಶರಥನ ಮಗರಾಯ ? ಆಂ ?

[ಕೃತಕ ಕೀರ್ಣ್ಬಳ್ಳಿ ಕೃಷ್ಣಪ್ಪ ಕಾಫಿ ಲೋಟ ಕೈಲಿ ಹಿಡಿದು ಪ್ರವೇಶಿಸಿ ತೆರೆಯ ಮರೆಯಲ್ಲಿರುವ ಶಾಂತೂಗೆ, "ಸಕ್ರೇನಾ ?" ಎನ್ನುವ ಶಬ್ದ ಕಿವಿಗೆ ಬಿದ್ದೊಡನೆ, ರಾ.ರಾ., ಪು.ಜೋ., ಮತ್ತು ಕೀ.ಕೃ. ಎಲ್ಲರೂ ಆ ಕಡೆ ತಿರುಗಿ ನೋಡಿ ಚಕಿತ ರಾಗುವರು]

ಕೃ. ಕೀ. ಕೃ :— (ಶಾಂತೂಗೆ) ಸಕ್ರೇ ...ಬೇಡಮ್ಮ....ಜಾಸ್ತಿ ತಿಂದ್ರೇ ....ಮೈಗಾಗೋಲ್ಲ....ವಯಸ್ಸಾಗ್ಹೋಯ್ತು....ಬೇಡ. (ಈ ಕಡೆ ತಿರುಗಿ ಕೀ.ಕೃ.ನ ಕಂಡು) ಓ೦ !

ರಾ.ರಾ :--- ಏನಿದು, ಜೋಯಿಸ್ರೇ ? ಇಬ್ರಾದ್ರಲ್ಲ ! ಅವರ್‍ಯಾರು, ಇವರ್‍ಯಾರು ?

ಪು.ಜೋ :— ವ್ಯತ್ಯಾಸವೇ ಗೊತ್ತಾಗೋಲ್ವೇ !

ಕೀ. ಕೃ :— (ಕೃ.ಕೀ.ಕೃ.ನ ಸಮೀಪಿಸಿ) ಆಲೆಲೆಲೆಲೆಲೆ........ಘರವಾಗಿಲ್ವೇ ! ಯಾರ್ರೀ ನೀವು ? (ಕೃ.ಕೀ.ಕೃ. ನಶ್ಯವೇರಿಸಲು) ಯಾರ್ರೀ ನೀವು ಬೊಗಳ್ರೀ !

ಕೃ. ಕೀ. ಕೃ :— ಆ ?

ಕೀ. ಕೃ :— "ಯಾರ್ನೀವು, ಬೋಗಳ್ರೀ" ಅಂದೆ.

ಕೃ. ಕೀ. ಕೃ :— ಸ್ವಾಮಿನ್....ನನಗೆ....ತಮ್ಮ ಹಾಗೆ....ಏಕಾಏಕೀ.... ಬೊಗ್ಳೋಕ್ಬರೋಲ್ಲ....ಏನೋ ಸ್ವಲ್ಪ ಪುರಸೊತ್ತು ದಯಪಾಲ್ಸಿದ್ರೆ....ಪ್ರಯತ್ನ ಪಡ್ತೀನಿ. ನನ್ನ 'ಯಾರು' ಅಂತ್ಕೇಳಿದ್ರಿ, ಅಲ್ವೇ ?

ಕೀ. ಕೃ :— ಕಿವಿ ಕಿವ್ಡೇನ್ರೀ ನಿಮ್ಗೇ?

ಕೃ. ಕೀ. ಕೃ :— (ಕಿವಿಗಳಿಗೆ ಬೆಟ್ಟಿಟ್ಟುಕೊಂಡು) ಇಲ್ಲ ಇಲ್ಲ. ಸಧ್ಯಕ್ಕೇನೋ ದೇವರ ದಯದಿಂದ ಕೇಳಿಸ್ತಾ ಇದೆ. ಆದ್ರೆ ತಾವಿದೇರೀತಿ ಇನ್ ಸ್ವಲ್ಪ ಹೊತ್ತು ಬೊಗಳ್ಬಿಟ್ರೆ, ಕಿವಿ ಕಿವ್ಡಾಗೋ ಸಂಭವ ಉಂಟು. ಎಲ್ಲೀ ಗ್ರಹಚಾರ! ತಮ್ಮ ಪ್ರಶ್ನೇನ ಉತ್ತರಿಸ್ಬಿಡ್ತೇನೆ. ಲಾಲಿಸ್ಬೇಕು. ನಾನು ಕೀರ್ಸ್ಹಳ್ಳಿ ಸಾಹುಕಾರ. ನನ್ನ ನಾಮಕರಣ ಕಾಲ್ದಲ್ಲಿ, ನಮ್ಮ ತಂದೆ, ನನ್ಗೆ, "ಕೃಷ್ಣಪ್ಪ" ಅಂತ ಹೆಸರಿಟ್ರು.

ದಾ. ರಾ :— (ಪು. ಜೋ. ಗೆ) ನೋಡಿದ್ರಾ, ಅವ್ರೇ ಕೃಷ್ಣಪ್ನೋರು!

ಕೀ. ಕೃ :— (ಕೃ. ಕೀ. ಕೃ. ಗೆ) ನಿಮ್ಮಪ್ಪ........ನಿನ್ಗೆ........"ಕೃಷ್ಣಪ್ಪ" ಅಂತ್ಹೆಸರಿಟ್ನೋ? .........ನಾಮಕರಣ ಕಾಲದಲ್ಲಿ?.... ....ಏಯ್.... ತಯಾರಾಗು.... ಈಗ್ನಾನ್ ನಿನ್ಗೆ ಹುಟ್ಟಿದ್ಹಬ್ಬ ಮಾಡ್ತೇನೇ! ಯಾರ್ಹತ್ರ ಮಾತಾಡ್ತಾ ಇದೇನೆ ಅಂತ ತಿಳ್ಕೊಂಡಿದ್ದೀಯೋ ನಿನ್ಮನಸ್ನಲ್ಲಿ? ನಾನು.... (ಎದೆ ತಟ್ಟಿಕೊಂಡು) ಅಯೋಗ್ಯ!

ಕೃ. ಕೀ. ಕೃ :— ಹೌದು, ಹೌದು.

ಕೀ. ಕೃ :— ಏನೂ?

ಕೃ. ಕೀ. ಕೃ :— ಅದೇ ತಾವ್ಹೇಳಿದ್ರಲ್ಲ.... ತಾವು.... ಅಯೋಗ್ಯ.... ಅಂತ........

ಕೀ. ಕೃ :— ನಾನಲ್ವೋ ಅಯೋಗ್ಯ. ನಾನು ಕೀರ್ಸ್ಹಳ್ಳಿ ಕೃಷ್ಣಪ್ಪ ............ಅಯೋಗ್ಯ!

ಕೃ. ಕೀ. ಕೃ :— ಹಾಗೇ ಆಗ್ಲಿ, ಸ್ವಾಮೀ, ವ್ಯತ್ಯಾಸವೇನು? ತಾವ್ಹೇಳ್ಬಿಟ್ಮೇಲೆ, ಕೀರ್ಸ್ಹಳ್ಳಿ ಕೃಷ್ಣಪ್ಪನೇ ಅಯೋಗ್ಯನಾಗ್ಲೇಳಿ.

ಪು. ಜೋ :— (ದಾ. ರಾ. ಗೆ) ನೋಡಿ, ನೋಡಿ, ಬೈದ್ರೂ ಎಷ್ಟು ಸಮಾಧಾನ್ವಾಗಿ ತೊಗೋತಾರೇ!

ಕೃ. ಕೀ. ಕೃ :--- (ಕೀ.ಕೃ.ಗೆ) ಅದಿರ್ಲಿ, ಸ್ವಾಮೀ, ತಾವು ನೋಡೋ ಕೇನೋ ತಕ್ಕಟ್ಟಿಗೆ ನನ್ನಾಗೇ ಇದೀರಿ. ಆದ್ರೆ ನನ್ನ ಹೆಸರು ನಿಮಗೆ ಹ್ಯಾಗ್ಗೊತ್ತಾಯ್ತು?ಅದನ್ನೂ ಕದ್ಬಿಡೋದೇ ?

ಕೀ. ಕೃ :— ಆ ? ನನ್ನ ಹೆಸರು ನನಗ್ಗೊತ್ತಿಲ್ವೇ ? ಕದ್ಬಿಟ್ಟದೇನ್ಯೇ ? ಹಾಗಾದ್ರೆ ನಾನು ಕೀರ್ನಹಳ್ಳಿ ಕೃಷ್ಣಪ್ಪ ಅಲ್ವೇ ?

ಕೃ. ಕೀ. ಕೃ :— ಹೌದೇ ? ಹಾಗೇಂತ ತಮಗ್ಯಾರ್ಹೇಳಿದ್ರು ?

ಕೀ. ಕ :— ನಾನ್ಯಾರು ಅನ್ನೋದನ್ನ ನನಗೆ ಇನ್ನೊಬ್ರು ಹೇಳ್ಬೇಕೇ ? ನನಗ್ಗೊತ್ತಿಲ್ವೇ ? ನಾನು ಕೀರ್ನಹಳ್ಳಿ ಕೃಷ್ಣಪ್ಪ ಅನ್ನೋದು ಪ್ರಪಂಚಕ್ಕೆಲ್ಲಾ ಗೊತ್ತಿದೆ.

ಕೃ. ಕೀ. ಕೃ :— ಗೊತ್ತಿದೆ, ಸ್ವಾಮೀ, ಗೊತ್ತಿದೆ. ತಾವು ಕೃಷ್ಣಪ್ನೋರು ಅನ್ನೋದು ಪ್ರಪಂಚಕ್ಕೆಲ್ಲಾ ಗೊತ್ತಿದೆ. (ರಾ.ರಾ.ಗೆ) ಎಲ್ಲಿಂದಹಿಡ್ಕೊಂಡ್ಬಂದ್ರೀ, ರಾವ್ ಸಾಹೇಬ್ರೇ, ಈ ಪ್ರಾಣೀನ ? ಹಹಹಹಹ.

ಕೀ. ಕೃ :— ಆ ? 'ಹಿಡ್ಕೊಂಡ್ಬಂದ್ರಿ' ? 'ಹಿಡ್ಕೊಂಡ್ಬಂದ್ರೀ' ? ನಾನೇನ್ ಮೃಗವೇ ಹಿಡ್ಕೊಂಡ್ಬರೋಕೇ ? (ಎಲ್ಲರೂ ನಗಲು) ಯಾಕ್ ಯಾಕ್ ನಗೋದು ? (ಕೃ.ಕೀ.ಕೃ.ಗೆ) ನನ್ನ ಮೂತೀಲಿ ಕೋತಿ ಕುಣಿಯುತ್ಯೇ ? ಹಲ್ಲುಲ್ಕಿರೀತೀಯೆ ! ತಡಿ, ತಡಿ, ನಿನಗೆ....ಹಲ್ಲುಗಳು ಉದುರಿಸ್ಬಿಡ್ತೇನೆ. (ದೊಣ್ಣೆ ಎತ್ತುವನು)

(ಸೀತಮ್ಮ ಮತ್ತು ಶಾಂತು ಪ್ರವೇಶಿಸಿ ಗಾಬರಿಯಾಗುವರು)

ಕೃ. ಕೀ. ಕೃ :— (ರಾ ರಾ.ಗೆ) ಸ್ವಾಮಿ, ಇವನು ಯಾವೋನೋ ಹುಚ್ಚ ! (ಕೀ.ಕೃ.ಗೆ) ರೀ, ಒಂದ್ನಿಮಿಷ ! ಸುಧಾರಿಸ್ಕೊಳ್ರೀ ! (ಸರ್ರನೆ ಒಳಗೋಡಿ ತಾನೂ ಒಂದು ದೊಣ್ಣೆ ತಂದು ಕದನ ಸನ್ನದ್ಧನಾಗಿ) ಊ, ಸ್ವಾಮಿನಹಾ, ದಯಮಾಡಿ, ಈಗ್ನೋಡೇಬಿಡೋಣ ಯಾರ ಹಲ್ಲುಗಳು ಉದುರಿ ಬಿದ್ಹೋಗತ್ವೋ ಅಂತ.... ನೋಡೇಬಿಡೋಣ.

(ಇಬ್ಬರೂ ಬಡಿದಾಡುವರು)

ಸೀತ :— ಅಯ್ಯಯ್ಯೋ....ಬಿಡ್ಸೀಂದ್ರೇ !

ಶಾಂತು :— ಅಮ್ಮಾ !.... ಅಪ್ಪಾ !!

ರಾ.ರಾ :— ರೀ....ರೀ....ಬಿಡ್ರೀ....ಬಿಡ್ರೀ.... (ಕೀ.ಕೃ.ನನ್ನು ಹಿಡಿಯುವರು)

ಪು.ಜೋ :— (ಕೀ.ಕೃ.ಗೆ) ಏನ್ರೀ ಇದು ನಿಮ್ದು....ನಿಲ್ಲಿಸ್ರೀ....

ಕೀ. ಕೃ :--- ಬಿಡೀ........ ಬಿಡೀ ಹೇಳ್ತೀನೆ........ ಅವನ್ನ........ (ಬಿಡಿಸಿಕೊಳ್ಳಲೆತ್ನಿಸಲು)

ರಾ.ರಾ-ಪು.ಜೋ :— ಆ....ನಿಲ್ರೀ ಸುಮ್ನೇ.

ಕೃ. ಕೀ. ಕೃ :— ಹಾ, ಹಾಗೇ, ಹಿಡ್ಕೊಳ್ಳಿ.... ಕಾರಿಗ್ಹೇಳ್ತೀನೆ.... ಎಲ್ಲೋ ಹುಚ್ಚಾಸ್ಪತ್ರೆಯಿಂದ ತಪ್ಪಿಸ್ಕೊಂಡು ಬಂದ್ಬಿಟ್ಟಿದಾನೆ ಅಂತ್ಕಾಣತ್ತೆ. ಕರ್ಕೊಂಡ್ಹೋಗಿ ಸೇರಿಸ್ಬಿಡೋಣ.

ಕೀ. ಕೃ ಬೇಡ, ಬೇಡಾ! ನಾನು ಹುಚ್ಚ ಅಲ್ಲ! ನಾನು ಕೀರ್ನ್ಹಳ್ಳಿ ಕೃಷ್ಣಪ್ಪ! ಚಂದ್ರೂನ ಕರೀರೀ ಗೊತ್ತಾಗತ್ತೇ ! ಚಂದ್ರೂನ ಕರೀರೀ !

(ಭೀಮು, ಚಂದ್ರು ಪ್ರವೇಶಿಸುವರು)

ಆಗೋ ಚಂದ್ರು....ಚಂದ್ರೂ !

ಚಂದ್ರು :— ಓ‌ೀ !

ಕೀ. ಕೃ :--- ಚಂದ್ರೂ, ನಾನು ಹುಚ್ಚನಂತೆ....ನನ್ನ ಹುಚ್ಚಾಸ್ಪತ್ರೇಗೆ ಸೇರಿಸ್ತಾರಂತೆ. ....ಓಹೋ....ಭೀಮು !.... ನೀನಿಲ್ಲಿ ?

ಭೀಮು :— ಚಂದ್ರೂ, the game is up. Don't worry...... (ರಾ.ರಾ., ಪು.ಜೋ.ಗೆ) ಬಿಡಿ ಅವರ್ನ.

ರಾ.ರಾ-ಪು.ಜೋ :— ಆ ?

ಭೀಮು :— ಕೂಡಿ ಕೃಷ್ಣಪ್ನೋರೇ.

ರಾ. ರಾ-ಪು. ಜೋ :— ಆ ? ! ಇವ್ರು....?

ಭೀಮು :— (ರಾ.ರಾ.ಗೆ) ನಿಮ್ಮ ಬೀಗರು. ನಿಜವಾದ ಬೀಗರು. ಎಲ್ರೂ ಕೂತ್ಕೊಳ್ಳಿ. ವಿಷಯ ಹೇಳ್ತೀನಿ. ಈ ನಾಟ್ಕಕ್ಕೆ ನಾನು ಕಾರಣ.

ರಾ.ರಾ :— ಆ ? !

ಪು.ಜೋ :— ನಾಟಕ ? !

ಕೀ. ಕೃ :— ಎಲ....ನೀನು....ನೀನ್ ಸೇರ್ಕೊಟ್ಟಿದ್ದೀಯೋ ಇದ್ರಲ್ಲಿ ? ಸರಿ. ಸರಿ.

ಭೀಮು :— ಸಂದರ್ಭ ಸೇರ್ಬೇಕಾಗ್ಬಂತು, ಸೇರಿಸ್ತು, ಸೇರ್ದೆ. ಈಗ ನಿಮ್ಮ ಎದೆಗ್ಳಲ್ಲಿ ಕೋಪದ ಜ್ವಾಲಾಮುಖಿ ಹುಟ್ತಾ ಇರಬಹುದು. ಅಥವಾ ಹುಟ್ಟೇ ಇದ್ದೀತು. ಆದರೆ ನಾವು ಯಾಕೆ ಹದ್ದಿನ ಸರಹದ್ದಿನ್ನ ಮೀರಿದ್ವು ಅಂತ ಹೇಳ್ಬಿಡ್ತೀನಿ. ಸಮಾಧಾನ್ವಾಗಿ ಕೇಳ್ಬಿಡಿ. ಆಮೇಲೆ ನಿಮ್ಮ ತೀರ್ಮಾನ ಹೇಗ್ಬೇಕಾದ್ರೂ ಇರ್ಲಿ. ನಾವು ಸಿದ್ಧವಾಗಿ ಎದುರಿಸ್ತೀವಿ. (ಕೀ.ಕೃ.ಗೆ) ನಿಮಗೆ (ಚಂದ್ರೂನ ತೋರುತ್ತ) ಇವನೊಬ್ನೇ ಮಗ. ಇವನು ಹುಟ್ಟಿದ ಒಂದು ತಿಂಗ್ಳಿಂದಾನೇ ನೀವೇ ತಂದೆ ತಾಯಿ ಎರಡೂ ಆಗಿ ಇಲ್ಲೀವರೆಗೂ ಬೆಳೆಸಿದ್ರಿ. ಯಾಕೆ ? ಮಗು ಮಗನಾಗಿ ಸಂತೋಷದಿಂದ ಬೆಳೆದು ಬಾಳಲಿ ಅಂತಲ್ವೇ ? (ರಾ-ರಾ., ಸೀತಾಗೆ) ನೀವೂ ಅವಳ್ನ (ಶಾಂತೂನ ತೋರಿ) ಎಷ್ಟು ಪ್ರೀತಿಯಿಂದ ಬೆಳೆಸಿದ್ರಿ ! ಇಬ್ಬರ ವಯಸ್ಸೂ ಮದ್ವೆ ಘಟ್ಟ ಮುಟ್ತು. (ಕೀ.ಕೃ.ಗೆ) ನಿಮಗೆ ಮಗನ್ಮೇಲಿನ ಮಮತೆ ಮಾಯವಾಯ್ತು ಅಂತ ನಾನ್ನಂಬೋಲ್ಲ. ಆದ್ಯಾಕೋ ಏನೋ ನಾಲಕ್ಸಾವಿರ ರೂಪಾಯಿನ ವರದಕ್ಷಿಣೆ ಕಿವೀಗೆ ಹೆಚ್ಚು ಇಂಪು ಕಾಣಿಸ್ತು. ವಿಶ್ವೇಶ್ವರಭಟ್ರ ಮಗಳು ಗೌರೀನ ತಂದ್ಕೊಳ್ಳೋ ಏರ್ಪಾಟ್ಮಾಡಿದ್ರಿ. (ರಾ.ರಾ.ಗೆ) ನೀವೂ ಆ ಮೈಸೂರ್ನೋನು ಬಂದು ಒಪ್ಪಿ ಒಡ್ವೆ ವಸ್ತ್ರ ಇಡ್ತೀನಿ ಅಂದಿದ್ರೆ ಅವನ್ಗೇ ಕೊಟ್ಟು ಲಗ್ನ ನಡೆಸ್ಬಿಡ್ತಿದ್ರಿ. ಅದೂ ಅವರ್ಮೇಲಿನ ಪ್ರೀತಿ ಹೋದ್ದರಿಂದ ಅಂತ ನಾನ್ಹೇಳೋಲ್ಲ. ನಿಮ್ಮ ಕಾಲಕ್ಕೂ ಈಗಿನ ಕಾಲಕ್ಕೂ ಮಧ್ಯೆ

ಗಾಲಿ ಬಹಳ ದೂರ ಉರುಳ್ಕೊಂಡ್ಹೋಗಿದೆ. ಇಬ್ರಿಬ್ರಿಗೂ ಪರಸ್ಪರ ತಾವೇ ಮದ್ವೆ ಮಾಡ್ಕೋಬೇಕು ಅಂತ ಮನಸ್ಸಿತ್ತು ಅಂತ ನಾನ್ಹೇಳಿದ್ರೆ ನಿಮಗದು ಅರ್ಥವಾಗ್ಲಾರ್ದು.

ರಾ.ರಾ:— ಏನೂ ?

[illegible]:— ಆ ?

ಚಂದ್ರು:— ಭೀಮು !

ಭೀಮು:— (ಒಳಗೋಡಲು ಹೊರಟ ಶಾಂತೂಗೆ) ಹಾ, ನಿಲ್ಲಿ. ಹೆದರ್ಕೋಗೆ ಕಾರಣ ಇಲ್ಲ. (ಇತರರಿಗೆ) ಹೌದು. ನಿಮ್ಮಾಲ್ದಲ್ಲಿ ಇಷ್ಟಿಷ್ಟಿದ್ದಾಗ ಮದ್ವೆ ಮಾಡ್ಬಿಡ್ತಿದ್ರಿ. ಬೇಕು ಬೇಡ ಅನ್ನೋಕೆ ಇಬ್ರಿಗೂ ವಿವೇಚನೆ ಶಕ್ತಿ ಇರ್ತಿರ್ಲಿಲ್ಲ. ಈಗ ಇವರು ಪುಟ್ಟ ಮಕ್ಕಳಲ್ಲ. ಬೊಂಬೆಗಳ ಮದುವೆ ಮಾಡಿಸಿದ್ಹಾಗೆ ಮಾಡಿಸೋಕೆ ಸಾಧ್ಯವಿಲ್ಲ. ಒಂದ್ವೇಳೆ ನಿಮ್ಮ ಮನಸ್ನಂತೆ ಆಗಿದ್ದದ್ರೆ ಇವರಿಗೆ ಬೇಕಾದ ವಸ್ತುಗಳು ಸಿಗದ್ಹಾಗಾಗಿ ಬೇಡವಾದ ಸಂಬಂಧಗಳು ಸಿಕ್ಕಿ, ಇವರ್ಗೂ, ಇವರ್ನ ಮದುವೆಯಾಗ್ತಿದ್ದ ಅವರ್ಗೂ, ಕಟ್ಟೋತನಕ ದುಃಖ ಲಭಿಸ್ತಿತ್ತೇ ಹೊರತು ಸುಖ ಅನ್ನೋದು ಸ್ವಪ್ನದಲ್ಲೂ ಲಭಿಸ್ತಿರ್ಲಿಲ್ಲ. ಈಗಿವರು, ನಿಮ್ಮ ನಿಮ್ಮ ಮಕ್ಕಳು, ಸಂತೋಷವಾಗಿ ನಗ್ತಾ ನಗ್ತಾ ಸಂಸಾರ ಮಾಡ್ಕೊಂಡಿರ್ತಾರೆ. ಇದು ನಿಮಗೆ ಸಹಿಸ್ದೆ ಇದ್ರೆ ಹೇಳಿ, ನನ್ನ ತಪ್ಪನ್ನ ಒಪ್ಕೋತೇನೆ. (ಕೀ.ಕೃ.ಗೆ) ಈಗ ನಿಮಗೆ ನಾಲಕ್ಕು ಸಾವಿರ ರೂಪಾಯಿ ವರದಕ್ಷಿಣೆ ಹೋಯ್ತು. ಅದನ್ನ ನಷ್ಟ ಅಂತ ಭಾವಿಸ್ತೀರೋ ? ಇಲ್ಲಾ, ಇವನು ನಿಮ್ಮ ವಿಶ್ವೇಶ್ವರ ಭಟ್ರ ಮಗಳ್ನ ಮದುವೆಯಾಗಿ ದುಃಖದಲ್ಲಿ ಮುಳುಗಿ ಉಳಿದ ಜೀವನಾನ ಸಾಗಿಸ್ತಾ ಇದ್ದಿದ್ರೆ ಆಗ ನಿಮ್ಮ ಪ್ರಯತ್ನ ವ್ಯರ್ಥ ಅಂತ ಭಾವಿಸ್ತಿದ್ರೋ ? (ರಾ.ರಾ.ಗೆ) ಅವರಿಗೆ ಬೇಡವಾದ ಆಭರಣಗಳು ಎಷ್ಟು ಹೇರಿದ್ರೆ ತಾನೆ ಏನು, ಹಾಕ್ಕೊಂಡು ನಲಿದಾಡ್ತಿದ್ರೇ ಅವರು ? ಕೊರಗಿ ಕೃಶವಾಗ್ಹೋಗ್ತಾ ಇದ್ರು. ಈಗೀ ಸಂಬಂಧದಿಂದ ನಿಮಗಾದ ನಷ್ಟವೇನು ? ಕಷ್ಟವೇನು ?

[illegible]:— ಹೌದೋ, ನಷ್ಟ ಅಂತಲ್ಲ... ಆದ್ರೆ....

ಭೀಮು :— ಶಾಂತಾದೇವೀ, ನಿಮ್ಮ ಮಾವನಿಗೆ ನಮಸ್ಕಾರ ಮಾಡಮ್ಮ. (ಶಾಂತು ಎರಡು ಸೆಕೆಂಡು ಸುಮ್ಮನಿರಲು) ಹುಂ. (ಶಾಂತು ಬಂದ್ದು ನಮಸ್ಕರಿಸುವಳು) ನೋಡಿ, ಕೃಷ್ಣಪ್ನೋರೇ, ಸೊಸೆ ಒಪ್ಪಿಗೆಯಾಗಿಲ್ವೇ?

ಕೀ. ಕೃ :— ಅದಲ್ವೋ……ಆಂ….ಊಂ….ಸರಿ……ನಂಗೆ…… ನಂಗೆ….ಒಳ್ಳೇದಮ್ಮ, ಒಳ್ಳೇದಮ್ಮ, (ಶಾಂತು ಹಿಂತಿರುಗುವಳು)

ಪು.ಜೋ :— ಅಲ್ವೋ, ನೀನಿಷ್ಟೆಲ್ಲಾ ಪುರಾಣ ಊದೋನು ಮೊದ್ಲೇ ಹೇಳ್ಬಿಟ್ಟಿದ್ರೆ ಇದನ್ನೆಲ್ಲಾ……

ರಾ ಶಾ :— ಹಾ….ಹಾ…. ಹೇಳ್ಬಿಡಬಹುದಾಗಿತ್ತು

ಕೀ. ಕೃ :— ಅದೇ ನಾನೂ ಹೇಳ್ಬೇಕೊಂತಿದ್ದಿದ್ದು. ನನಗ್ಯಾಕೀವಿಷಯ ಮೊದ್ಲೇ ತಿಳಿಸ್ಲಿಲ್ಲ ಅಂತ….?

ಭೀಮು :— ಹೇಳ್ತೀನೆ. ಮೊದ್ಲೇ ಈ ವಿಷಯ ತಿಳ್ಸಿದ್ದಿದ್ರೆ ನೀವು ಇಷ್ಟು ಸುಲಭವಾಗಿ ಸಮಾಧಾನ್ವಾಗ್ತಿದ್ರಿ ಅಂತ ನನಗೆ ನಂಬ್ಕೆ ಇರ್ಲಿಲ್ಲ. ನೀವಾಗೋಲ್ಲ ಅಂದ್ಬಿಟ್ಟಿದ್ರೆ ಆಗ ನಮಗೆ ಬೇರೆ ಉಪಾಯ ಸಿಗೋದು ಕಷ್ಟವಾಗೋದು. ಆದ್ರಿಂದ ಧೈರ್ಯ ಮಾಡಿದೆ. ಮಾಡೋದು ಒಳ್ಳೆ ಕೆಲಸ. ಆಗ್ಹೋಗ್ಲಿ. ಆಮೇಲೆ ದೇವ್ರಿದಾನೆ ಅಂತ ಅವನ್ಮೇಲೆ ಭಾರ ಹಾಕಿ, ಇಗೋ ಇವ್ನ ನಾರಾಯಣ ಪ್ರಸಾದ್ ಅಂತ….ಇವನ್ನ request ಮಾಡ್ಕೊಂಡೆ…. ಲಗ್ನದ timeಗೆ ಬೀಗನಾಗಿರಪ್ಪಾ ಅಂತ….ಒಪ್ಕೊಂಡ…. ಲೋ, ನಾಣಿ, (ಕೀ.ಕೃ.ನ ತೋರುತ್ತಾ) ಅವರ ಕ್ಷಮಾಪಣೆ ಕೇಳ್ಕೊಳ್ಳೋ. (ನಾಣಿ ಏಳುವನು)

ಕೀ. ಕೃ :— ಬೇಡಾ ಬೇಡಾ ಬೇಡಾ! ಆ ಮಹರಾಯನ ಸಹವಾಸ ಜನ್ಮ ಜನ್ಮಕ್ಕೂ ಬೇಡ. ಅವನು ನನ್ನ ಹತ್ರ ಬರ್ಬೇಕಾದ್ದಿಲ್ಲ. ದೂರ್ದಿಂದ್ಲೇ ಕ್ಷಮಿಸ್ತೀನೆ. ಬೇಕಾದ್ರೆ ನಮಸ್ಕಾರಾನೇ ಮಾಡ್ತೀನೆ. ಅಬ್ಬಬ್ಬಬ್ಬಬ್ಬ…… ಸ್ವಲ್ಪ ಗ್ರಹಚಾರ ಹಿಂದ್ಮುಂದಾಗಿ ನೀವ್ಬರೋದು ತಡವಾಗಿದ್ದಿದ್ರೆ ನನ್ನ ಹುಚ್ಚಾಸ್ಪತ್ರೇಗೆ ರವಾನಿಸ್ಬಿಡ್ತಿದ್ನೋ ಅಪ್ಪಾ!

ಸಾಮಾನ್ಯದೋನಲ್ಲ. ರಾಯರೇ, ಈ ಹುಚ್ಚು ಹುಡುಗ್ರ ಅವಾಂತ್ರದಿಂದ ನಾನು ತಮ್ಮನ್ನ ಸಿಕ್ಕಿಸಿಕ್ಕಿದ್ದಾಗೆ ಕೂಗಾಡ್ದೆ....ಜೋಯಿಸ್ರೇ, ತಾವೂ........

ರಾ.ರಾ :— ಅಯ್ಯೋ, ಅದಕ್ಯಾರೇನ್ಮಾಡೋಕಾಗತ್ತೇ ? ನಾವೆಲ್ಲಾ ಅವರ ಕೈಗೆ ಸಿಕ್ಹಾಕ್ಕೊಂಡ್ಬಿಟ್ಟಿದೇವೆ.

ಪು.ಜೋ :— (ಶೀ.ಕೃಗೆ) ತಾವೇನೂ ಯೋಚ್ನೆ ಮಾಡ್ಬೇಡಿ. ನಿಮ್ಮ ತಪ್ಪೂ ಅಲ್ಲ. ನಮ್ಮ ತಪ್ಪೂ ಅಲ್ಲ. ಭೀಮು, ಅವನ್ಹೇಳಿದ್ದಾಗೇ ಒಳ್ಳೆ ನಾಟಕಾನೇ ಆಡಿಸ್ಬಿಟ್ಟ. ನಾವು ದಿಟ್ವಾಗ್ಲೂ ತಮ್ಮಿಬ್ರನ್ನೂ ಒಟ್ಟಿಗ್ನೋಡೋ ವರ್ಗ್ಗೂ............

ಶೀ. ಕೃ :— ಬೀಗತನದ ಉಪಚಾರ ಮಾಡಿಸ್ಕೊಂಡೋನೂ ನಾನೇ; ನಂಗೆ ಹುಚ್ಚು ಹಿಡಿದ್ಬಿಟ್ಟಿತ್ತು ಅಂತ ತಿಳ್ಕೊಂಡಿದ್ರಿ. ಆದ್ರೆ ನನ್ನ ಮನಸ್ಸಿನ ಸ್ಥಿತಿ ಹ್ಯಾಗಿತ್ತು ಅಂತ ನಿಮಗೆ........

ಪು.ಜೋ :— ಅಲ್ವೇ! ಯಾರಿಗ್ತಾನೇ ಕೋಪ ಬರೋಲ್ಲ....ಹೌದೂ, ಭೀಮೂ, ಇವರು ಬಂದೇ ಇರ್ಲಿಲ್ಲ, ಹುಡ್ಗೀಗೆ ಓದ್ಸಿದ ವಂಕಿ, ಡಾಬು ಅವೆಲ್ಲಾ ಎಲ್ಲಿಂದಾ ಬಂತೋ ?

ಶೀ. ಕೃ :— ಹೌದು, ಹೌದು, ತಿಪ್ಪಾಭಟ್ರು ಹೇಳಿದ್ರು. ನಾನು ಬಂದಿದ್ನಂತೆ; ಬಂಗಾರದ ಡಾಬು, ವಂಕಿ, ನಾಗಮುರಿಗೆ ಎಲ್ಲಾ ಓದ್ಸಿದೆನಂತೆ. ಏನೋ, ಹ್ಯಾಗ್ಬಂತೋ ?

ಭೀಮು :— ಆ ಪ್ರಶ್ನೆ ನೀವ್ಕೇಳ್ದೇ ಇರೋದು ಉತ್ತಮ. ಆಕಾಶದಿಂದ ಬಿತ್ತು ಅಂತಿಟ್ಕೊಳ್ಳಿ.

ಚಂದ್ರು :— ಇಲ್ಲಪ್ಪಾ.

ಭೀಮು :— ಚಂದ್ರೂ !

ಚಂದ್ರು :— ಸುಮ್ನಿರು, ಭೀಮು. (ತಂದೆಗೆ) ಅಷ್ಟೂ ಅವಂದೆ. ಅವನ ಸ್ವಂತ ದುಡ್ನಿಂದ ನನಗೋಸ್ಕರ....

ಕೀ.ಕೃ: ನಿನ್ನ ಸ್ವಂತ ದುಡ್ನಿಂದ ?

ಭೀಮು: "ನನ್ನ ಸ್ವಂತ ದುಡ್ಡು" ಅಂದ್ರೆ ಅದರ ಅರ್ಥ ಹೀಗೆ. ನನ್ನ ತಂದೇ ಆಸ್ತೀನ inherit ಮಾಡಿ ಉಪಯೋಗಿಸೋಕೆ ನಾನೊಬ್ನೇ ಹಕ್ಕುದಾರ್ನೇ ಹೊರ್ತು, ಅನುಭವಿಸೋಕೆ ನಾನೊಬ್ನೇ ಹಕ್ಕುದಾರ ಆಗ್ಲಾರೆ. ನಿಮಗೀ argument ಒಪ್ದೇಹೋದ್ರೆ ನನ್ನ ನಾದಿನೀಗೆ ಮದುವೆ presentಉ ಅಂತಿಟ್ಕೊಳ್ಳಿ.

ಪು.ಜೋ: ನೋಡಿದ್ರಾ, ನೋಡಿದ್ರಾ, ಹೇಗಿದಾನೆ. ತಂದೇ ಹಾಗೇ ತಂದೇ ಹಾಗೇ....

ಕೀ ಕೃ: ಅದೇನ್ ನೀನಂದಿದ್ದು ? ನಾದಿನೀ ಅಂದ್ಹಾಗಿತ್ತು....?

ಪು. ಜೋ: ಹೂ, ನಿಮ್ಗ ಇವನ ಹೆಂಡ್ತಿ ತಂಗಿ ಗಂಡತಾನೇ ?

ಕೀ. ಕೃ: ಹೆಂಡ್ತಿ ತಂಗಿ ಗಂಡ ?

ಪು. ಜೋ: ಹೂಂದ್ರೇ. (ರಾ. ರಾ ನ ತೋರಿ) ಇವರ ಮೊದಲ್ನೇ ಅಳಿಯ.

ಕೀ ಕೃ: ಎಲ್ಲಿ, ಎಲ್ಲಿ. (ಲಗ್ನಪತ್ರಿಕೆ ನೋಡಿ) ಅಯ್ಯಯ್ಯೋ; ಇಲ್ಲೇ ಇದ್ಯೆಲ್ಲಾ....ನಾನೋದ್ಲೇ ಬೇಡ್ವೇ ಸರಿಯಾಗಿ....ಸರಿ. ಸರಿ....ಈಗೆಲ್ಲಾ ಅರ್ಥವಾಯ್ತು .... ಎಲ್ಲಾ ಸರಿಹೋಯ್ತು .... ಏನ್ ಅಸಾಧ್ಯವೋ, ಏನ್ ಅಸಾಧ್ಯವೋ !....ಹಾಗಾದ್ರೆ ನಿನ್ಹೆಂಡ್ತಿ ಎಲ್ಲಿ ? ಕಾಣ್ಲೇ ಇಲ್ವಲ್ಲ ?

ಭೀಮು: ನನ್ಹೆಂಡ್ತೀನೇ ? ಅವಳ್ಹಾಗೆಲ್ಲಾ ಸುಮ್ನುಮ್ನೆ ಎದುರಿಗೆ ಬಂದು ನಿಂತ್ಬಿಡೋಳಲ್ಲ. ಅವಳ ವಿಷಯ....

ಪು. ಜೋ: ಲೋ, ಸಾಕೋ, ಸಾಕೋ....

ಕೀ. ಕೃ: (ಭೀಮೂಗೆ) ಯಾಕೋ ?

ಭೀಮು: ಯಾಕಿಲ್ಲ, ಕೃಷ್ಣಪ್ನೋರೇ, ಇವ್ರೆಲ್ಲಾ, ಪಾಪ, ಅವಳ್ನ, ಒಂದು ತರಹಾ....(ಸರೋಜಳ ರೂಂ ಬಾಗಿಲು ತೆಗೆಯುವುದು. ಅವಳು ಬಾಗಿಲಲ್ಲಿ ಕಾಣಿಸಿಕೊಳ್ಳುವಳು) ಓ ! ಅಗೋ ! (ಸರೋಜ ನೇರವಾಗಿ ಬೀದಿ ಬಾಗಿಲುಕಡೆಗೆ ಹೊರಡಲು ಅವಳ ಬಳಿ ಸೇರಿ) ಸರೋಜ, ನಾವಷ್ಟು ಜನ ಅಲ್ಲಿ ಕೂತಿದೇವೆ, courtsey

greeting ಊ ಇಲ್ದೆ ನಿನ್ಹಾಡಿಗೆ ನೀನು ಹೊರಟ್ಬಿಟ್ಟಿದ್ದೀಯಲ್ಲಾ ?........ ಓ....I am sorry .... ಅರ್ಥವಾಯ್ತು ....(ಇತರರಿಗೆ) ನೋಡಿ, ನಾವಿಷ್ಟು ಜನ ಗಂಡಸ್ರು ಕೂತಿರ್ಬೇಕಾದ್ರೆ, ಅವಳ್ಹ್ಯಾಗೆ ಆಕಡೆ ನೋಡ್ತಾಳು ? ಇವಳು ಗಾಂಧಾರಿ ತರಹ. ನೋಡಿದ್ರೆ ಗಂಡನ್ನೊಬ್ಬನ್ನೇ ನೋಡ್ಬೇಕು. ಇಲ್ದಿದ್ರೆ ನೋಡೋದೇ ಬೇಡ....ಬಾ, ಸರೋಜ, ಪರವಾಗಿಲ್ಲ, ನಾನೂ ಇರೋವಾಗ ಏನೂ ಪರವಾಗಿಲ್ಲ....ಕೃಷ್ಣಪ್ನೋರೇ, "ನಿನ್ಹೆಂಡ್ತಿ ಎಲ್ಲೋ, ಕಾಣ್ಲೇ ಇಲ್ಲ" ಅಂದ್ರಲ್ಲ, ಇಗೋ ನೋಡಿ.

ಕೀ. ಕೃ : ಊಹೂ .... ಊಹೂ .... (ತಲೆಯಿಂದ ಕಾಲುವರೆಗೂ ನೋಡಿ) ಚೆನ್ನಾಗಿದಾಳೆ, ಚೆನ್ನಾಗಿದಾಳೆ.

ಸರೋಜ : ಊಹೂ....? ನೀವೇನ್ ಓತಿಕೇತದ್ಹಾಗೆ ತಲೆ ಅಲ್ಲಾಡಿಸ್ತಾ ನನ್ನ ರೂಪಾನ ಮೆಚ್ಬೇಕಾಗಿಲ್ಲ.

ಕೀ. ಕೃ : (ಏಳುತ್ತಾ) ಆ ? ಏನೂ ?

ಸೀತ : ಸರೋಜ !

ರಾ. ರಾ : ಲೇ !

ಭೀಮು : ಹಾ, ಹಾ, ದಯವಿಟ್ಟು ಕೂಡಿ. ಕ್ಷಮಿಸಿ. ಇವಳ್ಗೆ ಒಂದೊಂದ್ಸರ್ತಿ ಮಾತುಗಳು ಹೆಚ್ಚುಕಡಿಮೆ ಹೊರಟ್ಬಿಟ್ರೂನೂ, ಹೃದಯ ಇದ್ಯೆಲ್ಲಾ, ತುಂಬಾ ಮೃದು. ಮಕ್ಕಳ ಹೃದಯದ್ಹಾಗೆ. ಅವಳ್ಗೆ ತಾವು ದೊಡ್ಡವ್ರು, ತಮಗೆ ನಮಸ್ಕಾರ ಮಾಡ್ಬೇಕು ಅಂತ ಗೊತ್ತಿಲ್ದೆ ಇಲ್ಲ. B. A. pass ಮಾಡಿಲ್ವೇ ? College ನಲ್ಲಿ ಅಷ್ಟು etiquitte ಊ ಹೇಳ್ಕೊಟ್ಟಿರೋಲ್ವೇ ?—ಆದ್ರೆ, ಪಾಪ, ಏನ್ಮಾಡ್ತ್ಯಾಳು! ಮಧ್ವೆ ಗಲಾಟೇಲಿ ಈ ನಮ್ಮ ಜೋಯಿಸ್ರ ಅವಾಂತ್ರದಿಂದ ಎದ್ದೂ ಕೂತೂ, ಕೂತೂ ಎದ್ದೂ ಸಾಕಾಗ್ಹೋಗಿ ಮೈ ಕೈ ಎಲ್ಲಾ ನೋವಂತೆ. A sort of influenza....

ಸರೋಜ : ಸಾಕ್ಸುಮ್ನಿರಿ, influenza ನೂ ಇಲ್ಲ, rheumatism ಊ ಇಲ್ಲ. ನಿಮ್ಮ ಸುಳ್ಳು defence ಗ್ಳು ನನ್ಗೇನೂ ಬೇಕಿಲ್ಲ.

ಪು. ಜೋ : (ಭೀಮೂಗೆ) ಯಾಕೋ, ಇಷ್ಟು ಜನದೆದುರ್ಗೆ, ನೀನ್ ಸುಳ್ಹೇಳೋದು ? ಹೋಗ್ಲಿ, ಸುಮ್ನಿರಮ್ಮ ಸರೋಜ, ಅವನಿಗೆ ಬುದ್ಧಿ ಇಲ್ಲ.

ಸರೋಜ: ನಿಮಗಿದೆಯಲ್ಲಾ ತಲೇ ತುಂಬಾ. ನಿಮ್ಮ ವಕೀಲಿ ನನ್ಗೇನೂ ಬೇಕಿಲ್ಲ. (ಭೀಮೂಗೆ) ನನ್ನ ವಕೀಲಿ ಬೇಕ್ಕಿವ್ಗೆ! "ಬುದ್ಧಿ ಇಲ್ಲ" ಅಂತ ಅನ್ನಿಸ್ಕೊಂಡು defend ಮಾಡ್ಕೊಳ್ಳಾರ್ದ್ದೆ ನಿಂತು....shame!

ಭೀಮು: What! ಇಗೋ!. (ಕೋಟು ಬಿಚ್ಚಿ ಸರೋಜಳ ತೋಳ್ಮೇಲಿಡುತ್ತಾ) ನಿನ್ನ ಕಣ್ಣಾಗ್ಳು ಖೂನೀನ್ನೋಡಿ ತಡೀಲಾರವು ಅನ್ನೋ ಭಯದಿಂದ ಸುಮ್ನಿದ್ದೆ ...(ತನ್ನ ತೋಳಿನ sleeves ಮಡಿಚಿಟ್ಟುಕೊಳ್ಳುತ್ತ ಜೋಯಿಸರಕಡೆ ಬರುತ್ತಾ) ಜೋಯಿಸ್ರೇ, ಪ್ರಾರ್ಥನೆ ಮಾಡ್ಕೊಳ್ಳಿ....ಪರಮೇಶ್ವರನ್ನ....

ರಾ. ರಾ: ಅಯ್ಯೋ!

ಪು. ಜೋ: ಲೋ! ಲೋ!....

ಕೀ. ಕೃ: ಭೀಮು, ಭೀಮು, ಏನೋ ಇದು?

ಭೀಮು: ನನ್ನ ನಾನು defend ಮಾಡ್ಕೊಳ್ಳಾರ್ದ್ನೇ? ಈಗಿವರ್ನ ಯಾರು defend ಮಾಡ್ತೀರಿ ನೋಡ್ತೇನೆ. (ಕುತ್ತಿಗೆಗೆ ಕೈಹಾಕುವಲ್ಲಿ ಇತರರು ಸುಮ್ಮನೆ ಗಾಬರಿ ತೋರಿ ದೂರವೇ ಇರುವರು. ಸರೋಜ ಓಡಿಬಂದು ಭೀಮೂನ ಎಳೆದು ಜೋಯಿಸರ ಮುಂದೆ ನಿಂತು)

ಸರೋಜ: ಇದೇನನ್ಯಾಯ?

ಭೀಮು: ಓಹೋ, ನೀನು defend ಮಾಡ್ತಿ ಏನು? That's all right. ಹಾಗಾದ್ರೆ ಅವರ ಜೀವಕ್ಕೆ ಅಪಾಯವಿಲ್ಲ. (ಸರೋಜಳ ತೋಳ್ಮೇಲಿಂದ ಕೋಟು ತೆಗೆದು ಹಾಕಿಕೊಳ್ಳುತ್ತಾ) ಜೋಯಿಸ್ರೇ, ಬುದ್ಧಿವಂತರು ನೀವು ಬದುಕ್ಕೊಟ್ರಿ.

ಸರೋಜ: ಸಧ್ಯಕ್ಕೆ....ನಾನಿನ್ನು ಹೊರಡ್ತೇನೆ........

ಸೀತ: ಎಲ್ಲೋರಟ್ಯೇ ಇಷ್ಟೊತ್ತಿನಲ್ಲಿ, ಒಬ್ಳೇನೇ?

ಸರೋಜ: ....ಸಿನೀಮಾಕ್ಕೆ.... States theatre ಉ....ತಿಲೋತ್ತಮ picture ಉ....ಹೋಗೋದು ನಾನೊಬ್ಬೇನಲ್ಲ, ನನ್ನ ಸ್ನೇಹಿತರ ಜೊತೇಗೆ....ಸಾಕೋ, ಇನ್ನೂ ಬೇಕೋ details ಉ?

ಭೀಮು: ಸಾಕು ಸಾಕು .... ಆದ್ರೇ ಏನ್ clever ಉ ನೀನು, ಸರೋಜ! (ಇತರರಿಗೆ) ಇವಳು ಸ್ನೇಹಿತರ ಜೊತೇಗೆ ಅಂತ್ಹೇಳಿದ್ಲಲ್ಲ,

ಸ್ನೇಹಿತ್ರು ಅಂದ್ರೆ ನಾನೇ! ಗಂಡನ ಜೊತೇಲಿ ಅಂತ್ಹೇಳೋಕೆ ನಾಚ್ಕೆ ಪಟ್ಕೊಂಡು indirect ಆಗಿ friends ಜೊತೇಲಿ ಅಂದ್ಳು ...

ಸರೋಜ: ಸುಳ್ಳು!

ಭೀಮು: ನಿನ್ನ sweet mouth ನಲ್ಲಿ ಸುಳ್ಳು ನುಡ್ದೀತೇ ಸರೋಜ! (ಇತರರಿಗೆ) ಅವಳ್ಹೇಳಿದ್ದು ಸುಳ್ಳು, ನಾವು ಬೆಳಿಗ್ಗೆ coffee ತೊಗೋ ಬೇಕಾದ್ರೇ settle ಮಾಡ್ಬಿಟ್ಟಿದ್ವು....

ಸರೋಜ: Never—Never—Never—ನಾ ಹೇಳ್ಳಿಲ್ಲ!

ಭೀಮು: Splendid! Splendid! ಏನ್ ಅಭಿನಯ! ಏನ್ acting ಉ. ನೀನ್ ನನ್ನ ಜತೇಲಿ stage ಒಂದ್ಹತ್ಬಿಟ್ರೆ....ಇರ್ಲಿ ಅದು ನಿಧಾನ್ವಾಗಿ ಯೋಚ್ನೆ ಮಾಡೋಣ. ಈಗ pictureಗೆ late ಆಗ್ಹೋಗತ್ತೆ ನಡಿ. (ಇತರರಿಗೆ) ಮದ್ವೆ ಆಗಿನ್ನೂ ಮೂರುದಿನ ಕೂಡ ಇಲ್ಲ. ಆಗ್ಲೇ ಒಟ್ಟಿಗೆ cinemaಗ್ಹೊರಟ್ಬಿಟ್ರೇ ಅಂತ ನೀವೆಲ್ಲಂದ್ಕೋತೀರೋ ಅಂತ ಹೆದರ್ತಾಳೆ, ಸಾಧ್ವಿ.

ಸರೋಜ: ಸಾಧ್ವೀನೂ ಅಲ್ಲ, ವಿಶ್ವಕರ್ನಾಟಕಾನೂ ಅಲ್ಲ, ತಾಯಿ ನಾಡೂನೂ ಅಲ್ಲ. ನಿಮ್ಮ ಈ tricksಗಳಿಗೆಲ್ಲಾ ಬಲಿ ಬೀಳೋಲ್ಲ. ನಾ ಬರೋಲ್ಲ, ನಾ ಬರೋಲ್ಲ, ನಾ ಬರೋಲ್ಲ. (ಕುರ್ಚಿಯಲ್ಲಿ ಕೂತುಬಿಡುವಳು)

ಭೀಮು: Marvellous! ಭಾನುಮತಿ ಯಾಕೆ ನಿನ್ಮುಂದೆ!

ಸೀತ: ಯಾಕೆ ಹೋಗ್ಬಾರ್ದೇನೇ ಸರೋಜ?

ಸರೋಜ: ನಾನ್ಹೋಗೋಲ್ಲ, ನಾನ್ಹೋಗೋಲ್ಲ .... ಮನೇಲೇ ಈ ಲಕ್ಷಣ....ಇನ್ನು ಬೀದೀಲಿ ಈ ಕಾಡುಮನುಷ್ಯರ ಜೊತೇಲಿ....

ರಾ. ರಾ: ಲೇ!

ಸೀತ: ಸರೋಜ!

ಕೀ. ಕೃ: ಏನೋ ಇದು?

ಪು. ಜೋ: ಭೀಮೂ?

ಭೀಮು: ಯಾಕೆ ಯಾಕೆ ಯಾಕಿಷ್ಟು ಗಾಬರಿ? ನಿಮಗೇನೋ ಆಶ್ಚರ್ಯವಾಗಬಹುದು. ಆದ್ರೆ ನಮ್ಮ ಪ್ರೀತಿ ಒಂದು ವಿಚಿತ್ರ ರೀತಿ, ಅವಳು ನನ್ನ ಕಾಡುವುನುಷ್ಯ ಅಂತಾಳೆ; ನಾನವಳ್ನ ಮುದ್ದಾಗಿ ಕಾಡ್ಬೈಕ್ಸು ಅಂತೇನೇ!

ಸರೋಜ: (ಅಳುತ್ತಾ) ಏನೂ?

ಭೀಮು: ಏನಿಲ್ಲ, ಸರೋಜ, ನೀಕೂತ್ಕೋ .... ತಿಳ್ಕೊಳ್ಳಿ ಪಾಪ ಅವ್ರೂನೂ ಗಂಡ ಹೆಂಡ್ತಿ ಅಂದ್ರೆ ಹೇಗಿರ್ಬೇಕು ಅನ್ನೋದನ್ನ .... ನಮ್ಮ understandingಉ ಪ್ರೀತೀನ್ನೋಡಿ copy ಮಾಡ್ಕೊಳ್ಳಿ.... (ಪ್ರೇಕ್ಷಕರಿಗೆ) ನೋಡಿ, ನಾವಿಬ್ರೂ ಒಂದು ತರಹಾ ಒರಟು ಸ್ವಭಾವದೋರು. ನಯ, nicety ನಮಗೆ ತುಂಬಾ ದೂರ. ಈಗಿನ್ಕಾಲದೋರ್ಗಾಗೆ dear ಉ, dearestಉ, darling ಉ, honey, ಜೇನ್ತುಪ್ಪ, sweetmeatsಉ, ಮಿಠಾಯಿ, ಅಂತ್ಲೂ ಕೂಗೋಲ್ಲ; ಅಥವಾ ನಿಮ್ಮ ಕಾಲದವರ್ಗಾಗೆ, "ಎನ್ನ ರಸಿ, ಚಿನ್ನರಸಿ, ಪಟ್ಟದರಸಿ'' ಅಂತ್ಲೂ ಕೂಗೋಲ್ಲ. (ಸರೋಜಳಿಗೆ) ನಮ್ದೆಲ್ಲಾ via media policy ಅಲ್ವೇ, ಸರೋಜ ...?come on get up.... ಹೊತ್ತಾಗ್ಹೋಗುತ್ತೆ (ರಟ್ಟೆ ಹಿಡಿದೆತ್ತಲು)

ಸರೋಜ: ಅಯ್ಯೋವ್ ಹೋಯ್ತೂಊ!

ಭೀಮು: ನೋಯ್ತೇನೂ? I am Sorry....ನಡಿ....

ಸರೋಜ: ನಾ ಬರೋಲ್ಲ.

ಭೀಮು: ಬೇಡ ಅಂತೀಯೋನು? ಬೇಡ ಬಿಡು. ನಿನ್ನ ಕಣ್ಣಿಗೆ ಯಾವುದು ನೋಡೋಕೆ ಇಷ್ಟವಿಲ್ವೋ, ಆ picture ನೋಡೂಂತ ನಿನಗೆ ಬಲವಂತಮಾಡೋದೇ ಇಲ್ಲ. ಏನೋ last day ನಲ್ಲ ಬೆಂಗ್ಳೂರಲ್ಲಿ ರೋದು, ರಾತ್ರಿ ಊರಿಗೆ ಹೊರಟ್ಬಿಡ್ಬೇಕಲ್ಲ, ನೋಡ್ಕೊಂಡ್ಬಂದ್ಬಿಡೋಣ ಅಂತ ಹೇಳ್ದೆ.

ಸರೋಜ: last day ?.... ರಾತ್ರಿ....?

ಭೀಮು: ಹೂ, ಸಾಮಾನೆಲ್ಲಾ pack ಮಾಡ್ಬಿಟ್ಟಿದ್ದಿ ತಾನೇ ?

ಸರೋಜ: ಸಾಮಾನು? ಯಾವ ಸಾಮಾನು ?

ಭೀಮು: ನಿಂದು, ನಂದು. ಇದೇನ್, ಸರೋಜ, ಹೀಗ್ಹೇಳ್ತಿ ? "ನಂಗೀ ಊರಲ್ಲಿರೋಕೆ ಇಷ್ಟವಿಲ್ಲ, ರಾತ್ರೀನೇ ಹೊರಟ್ಬಿಡೋಣ" ಅಂದಿ....

ಸರೋಜ : ನಾನನ್ನಿಲ್ಲ ...ಅಮ್ಮಾ !

ಪು. ಜೋ : }
ಕೀ. ಕೃ : } ಭೀಮೂ ?

ಭೀಮು : ನಂಬಿಬಿಡ್ತೀರೋ ನೀವು ಅವಳ್ಮಾತ್ನ ? ಅವಳ್ಹಿಂಗ್ಸಲ್ವೇ? ಅವಳಿಗೆ ನಾಚಿಕೆ ಅನ್ನೋದಿಲ್ವೇ ? ನನ್ನ ಜೊತೇಲಿ ಹೊರಟ್ಹೋಗ್ತೇನೆ ಅಂತ ನಿಮ್ಮ್ಹದೆ ಹೇಳ್ತಾಳ್ಯೇ? "ನಾ ಬರೋಲ್ಲ ಅಂತೀನಿ, ನೀವು ಬಲವಂತ ಮಾಡಿ ಕರ್ಕೊಂಡ್ಹೋಗಿ'' ಅಂತ ನನಗ್ಹೇಳಿದಾಳೆ.

ಸರೋಜ: ಇಲ್ಲಮ್ಮಾ, ನಾನ್ಹೇಳ್ಳಿಲ್ಲ....

ಕೀ. ಕೃ : ಅಲ್ಹೋ, ಅವಳ್ನ, ಹೀಗೇ ಕರ್ಕೊಂಡ್ಹೊರ್ಟೋಗ್ತೀಯಾ?

ಭೀಮು: ಛೆ ಛೆ, ಹೀಗೇ ಅಲ್ಲ. ಇಲ್ಲಿಂದ station ತನಕ ಮಾವ್ನೋರ car ನಲ್ಲಿ ; ಅಲ್ಲಿಂದ ನಮ್ಮೂರ್‌ತನಕ ರೈಲ್ನಲ್ಲಿ; ಅಲ್ಲಿಂದ ನಮ್ಮನೇತನಕ.... ನೋಡೋಣ....

ಕೀ. ಕೃ: ಸಾಕ್ನಿಲ್ಸೋ, ಸಾಕ್ನಿಲ್ಸೋ, ನಾ ಕೇಳೋದೊಂದು, ನೀ ಹೇಳೋದೊಂದು.

ಭೀಮು, ನೀವ್ಹೇಳಿದ್ದು ಅರ್ಥವಾಯ್ತು, ಕೃಷ್ಣಪ್ನೋರೇ ; ಆದ್ರೇ ನ್ಮಾಡೋದೂ, ನಾವಿಲ್ಲಿ ನಿಲ್ಲೋ ಹಾಗಿಲ್ಲ. ನಮ್ಕಡೆ, ನಾನು ಊರುಬಿಟ್ಟು ಬಹಳ ದಿವಸಗ್ಳಾಗ್ಹೋಯ್ತು, ನಾನ್ಹೋಗ್ಲೇಬೇಕು. ಇನ್ನು, ಇವಳ್ನ, ಇಲ್ಲಿ ನೀವೆಲ್ರೂ, ನಾನ್ಕಂಡಾಗ್ನಿಂದ, ಅವಳ ಪ್ರತಿ ಒಂದು ಇಷ್ಟಕ್ಕೂ ಅಡ್ಡಿ ಬಂದು ತೊಂದ್ರೆ ಕೊಡ್ತಿರೋ ಹಾಗೆ ಕಂಡ್ಬರತ್ತೆ. ಆದ್ರಿಂದ ಈಗ ನನ್ಹೆಂಡ್ತಿ ಆದ್ಮೇಲೂ ನಿಮ್ಮ ಮಧ್ಯೆ ನಿಂತು ಕಷ್ಟಪಡೋದನ್ನ ನಾನು ಒಪ್ಲಾರೆ. ನಮ್ಮ ರಾಜ್ಯಕ್ಕೆ ಬಂದು ರಾಣಿ ಹಾಗೆ ಸ್ವೇಚ್ಛೆಯಾಗಿ ಕಾರ್ಬಾರ್ಮಾಡ್ಕೊಂಡಿರ್ತಾಳೆ.

ಪು. ಜೋ: ಮಾಡ್ತಿ ಕಾಣೋ .... ಆದ್ರೆ ಹೊರಡೋಕೆ ದಿನ ಗಿನ ಚೆನ್ನಾಗಿರೋದ್ನೋಡಿ.

ಭೀಮು : ಮನ ಮುಖ್ಯ, ಜೋಯಿಸ್ರೇ, ದಿನ ಏನ್ಮಾಡೀತು ?

ರಾ. ರಾ : ಅದ್ಸರಿ....ಆದ್ರೆ....ಇನ್ನೊಂದು ವಾರವಾದ್ರೂ ಇದ್ದು....

ಭೀಮು : ಸಾಧ್ಯವಿಲ್ಲ.

ಚಂದ್ರು : ಏನೋ ನಿಂಗೆ ಕೊಳ್ಳ್ಕೊಂಡ್ಹೋಗೋದಷ್ಟಲ್ಲಿ?....ಇನ್ನೊಂದು ಎರಡು ದಿವಸವಾದ್ರೂ....

ಭೀಮು : ಇರೋಲ್ಲ.

ಸೀತ : ಏನೋ, ಪಾಪ, ಎಷ್ಟಾದ್ರೂ, ಅವಳ್ಗಿನ್ನೂ ಹೊಸದು....

ಭೀಮು : **ಇ—ಲ್ಲಾ !** ಸರೋಜ, ನೋಡಿದ್ಯಾ, ಇವ್ರೆಲ್ಲಾ ಒಟ್ಟಿಗೆ ಸೇರ್ಕೊಂಡು ನಮ್ಮನ್ನ round up ಮಾಡಿ corner ಮಾಡ್ಬೇಕು ಅಂತ ಪಿತೂರಿ ಮಾಡ್ಕೊಂಡಿರೋಹಾಗಿದೆ. ನಾವು ಹೊರಡೋಕೆ ತಡೆಹಾಕೋಕೆ ಪ್ರಯತ್ನಪಡ್ತಿದಾರೆ.

ಸರೋಜ : ಇಲ್ಲಮ್ಮಾ, ನಾನು....ಖಂಡಿತ....ಅವರ ಜೊತೇಲಿ....

ಭೀಮು : "ಹೋಗ್ತೇನೆ" ಅಂತ ಅವರ್ಕ್ಕಂದೆ ಹೇಳ್ಕೊಂಡೇನ್ ಪ್ರಯೋಜ್ನ ? ನಾನಿದೇನಿಲ್ಲಿ, ನಿನ್ನ ಗಂಡ, ನಿನ್ನ defend ಮಾಡೋಕೆ, ನಿನ್ನ ಇಷ್ಟಾರ್ಥಾನ ನಡೆಸ್ಕೊಡೋಕೆ. (ಇತರರಿಗೆ) ಈಗ ಇವಳು, ಈ ಸರೋಜ, ನನ್ಹೆಂಡ್ತಿ, ನನ್ನ ಪಂಚಪ್ರಾಣಗ್ಳು, ನನ್ನ ಪಂಚ ಭೂತಗ್ಳು, ನನ್ನ ಅರಿ ಷಡ್ವರ್ಗಗಳು, ನನ್ನ earthಉ, ನನ್ನ heavenಉ, ಸೂರ್ಯ, ಚಂದ್ರ, ೬೦ ನಕ್ಷತ್ರಗಳು, ನವಗ್ರಹಗಳು, ನಾಲಕ್ಕು ದಿಕ್ಕುಗ್ಳು, ಹದಿನಾಲಕ್ಕು ಲೋಕಗ್ಳು, ಒಟ್ನಲ್ಲಿ ನನ್ನ ಸಕಲ ಸಂಪತ್ತೂ ವಿಪತ್ತೂ ಎಲ್ಲಾ ಇವ್ಳೇ ! ಇಂದಿನಿಂದ ಮುಂದೆ ಎಂದೆಂದಿಗೂ ಲಕ್ಷ್ಮೀನಾರಾಯಣರ್ಹಾಗೆ, ಪಾರ್ವತಿ ಪರಮೇಶ್ವರರ್ಹಾಗೆ, ನಾವು ನಾವು ಒಟ್ಟಿಗೇ ಇದ್ದೇವು. ಧೈರ್ಯವಿದ್ದೋರು ಬೇರೆ ಮಾಡೋಕೆ ಪ್ರಯತ್ನಿಸಲಿ. ಆದರ ಫಲ ಅನುಭವಿಸಲಿ. ಬಾ, ಸರೋಜ, ನಾನಿದೇನೆ, ಬಾ....(ಕರೆದೊಯ್ಯುವನು. ಎಲ್ಲರೂ ಮೂಕರಾಗಿರಲು)

— ತೆರೆ —

ಅಂಕ ೩

## ದೃಶ್ಯ ೧.

(ಭೀಮನ ಊರಿನ ಒಂದು ರಸ್ತೆ. ರಾತ್ರಿ ಸಮೀಪಿಸುತ್ತಿದೆ. ಹೈದರ್, ಸಿದ್ದ ಪ್ರವೇಶಿಸುವರು)

ಹೈದರ್: ಹರೇ, ಶ್ಧೀದಾ ಜಲ್ದಿ ಜಲ್ದಿ ಭಾರೋ........ಸಾಮಿ ಆಗ ಯಾತೋ ನಿಂದು ಬುಲ್ಡೀ ಹಾರಿಸ್ಬಿಡ್ತಾದೇ ದೇಖೋ.

ಸಿದ್ದ: ಬತ್ತಿದೀನಲ್ಲಪ್ಪೋ, ಬತ್ತಿದೀನಲ್ಲಪ್ಪೋ, ರೇಲ್ ಬರೋ ಟೇಮ್ ಆಗೋತಾ ಆಕ್ಲೀನೇ?

ಹೈದರ್: ಅರೇ ಶ್ಧೀಧಾ, ನಿನ್ದು ರ್‍ಧುಮಾಲ್ ಹಾಮೇಲೇ ಸುತ್ಕೋ.... ವಕತ್ ಹೋಗಯಾನೋ, ಜಲ್ದೀ ಭಾ....ಹೇಲ್ ಘಂಟೀಗೇ ಬಂದ್ಬಿಡ್ತಾರೇಪ್ಪಾ ರೇಲು....

ಸಿದ್ದ: ಅರೆರಿರೆರೆರೆ....ಅಂಗೇನಪ್ಪಾ....ಹಂಗಾರಿಂಗಾಸಿ ಒಗ್ಬಿಡಾನಿ ನಡಿ ಕಾಲ್ದಾರ್‍ಯಾಗೆ....ಅತ್ರ ಆಗ್ತೈತೆ........ಐದ್ರಪಾ....ಯಜಮಾನ್ರು ಟೇಸನ್ಗೆ ಮೋಟಾರ್ ತರ್‌ಬ್ಯಾಡ್ದು ಅಂತ ಯಾಕೇಳಿದ್ದಾರೂ? ಒಸ್ದಾಗಿ ಅವ್ಮೋರೂರಿಗೆ ಬತ್ತಾರೆ. ಕಾರ್ನಾಗ್ಕುಂದರಿಸ್ಕೊಂಡ್ಬರಾಕ್ಕಿಲ್ವಾ ಜುಂ ಅಂತ?

ಹೈದರ್: ಅರೆ ಅವರ್ದು ಮತ್ಲಬ್ ನನ್ಗೆ ನಿನ್ಗೆ ಕ್ಯಾಮಾಲುಂ? ಆವರ್ದು ಕುಷಿ ಅವರ್ಗೆ.... ನಮ್ದು ಕೆಲ್ಸ ನಮ್ಗೆ. ಬಾ....

ಸಿದ್ದ: ಆದ್ದಿಟ ಅನ್ನು....ಆದ್ರೂವೇ, ಪಾಪ, ನಾನ್ ನಮ್ಮ ಸಿದ್ದೀನ ಕರ್ತರ್‍ಬೇಕಾದ್ರೇ ಎಂಗ್ತಂದೆ! ಜೋಡೆತ್ತಿನ ಗ್ಯಾಡ್ಯಾಗೆ ಎಂಗ್ಬಂದೋ ಮೆರವಣ್ಗೆ! ಪಾಪ, ಈಯಮ್ಮ, ಪಟ್ಣಾಸ್ದೋರು ಅವರ್ಗತಿ ಎಂಗೆ? ನಮ್ಕೇ ಕಣ್ಕಾಣಾಕಿಲ್ಲ, ಅವ್ರೆಂಗ್ನಡ್ದಾರು ಈ ರೋಟ್ನಾಗೇ....?

(ನಿಷ್ಕ್ರಮಿಸುವರು.)

## ದೃಶ್ಯ ೨.

(ಬೇರೊಂದು ದಾರಿ. ಭೀಮು ಸರೋಜ ಪ್ರವೇಶಿಸುವರು)

ಸರೋಜ: ಏನಿದೀ ಹಾಳ್ ರೋಡು? ಕತ್ತಲು, ಕಣ್ಣೇ ಕಾಣೋಲ್ಲ.

ಭೀಮು: ಅದು ರೋಡಿನ ತಪ್ಪಲ್ಲ. ನಿಮ್ಮೂರುಗಳ್ಳಲ್ಲಿ ಹೆಜ್ಜೆಗೊಂದು ದೀಪ. ಅದರ ಕೆಳಗೆ ನಡೆದು ಅಭ್ಯಾಸ ಇಲ್ಲಿ adjust ಆಗೋವರ್ಗೂ ಕಷ್ಟ. ಅಲ್ದೆ ಇದು ಮಲ್ನಾಡು. ಹಗಲ್ಹೊತ್ನಲ್ಲೂ ಅಷ್ಟೇನ್ ಬೆಳಕಿರೋಲ್ಲ.

ಸರೋಜ: ಮುಂದಕ್ಕೆ ಕಾಲಿಡೋಕೇ ಸರಿಯಾಗಿ ಕಾಣೋಲ್ಲ.

ಭೀಮು: ಅದಕ್ಕೇ ನಾನ್ ನಿನ್ಮುಂದೇನೇ ಇದೇನಲ್ಲ. ನನ್ಹೆಜ್ಜೆ ಮೇಲ್ನಿನ್ಹೆಜ್ಜೆ ಇಡ್ತಾ ಬಂದ್ಬಿಡು, ಏನೂ ಭಯವಿರೋಲ್ಲ.

ಸರೋಜ: ಹೋಗಲಿ, ಇನ್ನೂ ಎಷ್ಟ್‌ದೂರ ಹೋಗ್ಬೇಕು ಹೀಗೇ ನಿಮ್ಮನೇ ಸೇರೋಕೇ?

ಭೀಮು: ನಮ್ಮನೆ ಸೇರೋಕೇ? ಈಗೇನ್ ಎರಡ್ ಎರಡೂವರೆ ಮೈಲಿ ಬಂದ್ಬಿಟ್ಟಿದೇವೆ. ಇನ್ನೆಲ್ಲಾ ಎರಡ್ ಎರಡೂವರೆ ಮೈಲಿ ಇರಬಹುದಷ್ಟೆ.

ಸರೋಜ: ಆ? ಇನ್ನೂ ಈಗ್ನಾವ್ ಬಂದಷ್ಟ್ದೂರ ನಡೀಬೇಕೇ?.... ನನ್ನಿಂದ ಸಾಧ್ಯವಿಲ್ಲ. I cant, ಹುಶ್....

ಭೀಮು: ಯಾಕೆ, ತುಂಬಾ tire ಆಗ್ಹೋಯ್ತೇನು?

ಸರೋಜ: ಆಗ್ದೆ ಇರತ್ತೇನು?

ಭೀಮು: I am sorry, ನೀನು ಇಷ್ಟು weakಉ ಅಂತ ಗೊತ್ತಿರ್ಲಿಲ್ಲ.

ಸರೋಜ: ನಾನೇನ್ weak ಅಲ್ಲ! ಆದ್ರೆ ಬೆಳಗ್ಗೆ ಆಷ್ಹೊತ್ಗೇ ಊರು ಬಿಟ್ಟೋರು; ಹೊಟ್ಟೆಗಿಲ್ಲ; ಆ dining car ತಿಂಡಿ ದೆವ್ವಗಳ್ಗೇ ಪ್ರೀತಿ; ಹನ್ನೆರಡು ಗಂಟೆ journey; tire ಆಗ್ದೆ ಇದ್ದಿತೇ ಅಂತ ಅಷ್ಟುಗೊತ್ತಾಗ್ಬೇಡ್ವೇನೋ?

ಭೀಮು: ಹೌದು....ಏನ್ಮಾಡೋದೀವಾಗಾ?

ಸರೋಜ: ಎಳೀರಿ ಇನ್ನೂ ರಾಗಾನಾ 'ಏನ್ಮಾಡೋದೀವಾಗಾ' ಅಂತ ಈಗ! Stationಗೆ car ತರಿಸ್ಬೇಕಾಗಿತ್ತು ಅಂತ ಹೊಳೀಲಿಲ್ವೇನೋ ನಿಮ್ಮ ಮೆದುಳ್ಗೆ, ಆಗ. ಹ್ಯಾಗ್ಹೊಳೆದೀತು, ಗಾದೇಗೆ ಸರಿಯಾಗೇ ಇದೆ

ಭೀಮು: ಗಾದೆ ? ಏನದು ಗಾದೆ ?

ಸರೋಜ: ವ್ಯೆ ಬೆಳೀತಾ ಹೋದಷ್ಟೂ ಹುತಿ ಇಳೀತಾ ಹೋಗತ್ತೆ ಅಂತ.

ಭೀಮು: ಓ ಹಾಗಾದ್ರೆ....ನನಗೆ....stationಗೆ car ತರಿಸೋಕಾಗ್ತಾ ಇಲ್ಲಿಲ್ಲ ಅಂತಿಳ್ಕೊಂಡಿದ್ದಿ ಏನು?

ಸರೋಜ: ಆಗ್ತಾ ಇತ್ತು. ಆದ್ರೆ ಆ intelligenceನ inject ಮಾಡೋಕೆ ಯಾರೂ ಇಲ್ಲಿಲ್ಲ, ಅಷ್ಟೆ.

ಭೀಮು: No No No No No. ಹಾಗಲ್ಲ ಸರೋಜ. ನಾನೇನೋ ಆಲೋಚ್ನೆ ಮಾಡ್ದೆ, ಅದೇನೋ ಆಗ್ಹೋಯ್ತು. ಬೇಕು ಅಂದಿದ್ರೆ car ಯಾಕೆ, aeroplaneನೇ hire ಮಾಡ್ಕೊಂಡು ನೇರವಾಗಿ ನಿನ್ನ ಅತಃಪುರ ದಲ್ಲೇ ತಂದಿಳಿಸ್ಬಿಡ್ತಾ ಇದ್ದೆ, ನನ್ನ sweet heart ಇನ ಪಾದಗಳಿಗೆ ಇಷ್ಟು pain ಆಗತ್ತೆ ಅಂತ expect ಮಾಡಿದ್ದಿದ್ರೆ ನಾನೇನ್ ತಿಳ್ಕೊಂಡೆ ಮೊದಲ್ನೆಸಾರಿ ಊರಿಗೆ ಬರ್ತಿರೋದು, ಸರ್ ಅಂತ ಕಾರ್ನಲ್ಲಿ ಓಡ್ಹೋಗಿ ಏನ್ ಮನೆ ಸೇರ್ಕೊಳ್ಳೋದು, ನಿನಗೆ romantic bent of mind ಇರತ್ತೆ, ಈ cool hoursನಲ್ಲಿ calm ಆಗಿ ನಾವ್ನಾನೇ ನಿಧಾನ್ವಾಗಿ ನಡ್ಕೊಂಡ್ಹೋಗ್ತಾ, ನಿನಗೆ ಇಗೋ ಈ beauty spots ನೆಲ್ಲಾ introduce ಮಾಡ್ಕೊಡೋಣ. ಅಂತ ಯೋಚ್ನೆ ಮಾಡ್ದೆ.

ಸರೋಜ: ಓ! ನಿಮ್ಮ ಯೋಚ್ನೆ, ನನಗೆ romantic bent of mind ಇದೆ ಅಂತ expect ಮಾಡಿದ್ರಲ್ಲ, ಅದಕ್ಕಿಂತ, ನಿಮಗೆ lunatic bent of mind ಇದೆ ಅಂತ ನಾನು ಅನುಮಾನ ಪಡ್ತಾ ಇದ್ದೆ. ಈಗ ಅದು confirm ಅಯ್ತು. Beauty spots ಅಂತೆ beauty

spotsಉ ....ದಿಕ್ಕೆಟ್ಟ station ಉ.... ಮಾವಿನತೋಪು........ ಹುಣಸೇ ಮರ....ಸ್ಮಶಾನ....ಇಗೋ ಈ ಸುಡುಗಾಡು ಕೆರೆ!

ಭೀಮು : ಏನು? ಸುಡುಗಾಡು ಕೆರೇನೇ ಇದು?....ಹಹಹಹಹ........ ನಿಮ್ಕಡೆ sampleಗೆ ಇಂಥಾದ್ದೊಂದ್ಕೆರೆ ಸಿಕ್ಕೀತೇ? ನಮ್ಮೂರ್ನಲ್ಲಿ ಎಷ್ಟು ಜನರ lifeನ save ಮಾಡಿದೆ ಗೊತ್ತೇ ಈ ಕೆರೆ?

ಸರೋಜ: ಏನು?

ಭೀಮು: ಎಷ್ಟು ಜನರ ಪ್ರಾಣಗಳ್ನ ಈ ಪ್ರಪಂಚದ ಸಂಕಟಗಳಿಂದ ಪಾರ್ಮಾಡಿ save ಮಾಡಿದೆಗೊತ್ತೇ ಅಂದೆ. ನೋಡು. ಯಾರ ಮನೇಲಿ ಏನ್ ಜಗಳ ಆಗ್ಲಿ, ಏನ್ ಕದನ ಆಗ್ಲಿ, ಎಲ್ಲಾ ಇಲ್ಲಿ ಬಂದು ಫೈಸಲ್ಮಾಡ್ಕೊಂಡ್ಬಿಡ್ತಾರೆ ಇದರ judgementನ ಮೇಲೆ appealಏ ಇಲ್ಲ. ಇಂಥಾ ಕೆರೇನ ಸುಡುಗಾಡು ಕೆರೆ ಅಂತ ಒಂದೇ sweeping remarkನಲ್ಲಿ ಹೊಡೆದ್ಹಾಕ್ಬಿಟ್ಯಲ್ಲಾ. ಅಂದ್ರೆ....ನಿನ್ನ sweet tongue ಸುಳ್ಳು ನುಡಿಯೋದಲ್ಲ....literally, it is a ಸುಡುಗಾಡುಕೆರೆ, watery grave ಉ! ........ಯಾಕೆ ಸರೋಜ?

ಸರೋಜ: (sobbing)You are mad! Stark mad! ಹುಚ್ಚಿರಬಹುದು ಅಂತ ಶಂಕೆ ಪಡ್ತಿದ್ದೆ, ಈಗ ನಿರ್ಧಾರವಾಯ್ತು....

ಭೀಮು: ಸರೋಜ....ಸರೋಜ....ಒಪ್ಕೋತೀನೆ.... I am mad.... but only after you!

ಸರೋಜ: Oh, please....ದಯವಿಟ್ಟು ಮಾತಾಡ್ಬೇಡಿ. (ಅಳಲು)

ಭೀಮು: ಅಳ್ಬೇಡ....No No! I can't see those eyes cry. ತೊಗೋ (ಎಂದು ತನ್ನ ಕರ್ಚೀಫ್ ನೀಡುವನು) ಕಣ್ಣೊರೆಸ್ಕೊ. ಹೆಂಡ್ತಿ ಕಣ್ಣೀರು ಒಂದು ತೊಟ್ಟೂ ನೆಲಕ್ಕೆ ಬೀಳ್ಬಾರ್ದು ಅಂತ್ಹೇಳತ್ತೆ ಶಾಸ್ತ್ರ.

ಸರೋಜ: (ಅಳುತ್ತಾ) ಯಾರಳ್ತಾ ಇರೋದಿಲ್ಲಿ? ನಿಮ್ಮ ಶಾಸ್ತ್ರ ಪುರಾಣ ನಂಗೇನ್‌ಬೇಕಿಲ್ಲ. ನಿಮ್ಮಂಥಾವ್ರ ಕೈಲಿ ಸಿಕ್ಕಿ ಹೀಗೆ suffer ಮಾಡ್ತಿದೇನಲ್ಲ ಅಂತ, I am cursing myself ಅಷ್ಟೆ.

ಭೀಮು: Cursing my better-half ! I can't allow it ಅಲ್ದೆ ನಿನ್ನ suffer ಮಾಡೋಕೆ ಬಿಟ್ಟೇನೇ ನಾನು, ಸರೋಜ? ಹೆಂಡ್ತೀಲಿ ಪ್ರೀತಿ ಇರೋ ಯಾವ ಗಂಡಾನೂ ಅವಳು suffer ಮಾಡಿದ್ರೆ ಸಹಿಸ್ಲಾರ. I shall at once relieve you. ಏನ್ಮಾಡ್ಬೇಕೂಂತಿ ಹೇಳು.

ಸರೋಜ: ಏನೂ ಮಾಡ್ಬೇಡಿ.... ನಿಮ್ಮ ಧರ್ಮಕ್ಕೆ.... ನಿಮ್ಮ ಪಾಡಿಗೆ ನೀವ್ಹೋಗಿ.

ಭೀಮು: ನಾನ್ಹೋಗ್ತೆನೇ ಸರೋಜ, ಹೋಗ್ತೆನೇ. ಬಿಸಿ ಬಿಸಿಯಾಗಿ ಅಡಿಗೆಮಾಡಿಟ್ಟಿರ್ತಾನೆ, ಅಡಿಗ್ಯೋನು. ಊಟಮಾಡ್ಬಿಡ್ತೇನೆ. ಮಾಡಿಮೇಲಿ ವಿಶಾಲವಾದ Bed-room ಉ.... ಜವಾನ ಹಾಸಿಗೆ ಹಾಕಿರ್ತಾನೆ. ಸುಖವಾಗಿ ಮಲಗ್ಕೊಂಡು ನಿದ್ದೆಮಾಡ್ಬಿಡ್ತೇನೆ. ಆದರೆ ನಾನು ಗಂಡ. Selfish brute ಅಲ್ಲ. ಹೆಂಡ್ತೀನ ನಡ್ರಸ್ತೇನಲ್ಲಿ ಬಿಟ್ಟು ಓಡ್ಹೋಗಿ ತಾನ್ಮಟ್ಟಿಗೆ ತನ್ನ ತೃಪ್ತೀನ ಪಟ್ಕೊಂಡ್ಬಿಡೋ ತರಹದ ಗಂಡ ಅಲ್ಲ. ನನಗೆ ನನ್ನ ಸುಖ, ನನ್ನ happiness ಉ ಎಷ್ಟು important ಓ, ನಿನ್ನ ಸುಖ, ನಿನ್ನ happiness ಊ ಅಷ್ಟೇ importantಉ–ಯಾಕೆ, more important ಉ, because you are my better half ಉ, ಉತ್ತಮಾರ್ಧ ! ನೀನೇನ್ಮಾಡ್ಬೇಕೂ ಅಂತಿದ್ದಿ ಹೇಳು.

ಸರೋಜ: ...............ವಾಪಸ್ ನಮ್ಮೂರ್ಗೇ ಹೊರಟ್ಹೋಗ್ತೇನೆ.

ಭೀಮು: Splendid! Brilliant idea! ನಿನಗದೇ ಸಂತೋಷವಾಗೋದಾದ್ರೆ ಹಾಗೇ ಮಾಡು. ನಿನ್ನ ಸುಖಕ್ಕೆ ನಾನು ಸ್ವಲ್ಪವೂ ಅಡ್ಡಿ ಬರೋಲ್ಲ. ಇಷ್ಟರಲ್ಲೇ ತಿಳ್ಕೋ ನಾನ್ನಿನ್ನ ಎಷ್ಟು ಪ್ರೀತಿಸ್ತೇನೆ ಅಂತ....

ಸರೋಜ: ಪ್ರೀತಿ, ಪ್ರೀತಿ, ಪ್ರೀತಿ, ಸಾಕು ನಿಮ್ಮ ಪ್ರೀತಿ. ಪ್ರೀತಿ ಹೆಸರ್ನಲ್ಲಿ ಪ್ರಾಣ ತೆಗೀತಿದೀರಿ.

ಭೀಮು: ತಪ್ಪಾಯ್ತು, ಸರೋಜ; ನಾನು ನಿನ್ನ ಪ್ರೀತಿಸೋಲ್ಲ, ನಿನ್ನ ಪ್ರಾಣವೂ ತೆಗ್ಯೋಲ್ಲ. ಬದುಕು.... ಹೋಗಿ ಬಾ.... Good bye.... and ....God bless you....(ಪಕ್ಕ ತೆರೆಯೊಳಗೆ ಹೋಗಿ ಹಿಂತಿರುಗಿ) ಸರೋಜ, ನಿನ್ಗೆ

ತಿರಿಗಿ ನಾಳೆ ಬೆಳಿಗ್ಯೆ ತನಕ ರೈಲಿಲ್ಲ. Stationಲ್ಲೇ ಮಲಗಿರ್ಬೇಕಾಗತ್ತೆ. ಮಂಜು ಹಿಮ ತುಂಬಾ ಜಾಸ್ತಿ. ತೊಗೊ ಇದನ್ನ (ಕೊರಳಲ್ಲಿರುವ muffler ತೆಗೆದು ನೀಡುವನು. ಸರೋಜ ತೆಗೆದುಕೊಳ್ಳದಿರಲು) ಬೇಡ್ವೇನೂ? ಬೇಡ ಬಿಡು. ನಿನಗೆ ಹಿಮ ಮಂಜು, ನಿಮೋನಿಯಾ ಕೆಮ್ಮು, ಪ್ರೀತಿಯಾದ್ರೆ, have them ! By all means, have them !

ಸರೋಜ : ಓ‌ೕ ೕ ೕ ೕ (ಎಂದು ಸಹಿಸದೆ ಒಡುತ್ತಾ ನಿಷ್ಕ್ರಮಿಸುವಳು)

ಭೀಮು : ( ನಿಟ್ಟುಸಿರಿ shoulders shrug ಮಾಡಿ ) AAALL Right ! good bye ಸರೋಜ........ಎರಡ್ನೇ ಸಾರಿ........(ಪಕ್ಕ ತೆರೆ ಸೇರಿ ಪುನಃ ಹಿಂತಿರುಗಿ) ಸರೋಜಾ, ಒಂದ್ಮಾತು....

ಸರೋಜ : (ನೇಪಥ್ಯದಿಂದ) ಏನೂ ಬೇಕಿಲ್ಲ.

ಭೀಮು : ಬೇಡ್ದಿದ್ರೆ ಕೇಳ್ಬೇಡ. ನಾನು ಬಲವಂತ ಮಾಡೋಲ್ಲ. But ಹೇಳ್ಬೇಕಾದ್ದು duty ನಂದು, ಹೇಳ್ಬಿಡ್ತೇನೆ....ಏನಿಲ್ಲ, ಆ ಸ್ಮಶಾನದ ಪಕ್ಕದಲ್ಲಿರೋ ಹುಣಸೇ ಮರದ್ಮೇಲೆ....ರಾತ್ರಿಹೊತ್ತು....ಪಿಶಾಚಿಗ್ಳು....

ಸರೋಜ : (ಗಾಬರಿಯಿಂದ ಪ್ರವೇಶಿಸಿ) ಆ ?....

ಭೀಮು : ಪಿಶಾಚಿಗ್ಳು, ದೆವ್ವಗ್ಳು, ಕೊಳ್ಳಿದೆವ್ವಗ್ಳು ಎಲ್ಲಾ ಇರತ್ವಂತೆ ....ಆದ್ರೆ ಅದೆಲ್ಲಾ ಸುಳ್ಳು....graduate ನೀನು, ghosts ಇವೆ ಅಂತ believe ಮಾಡ್ತೀಯಾ ?

ಸರೋಜ : ಉಹುಹು....ಮತ್ತೆ....ನನ್ನ....

ಭೀಮು : ಸುಮ್ನೆ ಗಾಬರಿಬೀಳ್ಬೇಡ, ಸರೋಜ, it is, of course silly. But ಊರ್ನೋರ ನಂಬ್ಕೆ ಅದು. ನಾ ಹೇಳಿದೆನಲ್ಲ, ಜಗಳ ಕದನ ಆಡ್ದೋರೆಲ್ಲಾ ಈ ಕೆರೇಲ್ಬಿದ್ದು ಪ್ರಾಣಕಳ್ಕೊಳ್ತಾರೆ ಅಂತ....ಹಾಗೆ ಪ್ರಾಣ ಕಳ್ಕೊಂಡೋರೆಲ್ಲಾ ಅಲ್ಲಿ ಕಾದಿರ್ತಾರಂತೆ, ಹುಣಸೇಮರದ್ಮೇಲೆ, ಹೊಟ್ಟೆಉರಿ ತೀರಿಸ್ಕೊಳ್ಳೋದಿಕ್ಕೆ, ಉಳಿದೋರ್ಮೇಲೆ !

ಸರೋಜ : ಅಯ್ಯಯ್ಯೊ !....

ಭೀಮು: ಗಂಡಸರ ಕಣ್ಣಿಗೆ ಅಷ್ಟ್ ಬೀಳೋಲ್ವಂತೆ ಅವು. ಎಲ್ಲಾ ಅನರ್ಥಗಳಿಗೂ ಹೆಂಗಸರೇ ಕಾರಣ ಅಂತ ಅವಕ್ಕೆ ನಂಬಿಕೆ ಅಂತೆ. Nonsense ಅನ್ನು. Devilsಉ, angelsನ ಸಹಿಸ್ಲಾರವು. ಎಲ್ಲಾ ಎಷ್ಟ್ absurd ಉ ನೋಡು. ಆದ್ರೆ local, legendsಉ.... ಮೊನ್ನೆ ಒಂದು case ಆಯ್ತಂತೆ. ಹೋದ ತಿಂಗಳು. ನಿನ್ಹಾಗೇ, ಪಾಪ, ಯಾರೋ ಒಬ್ಬ ಹೆಂಗಸು, ತೌರ್ಮನೇಗೆ ಹೊರಟ್ಳಂತೆ ಒಬ್ಳೇನೇ. ಆ ಸ್ಮಶಾನದ್ಹತ್ರ ಹೋಗೋ ಹೊತ್ಗೆ ಕಿಲ ಕಿಲ ಕಿಲ ಅಂತ ನಕ್ಕ ಶಬ್ದ ಕೇಳಿಸ್ತಂತೆ. ಅಕ್ಕ ಪಕ್ಕ ನೋಡಿದ್ಳಂತೆ. ಯಾರಿಲ್ಲ. ಧಿಗಿಲಾಯ್ತಂತೆ. ಸ್ವಲ್ಪ ಮುಂದಕ್ಕೆ ಹೋಗೋ ಹೊತ್ಗೆ ಆ ಹುಣಸೇಮರದಿಂದ ಒಂದು ಬೆಂಕಿ ಉಂಡೆ ಕೆಳಕ್ಕೆ ಧೊಪ್ ಅಂತ ಬಿದ್ದಾಗಾಯ್ತಂತೆ....

ಸರೋಜ: ಅಯ್ಯೋ ಬೇಡ....

ಭೀಮು: ಆಮೇಲದಕ್ಕೊಂದಾಕಾರ ಬಂತಂತೆ....

ಸರೋಜ: ಬೇಡಾ....

ಭೀಮು: ಇಷ್ಟು ಧೊಡ್ಡ್ ತಲೆ....

ಸರೋಜ: ಅಯ್ಯೋ !

ಭೀಮು: ಇಷ್ಟಿಷ್ಟೇ ಕೈಕಾಲು....

ಸರೋಜ: ಅಯ್ಯಯ್ಯೋ....

ಭೀಮು: ಹಿಂತಿರಿಗಿ ಓಡ್ಹೋಗೋಣ ಅಂತ ಪ್ರಯತ್ನಪಟ್ಳಂತೆ, ಎದುರಿಗೆ ಇನ್ನೊಂದು ಬರೀ ನಗು ಶಬ್ದ ಜೋರು ಜೋರಾಗಿ ಕೇಳಿಸ್ತಾ ಹತ್ಹತ್ರ ಬಂದ್ಹಾಗಾಯ್ತಂತೆ. ಮೂರ್ಛೆ ಬಿದ್ಬಿಟ್ಳಂತೆ....

ಸರೋಜ: ಬೇಡಾಂ........ಅಯ್ಯೋ....

ಭೀಮು: ಯಾಕೆ ಭಯವಾಯ್ತೇ, ಸರೋಜ? ಹೆದರ್ಬೇಡ ನೀನು. ಈ silly ಕಥೇನೆಲ್ಲಾ ನಂಬಬೇಡ. ಆದ್ರೂ ನಮ್ಮೂರ್ನೋರ firm

beliefಉ ಅದು....ಒಂದ್ವೇಳೆ ನಿಜವಾಗಿದ್ದು ನಿನ್ನೊಬ್ಬಳ್ನೇ ಕಳಿಸ್ಕೊಟ್ಟು ಏನಾದ್ರೂ ಹೆಚ್ಚುಕಡಿಮೆ ಆದ್ರೆ ಏನ್ಗತಿ ಅಂತ.... ವಿಷಯ ತಿಳಿಸ್ಬಿಟ್ಟೆ ........ Remedy ನಾನು ಹೇಳ್ಲಾರೆ. ನಿಸ್ಸಿಷ್ಟ. ನಾನ್ಹೋಗಿ ಬರ್ತೀನೆ. Good bye ...ಮೂರ್ನೇಸಾರಿ. (ನಿಷ್ಕ್ರಮಿಸುವನು)

ಸರೋಜ: (ನೇಪಥ್ಯ ಸಮೀಪಿಸಿ) ಅಯ್ಯಯ್ಯೋ, ಇಲ್ಬನ್ನಿ.

ಭೀಮು: (ಪ್ರವೇಶಿಸಿ) ಯಾಕೆ ?

ಸರೋಜ: ನಡೀರಿ, ಹೋಗೋಣ.

ಭೀಮು: ನಿನ್ನ ಜೊತೇಗೆ ನಾನು ತಿರಿಗಿ stationಗೆ ಬಂದು, ತಿರಿಗೀ ಹಿಂತಿರುಗೀ....ನನ್ನಿಂದ ಸಾಧ್ಯವಿಲ್ಲ....ದಯವಿಟ್ಟು ಕ್ಷಮಿಸು.

ಸರೋಜ: ನಾನ್ stationಗಲ್ಲ ಹೇಳಿದ್ದು.

ಭೀಮು: ಮತ್ತೆ ?

ಸರೋಜ: ಓ ೯ ೯, you are a fool !

ಭೀಮು: ಹ ಹ ಹ ಹ ಹ ಹ........ನಿನಗೆ ಸಂತೋಷವಾಗೋದಾದ್ರೆ, let me be a fool. ಆದ್ರೆ ಇಲ್ಲೇನೋ ನಾವಿಬ್ರೇ ಇದೇವೆ, ಪರವಾಗಿಲ್ಲ; ಇನ್ಯಾರಾದ್ರೂ ಇದ್ದಾಗ 'fool' ಅನ್ಬೇಡ. ನಾನು offensive ಆಗಿ ತೊಗೋತೀನೆ ಅಂತಲ್ಲ. ಅವರು ನಿನ್ನ ಬೇರೆ ವಿಧವಾಗಿ ಭಾವಿಸ್ಕೊಂಡ್ಬಿಡ್ತಾರೆ. ಅದಕ್ಕೋಸ್ಕ್ರ....

ಸರೋಜ: ಅಯ್ಯೋ, ನೀವ್ಮಾತಾಡೋದನ್ನ ಸ್ವಲ್ಪ ಕಮ್ಮಿ ಮಾಡ್ಬಾರ್ದೆ? ನಡೀರಿ ಹೋಗೋಣ, ನಿಮ್ಮನೆ....ನಮ್ಮನೇಗೇ ಹೋಗೋಣ.

ಭೀಮು: ಆ ? ನಮ್ಮನೇಗೇ ? You mean, ನಿಮ್ಮನೇಗೆ ?

ಸರೋಜ: ....ಹೂ, ನಮ್ಮನೇಗೇ....

ಭೀಮು: Thank you ever so much, ಸರೋಜ....ನಿನ್ನ ರಾಣೀವಾಸಕ್ಕೆ ನನ್ನ welcome ಏನಗತ್ಯ ಇಲ್ಲ. ಬಾ.

(ನಿಷ್ಕ್ರಮಿಸುವರು)

## ದೃಶ್ಯ ೩.

(ಭೀಮೂ ಮನೆ Drawing roomಉ. ಹೈದರ್, ಸಿದ್ದ, ಶಂಕರ ಶೃಂಗರಿಸುತ್ತಿದ್ದಾರೆ)

**ಹೈದರ್:** ಹರೇ ಶ್ಸಿದಾ, (ಹೂಜಾಡಿ ತೋರುತ್ತಾ) ಇದಗ್ಸು ಒಲ್ಗೆ ಹೊಸ ಫೂಲ್ ತಂದಿ ಮಡ್ಗೊ.

**ಶಂಕರ:** ನಾನ್ ತರ್‍ತಿನೋ ಸಿದ್ದ.

**ಸಿದ್ದ:** ಏ, ನಿಂಗೊತ್ತಾಗಾಕಿಲ್ಲ, ಸುಮ್ಕಿರಪ್ಪಾ. ನಾ ತತ್ತೀನಿ. (ನಿಷ್ಕ್ರಮಿಸುವನು)

**ಶಂಕರ:** ಏನೋ,ಹೈದರ್,ಅಮ್ಮಾವ್ರನ್ನ ನೋಡಿದ್ಯೇನೊstationಲ್ಲಿ?

**ಹೈದರ್:** ಓ. ದೇಖಾ. ಭೌತ್ ಪಸಂದ್ ಹೈ.

**ಸಿದ್ದ:** (ಪ್ರವೇಶಿಸಿ ಹೂಗೊಂಚಲನ್ನು ಜಾಡಿಯೊಳಗಿಟ್ಟು) ಸಂಕ್ರಪ್ಪಾ, ಅಡಿಗೆ ಎಲ್ಲ ಪೂರೈಸಾತಾ?

**ಶಂಕರ:** ಓಹೋ, ಅವರು ಬರೋತ್ಲೊ ತಟ್ಟೆಗ್ಳಾಕೋದೇ.

**ಹೈದರ್:** ಖಾನಾ ತಯಾರ್ಹೋಗಾ?

**ಸಿದ್ದ:** ಅಮ್ಮಾವ್ರು ಒಸ್ದಾಗಿ ಬತ್ತಾರೆ, ಪರಮಾನ್ನಾಯ ಮಾಡಿದ್ದೀಯೋ ಇಲ್ಲೋ?

**ಶಂಕರ:** ಓಹೋ ಮಾಡ್ದೆ ಉಂಟೇನೋ ಚಟ್ನಿ, ಕೋಸಂಬ್ರಿ, ಪಲ್ಯದಿಂದ ಹಿಡಿದು....

**ಹೈದರ್:** ಕ್ಯಾ, ಪಲಾವ್....ಪಲಾವ್ ಮಾಡಿದ್ದೀ?

**ಶಂಕರ:** ಅಯ್ಯೋ, ಮುಂ....ದೇ! ಪಲಾವ್ ಅಲ್ಲ, ಪಲ್ಯ, ಪಲ್ಯ. (ನೇಪಥ್ಯದಲ್ಲಿ ಭೀಮು "Come on Saroja")

**ಸಿದ್ದ:** ಅಕೋ, ಸಂಕ್ರಪ್ಪಾ, ಐದ್ರಪ್ಪಾ, ಬಂದ್ಬುಟ್ರು ಎದುರ್‍ಗಿರ್‍ಬಾರ್‍ದು ಅಂತ ಏಳಿದ್ನಿಲ್ವಾ....ನಡ್ರಿ ನಡ್ರಿ. (ಮೂವರೂ ಮರೆಯಾಗುವರು.)

ಭೀಮು: (ಪ್ರವೇಶಿಸುತ್ತಾ) **Come on Saroja** (ಸರೋಜ ಪ್ರವೇಶಿಸಿ Door Frameಗೇ ಒರಗಿ ನಿಲ್ಲುವಳು) ಲ್ರೋ, ಏನ್ಮಾಡ್ತಿದೀರ್ರೋ ಒಳಗೇ? ಎಲ್ಲಿ ಹಾಳಾಗ್ಹೋಗಿದೀರೋ **blackguards!** (ಎಲ್ಲರೂ ಒಂದೊಂದು ಬಾಗಿಲಲ್ಲಿ ಕಾಣಿಸಿಕೊಂಡು)

ಶಂಕರ: ಸ್ವಾಮಿ?

ಹೈದರ್: ಹುಜೂರ್?

ಸಿದ್ದ: ಬುದ್ದೀ?

ಭೀಮು: ಏನ್ ಬುದ್ದೀ, ಸಿಂತಲೆ! 'ಬುದ್ಧಿ' ಇದ್ಯೇನ್ರೋ ನಿಮ್ಗೆ? ಮನೇಗೆ ಬರೋ ಹೊತ್ಗೆ ಎದ್ರುಗ್ನಿಂತಿರ್ಬೇಕು ಅಂತ್ಗೊತ್ತಿಲ್ವೇ ನಿಮ್ಗೆ? ಒಳಗ್ಕೂತ್ಕೊಂಡು ಒಬ್ರಿಗೊಬ್ರು ಮುದ್ದಾಡ್ತಿದ್ರೇನ್ರೋ? (ಒಂದು ಕುರ್ಚಿಯಲ್ಲಿ ಕುಳಿತು ಕಾಲುಗಳನ್ನು ಚಾಚಿ) ಬಿಚ್ಚು ಬೂಡ್ಸು! (ಸಿದ್ದ ಬಿಚ್ಚಲುಪಕ್ರಮಿಸುವಷ್ಟರಲ್ಲಿ ಸರೋಜಳನ್ನು ನೋಡಿ) **I am sorry,** ಸರೋಜ. (ಸಿದ್ದನ ಕಿವಿ ಹಿಂಡುತ್ತಾ) **you stupid fool !** ಅಮ್ಮಾವ್ರು ಸುಸ್ತಾಗಿ ಅಲ್ಲಿ ಬಾಗಿಲಿಗೆ ಒರಗ್ಕೊಂಡ್ನಿಂತಿರೋವಾಗ, ಅವ್ರಿಗೆ ಕುರ್ಚಿ ಹಾಕೋದ್ಬಿಟ್ಬಿಟ್ಟು, ನನ್ನ ಬೂಡ್ಸು ಬಿಚ್ತೀನಿ ಅಂತ ಬಗ್ಗಿ ಕುಕ್ಕರಿಸ್ಕೊಂಡಿದ್ದೀಯಲ್ಲ! ನನ್ಗೆ ದೇವ್ರು ಕೈ ಕೊಟ್ಟಿಲ್ವೇ ನನ್ನ ಬೂಡ್ಸಿನ್ನ ಬಿಚ್ಕೊಳ್ಳೋಕೆ. **ಹೋಗಾಚೇಗೇ. ಹಾಕವರ್ಗೊಂದ್ ಕುರ್ಚೀನ ಮೊದ್ಲು!**

**ಸಿದ್ದ : ಅಪ್ಪಣೆ ಬುದ್ದಿ.** (ಕುರ್ಚಿ ತರಲು ಹೋಗುವನು.)

**ಭೀಮು :** (ನಿಂತ ಹಾಗೇ ಬೂಡ್ಸು ಬಿಚ್ಚಿಕೊಳ್ಳುತ್ತಾ ಹೈದರನಿಗೆ) **ಏನ್ನೋಡ್ತಾ ನಿಂತಿದೀಯೋ ಅಲ್ಲಿ, ಬೇಕೂಫಾ ?**

**ಹೈದರ್ : ಮಾಫ್ ಕೀಜೀಯೇ, ಹುಜೂರ್ !** (ತಾನೂ ಕುರ್ಚಿ ಕಡೆ ನುಗ್ಗುವನು)

**ಭೀಮು : ಎಲ್ಲಾ ಕೊಬ್ಬ್ಹೋಗಿದಾರೆ.** ಸರೋಜ, **ನೀನಿವರ್ನೆಲ್ಲಾ set right ಮಾಡ್ಬೇಕು.** ಇವತ್ನಿಂದ ನಿನ್ನ **chargeಉ**

(ಸಿದ್ದ, ಹೈದರ್ ಇಬ್ಬರೂ ಒಂದೊಂದು ಕುರ್ಚಿ ಸರೋಜಳ ಮುಂದಿಟ್ಟು)

ಸಿದ್ದ : ಕುಂತ್ಕೊಳ್ರಮ್ಮಾ, ತಪ್ಪಾತು !

ಹೈದರ್ : ಬೈಟ್‌ಜಾವಾ.... ಸಲಾಮ್ !

ಭೀಮು : ಘೂತ್ತೆರಿ, ಏನ್ರೋ ಇದು ? ಎರಡು ಕುರ್ಚಿ ಮೇಲೆ ಒಬ್ರು ಕೂತ್ಕೊಳ್ಳೋಕಾಗತ್ತೇನ್ರೋ ? ಇಲ್ಲಾ, ನಮ್ಮಿಬ್ರನ್ನೂ ಕೂಡ್ಸಿ ನೀವಿಬ್ರೂ ಆರತಿಗೀರ್ತಿ ಮಾಡ್ತೀರೋ ? You damn (ಒಂದು ಕುರ್ಚಿಯನ್ನು ಒದ್ದು ಉರುಳಿಸಿ) fools (ಇನ್ನೊಂದು ಕುರ್ಚಿಯನ್ನೂ ಉರುಳಿಸಿ) ಅತಿ ಬುದ್ಧಿವಂತಿಕೆ ತೋರಿಸ್ತೀರೇನ್ರೋ....ಆ ? (ಇಬ್ಬರಿಗೂ ಹೊಡೆದು ತಳ್ಳಲು)

ಸರೋಜ : ಅಯ್ಯಯ್ಯೋ, ಅವರನ್ಯಾಕ್ಹಾಗೆ ಹೊಡೀತೀರಿ ಅಂದ್ರೆ ? ನಾನೇ ಹಾಕ್ಕೋತೇನೆ. (ಕುರ್ಚಿಯನ್ನೆತ್ತಲು)

ಭೀಮು : (ಅದನ್ನು ತಳ್ಳಿ ಬೀಳಿಸುತ್ತಾ) Drop it ! ನಮ್ಮ ಕೆಲ್ಸ ನಾವೇ ಮಾಡ್ಕೊಂಡ್ರೆ ಇವ್ರೆಲ್ಲಾ ಯಾಕಿರೋದು ? ನಿನ್ನ ಈ sweet hands ಈ menial ಕೆಲ್ಸಗಳ್ನ ಮಾಡೋದಿಕ್ಕಲ್ಲ ಇರೋದು. (ಸಿದ್ದ ಹೈದರ ಗೆ) ಆಟ ಆಡ್ತೀರೋ ಅಟ ? ನಾಳೆ ಆಗ್ಲಿ........ (ನಿಷ್ಕ್ರಮಿಸುವನು)

ಸರೋಜ : (ಸೇವಕರನ್ನು ಸಮೀಪಿಸಿ) ಏಟು ತಗಲ್ತೇನ್ರಪ್ಪಾ ? ಸುಮ್ನಿರಿ ಅವ್ರಿಗೆ ಹಸಿವೆ ಹೊತ್ತು. (ಹೈದರ್‌ಗೆ) ನೀನು ?

ಹೈದರ್ : ಹೈದರ್ ಇದಾರೆ ಮಾ.

ಸರೋಜ : ಎಲ್ಲಿದಾರೋ ?

ಹೈದರ್ : ಹ ಹ ಹ ಹ........ಇಲ್ಲೀ ಇದಾರೆ ಮಾ.

ಸಿದ್ದ : ಇವನೆಸ್ರು ಹೈದರ್ರಮ್ಮಾ.

ಸರೋಜ : ನಿನ್ನ ಹೆಸರು ಹೈದರೇನೋ ?

ಹೈದರ್ : ಹಹಹಹ ಹಾಮಾ....ಇವ್ನು ಶ್ಹೀದಾ ಇದಾನೆ ಮಾ.

ಸಿದ್ದ : ಸಿದ್ದ, ಸಿದ್ದನ್ರಮ್ಮ. (ಭೀಮು ನೇಪಥ್ಯದಿಂದ: ಲೋ, ಹೈದರ್, ಸಿದ್ದಾ, ಬನ್ರೋ ಇಲ್ಲಿ) ಬಂದೋ !

ಹೈದರ್ : ಆಯಾ ಸಾಬ್ !

(ಸಿದ್ದ, ಹೈದರ್ ಇಬ್ಬರೂ ಢಡಬಡಲಾಗಿ ಒಳಗೋಡುವರು)

**ಸರೋಜ** : (ಶಂಕರ ಸರಿಯಾಗಿ ಹಾಕಿದ ಕುರ್ಚಿಯಲ್ಲಿ ಕೂಡುತ್ತಾ) ನೀನ್ಯಾರಪ್ಪ, ಪುಣ್ಯವಂತ ?

**ಶಂಕರ** : ನಾನ್ ಶಂಕ್ರಾನಮ್ಮ

**ಸರೋಜ** : ಹಾಗಂದ್ರೆ?

**ಶಂಕರ** : ಅಡಿಗ್ಯೋನು.

**ಸರೋಜ** : ಓ....ಸಂತೋಷ. ವಿಪರೀತ ತಲೆನೋವು, ಕಾಫಿ ಇದ್ರೆ....

**ಶಂಕರ** : ಅಡಿಗೆ.... ಆಗಿದೆ ಅಮ್ಮ. ಊಟಾನೇ ಮಾಡ್ಬಿಡ್ಬಹುದು.

**ಸರೋಜ** : ಊಟ ಆಮೇಲಾಗ್ಲಿ ಮೊದ್ಲೊಂದ್ಲೋಟ Coffee ತಂದ್ರೆ ಬದುಕಿದ್ಹಾಗಾಗತ್ತಪ್ಪ.

**ಶಂಕರ** : ತರ್ತೀನಮ್ಮ Decoction ಹಾಕಿಟ್ಬಿಟ್ಟೆ ತನುಗ್ಬೇಕಾಗ್ಬಹುದು. ಅಂತ.

**ಸರೋಜ**: (ಕುರ್ಚಿಗೆ ಮುಂದಕ್ಕೆ ಬಾಗಿ ಮೇಜಿನ ಮೇಲೆ ತಲೆಯಿಟ್ಟು ವಿಶ್ರಮಿಸಿಕೊಳುವಳು. ಸ್ವಲ್ಪ ಹೊತ್ತಿನಲ್ಲೇ ಎದ್ದು) ಶ್ ೯ ೯ ೯ ೯..(weakly) ಶಂಕರಾ! ಆಯ್ತೇನಪ್ಪಾ?

**ಶಂಕರ** : (ಪ್ರವೇಶಿಸುತ್ತಾ) ಆಯ್ತಮ್ಮಾ ಇಗೋ ತಂದೆ. (Cup and Saucer ಮೇಜಿನ ಮೇಲಿಡುವನು)

**ಸರೋಜ** : ಜೀವ ಬಂದ್ಹಾಗಾಯ್ತಪ್ಪ.

**ಭೀಮು** : (ಪ್ರವೇಶಿಸುತ್ತಾ) ಶಂಕ್ರಾ!....ಓ ಇಲ್ಲೇ ಇದೀಯಾ? ಏನ್ಮಾಡ್ತಿದ್ದೀಯೋ? ಏನ್ನೋಡ್ತಾ ನಿಂತಿದ್ದೀಯೋ?..ಅಲೆ....ಯಾರ್ಗೊ..ಯಾತಕ್ಕೋ Coffee ಇಷ್ಟೊತ್ನಲ್ಲಿ?

**ಶಂಕರ** : ಅ....ಅ....ಅಮ್ಮಾವ್ರು

**ಭೀಮು** : Rascal....ಅಮ್ಮಾವ್ರಿಗೆ ಅಂತ ಅವ್ರೆದೂರ್ಗೇ ಸುಳ್ಳೇಳ್ತೀಯಾ ? ಕಾಪಾಡ್ಕೋ ನಿನ್ನ ಹಲ್ಲುಗಳ್ನ ! (ಹೊಡಿಯಲು ಕೈ ಎತ್ತುವನು)

**ಸರೋಜ** : (ಎದ್ದು ತಡೆದು) ಇಲ್ಲಾಂದ್ರೆ, ಅವ್ನೇಳಿದ್ನಿಜ. ನಾನೇ Coffee ಬೇಕೂಂತ್ಕೇಳ್ದೆ.

**ಭೀಮು** : ಓ, ಹಾಗೇನೂ ? ಹಾಗಾದ್ರೆ (ಹೊಡೆಯಲೆತ್ತಿದ ಕೈಯಿಂದ ಶಂಕರನ ಬೆನ್ನು ತಟ್ಟುತ್ತಾ) ಜಾಣಮರಿ. (ಸರೋಜ ಕಾಫಿ cup ಕೈಗೆ ತೆಗೆದುಕೊಳ್ಳಲು) ಎಲ್ಲಿ, ಜಾಣಮರಿ ಹ್ಯಾಗ್ಮಾಡ್ಕೊಂಡ್ಬಂದಿದಾನೋ ನೋಡೋಣ. (ಸರೋಜಳ ಕೈಯಿಂದ cup ತೆಗೆದುಕೊಂಡು) ಏನೋ ಇದು ಬಣ್ಣ ? ಕೊಂದ್ಬಿಡ್ಬೇಕೂಂತಿದ್ದೀಯೋನೋ ಈ ಪಾಟಿ caffeine poisoningನಲ್ಲಿ? ಅಷ್ಟೆಮ್ಮೆ ಹಾಲುಗಳ್ನೂ ನೀವೇ ಕುಡಿದ್ಬಿಡ್ತಿದೀರೇನ್ರೋ ? (ರುಚಿ ನೋಡಿ) ಅಯ್ಯಯ್ಯೋ ಸೀಗೆಕಾಯಿ ಕಷಾಯ ಇದ್ದಾಂಗಿದೆಯಲ್ಲೋ ! (ಕಾಫಿಯನ್ನು Flower-vaseನಲ್ಲಿ ಚೆಲ್ಲಲು)

**ಸರೋಜ** : ಅಯ್ಯಯ್ಯೋ, ಅಲ್ಲಿ ಚೆಲ್ಬೇಡಿ, ಆ Flowers ಎಲ್ಲಾ ಬಾಡ್ಹೋಗತ್ತೆ ಕಾಫೀಗೆ.

**ಭೀಮು** : ಹಹಹಹ, ಸರೋಜ, ನಿನಗೀ ಬೇಲಿ flowers ಮೇಲೇ ಇಷ್ಟು ಕರುಣ ಇರ್ಬೇಕಾದ್ರೆ, ನನಗೀ (ಸರೋಜಳನ್ನು ತೋರುತ್ತಾ) sweet-delicacy ಮೇಲೆ ಇನ್ನೆಷ್ಟು ಕರುಣ ಇರ್ಬೇಕು ? ನೀನೀ ಕಾಫಿ ಕುಡ್ದಿದ್ರೆ ಗತಿ ? (ಶಂಕರನಿಗೆ) ಏನೋ ಹೀಗೇನೇನೋ ಕಾಫಿ ಮಾಡೋದು ?

**ಸರೋಜ** : ಇಲ್ಲಾಂದ್ರೆ ಕಾಫಿ Flavour ಏನೋ ಚೆನ್ನಾಗೇ ಇತ್ತು.

**ಭೀಮು** : ಏನ್ ಚೆನ್ನಾಗಿತ್ತು ? ನಿಂಗೊತ್ತಿಲ್ಲ, ಸರೋಜ, ನಿಂಗೊತ್ತಿಲ್ಲ. ಅವಲಕ್ಷಣವಾಗ್ಮಾಡಿ ಬಾಯಿಗೆ ಸೀಕಾಣೋಕೆ ಒಂದು ton ಸಕ್ರೆ ಸುರಿದ್ಬಿಟ್ಟಿದ್ದ ಅಷ್ಟೆ. (ಶಂಕರನನ್ನು ಸಮಾಪಿಸುತ್ತಾ) ಲೋ, ಶಂಕ್ರಾ, ನೀನ್ ಗೌರಿ ಶಂಕರದಷ್ಟು ಎತ್ತರ ಬೆಳೆದಿದ್ದೀಯೋ ಹೊರ್ತು, ನಿನ್ನ ತಲೆ ತುಂಬಾ ಕಳಿ ಮುದ್ದೆ ಕಾಣೋ ಕಳಿಮುದ್ದೆ. ಇಲ್ನೋಡೂ, ಈಸರ್ತೀಗಾಯ್ತು, ಇನ್ನೊಂದ್ಸಾರ್ತೀ ಗಾನಾ ಇಂಥಾ coffee ತಂದ್ಕೊಟ್ಯೋ, ಶಂಕ್ರಾ, ಶಂಭೋ ಶಂಕ್ರಾ, ನಿನ್ನ ಕೈಲಾಸಕ್ಕೆ ಕಳಿಸ್ಬಿಡ್ತೀನಿ. (Bursting out) ನಡಿಯೋ ಒಳ್ಗೆ ! ಗೂಬೆ ಹಾಗೆ ಕಣ್ಣಣ್ಬಿಡ್ತಾ ನಿಂತಿದಾನೆ (ಶಂಕರ ಪೆಚ್ಚಾಗಿ ಒಳಬಾಗಿಲು ಸೇರಲು) ಶಂಕ್ರಾ!

**ಶಂಕರ** : ಸ್ವಾಮೀ ?

**ಭೀಮು** : ಏನ್ 'ಸ್ವಾಮೀ'ನೋ ? ನಿಮ್ಮಂಥಾವ್ರನ್ನ ಕಟ್ಕೊಂಡು ಸನ್ಯಾಸ ತೊಗೊಂಡು ಸ್ವಾಮಿಗ್ಳಾಗಿ ಕಾಡಿಗ್ಹೋಗೋದೇ ವಾಸಿ (ಸರೋಜಳಿಗೆ)

I am sorry ಸರೋಜ. ನಿಮ್ಮನೇಲಿ ಸುಖವಾಗಿದ್ದಿ. ಕರ್ಕೊಂಡ್ಬಂದು ಈ ಮೃಗಗಳ ಮಧ್ಯೆ ಬಿಟ್ಬಿಟ್ಟೆ. (ಶಂಕ್ರನಿಗೆ) ಅಲ್ವೋ, ಅಡಿಗೆ ಆಗಿದೆ ಅಂತ ಬೊಗ್ಳಿದ್ಯೇನೋ ಇವರ್ಮುಂದೆ ? ನನ್ನ ಪಾಡಂತೂ ಹಾಳಾಗ್ಹೋಗ್ಲಿ ನನ್ನ ಹಣೇ ಬರಹ ನಿಮ್ಮನ್ನ ಕಟ್ಕೊಂಡೇಗೋದು. ಇವ್ರಿಗೆ ಪಾಪ, ಹಸಿವೆ. ಬೆಳಗ್ನಿಂದ ಏನಿಲ್ಲ.

ಶಂಕರ: ಅಡಿಗೆ....ಅಡಿಗೆ....ಆಗಿದೆ ಅಂತ ಹೇಳ್ದೆ, ಸ್ವಾಮಿ.

ಸರೋಜ: (ತನ್ನ ಕಡೆ ತಿರುಗಿದ ಭೀಮುಗೆ) ಹೇಳ್ದ.

ಭೀಮು: Oh! ಭೇಷ್! ವೊದ್ಲೇ ಆ ವಿಷಯ ತಿಳಿಸ್ಬಿಟ್ಟಿದ್ರೆ ಬೈಸ್ಕೊಳ್ಳೋದೇ ತಪ್ಪಿತ್ತಲ್ಲೋ! (ಸರೋಜಳಿಗೆ) ಫರವಾಗಿಲ್ಲ, ಸರೋಜ, ನೀನ್ ಹೊಸಲೊಳಗೆ ಬರೋತ್ಲೂ ಇವನ ಬುದ್ಧಿ signs of improvement ತೋರಿಸ್ತಾ ಇದೆ.(ಶಂಕ್ರನಿಗೆ) ಏನ್ಮಾಡಿದ್ದೀಯೊೋ, ಅಡಿಗೆ ? ಯಥಾಪ್ರಕಾರದ ಅನ್ನ, ಕಲಗಚ್ಚೋ .... ?

ಶಂಕರ: ಇಲ್ಲ ಸ್ವಾಮಿ, ಪಾಯಿಸ.... ಚಿತ್ರಾನ್ನ.... ಬೋಂಡ....

ಭೀಮು: "ಪಾಯಿಸ, ಚಿತ್ರಾನ್ನ, ಬೋಂಡ" ! ಏನ್ಬಂತೋ ನಿನಗಿದ್ದಕ್ಕಿದ್ದ ಹಾಗೇ ? ನಿಮ್ಮಪ್ಪನ ಹುಟ್ಟಿದ್ಹಬ್ಬಾನೇನೋ ಇವತ್ತು ?

ಶಂಕರ: ಇಲ್ಲ.... ಅವ್ಯಾವ್ರು.... ಹೊಸ್ದಾಗಿ.... ಬರ್ತಾರೆ— ಅಂತ....

ಭೀಮು: Marvellous ! Marvellous !! ನೋಡಿದ್ಯಾ, ಸರೋಜ, he is becoming a genius, Ph. D. in ಬುದ್ಧಿವಂತ್ಕೆ ಹೊಡ್ದೇಬಿಡ್ತಾನಿಷ್ಟರಲ್ಲೇ ಬಾ, ಸರೋಜ, "ಪಾಯಿಸ .... ಚಿತ್ರಾನ್ನ.... ಬೋಂಡ ...." ನೋಡೇಬಿಡೋಣ ! (ಶಂಕ್ರನಿಗೆ) ನಡಿಯೋ, ನಳ ಚಕ್ರವರ್ತಿ !

— ತೆರೆ ಬೀಳುವುದು —

## ದೃಶ್ಯ—೪

[ಭೀಮು ಮನೆ Compound ಒಳಗೆ; ಅಡಿಗೆ ಊಟದ ಮನೆಗಳ ಹಿಂಭಾಗದಲ್ಲಿ.]

ಮತ್ತು

[ ಊಟದ ಮನೆ: ನೇಪಥ್ಯದಲ್ಲಿ ]

[ಭೀಮು: ಏನೋ ಇದು ಹೀಗ್ಬಡ್ಸಿದೀಯಾ, ಬೊಂಬೆಗ್ಳಿಗೆ ಬಡಿಸಿದ್ಹಾಗೆ? ಹಸಿವೆ ಪ್ರಾಣಹೋಗ್ತಾ ಇದೆ, ration service ಮಾಡ್ಬಿಟ್ಟಿದ್ದೀಯಲ್ಲೋ....ಕೂತ್ಕೋ, ಸರೋಜ ........ ಅಯ್ಯಯ್ಯಯ್ಯೋ, ಪಾಯ್ಸಕ್ಕೆ ಮಜ್ಜಿಗೆ ಹುಯ್ದ್ಬಿಟ್ಟಿದ್ದೀಯಲ್ಲೋ .... ತಿನ್ಬೇಡ ಸರೋಜ!.... ಎಲ್ಲಿ....ಲೋ ಶಂಕರ, ಏನ್ ಅನ್ನ ಬಡ್ಸಿದ್ದೀಯೋ ಇವ್ರೆಲೇಗೆ.... ? ]

(ಪ್ರವೇಶ : ಸಿದ್ದ, ಹೈದರ್)

**ಸಿದ್ದ** : (ಪ್ರವೇಶಿಸಿ) ಏನೋ ಊಟದ್ಮನ್ಯಾಗೆ ಗಲಾಟೆ ಆಗ್ತಾದಲ್ಲ....?

[ಇವ್ರೂರ hotelಲ brazil ಅಕ್ಕಿ ಅನ್ನದ ಉಂಡೆ ಇದ್ದ್ಹಾಗಿದೆಯಲ್ಲೋ ! ನಮ್ಮಕ್ಕಿ ಏನಾಯ್ತೋ ?

**ಶಂಕರ**: ನಮ್ಮ ಅಕ್ಕೀನೇ ಸ್ವಾಮೀ....

**ಭೀಮು**: ಮುಚ್ಕೊಬಾಯ್, ಎದುರು ಮಾದಿಸ್ಬೇಡ....ಓಹ್! ಓಹ್! ಓಹ್ !

**ಸರೋಜ**: ಏನಾಯ್ತಂದ್ರೀ ?

**ಭೀಮು**: ಆ ಚಟ್ಣಿ....ಮುಟ್ಬೇಡಾ ! ........ಖಾರಾ....ಹಸಿ ಮೆಣಸಿನ್ಕಾಯಿ ವೀಸೆ ವೀಸೇನೇ ಹಾಕಿ ಅರೆದ್ಬಿಟ್ಟಿದಾನೇ! ನೀನ್ ನಾಲ್ಗೇಗೆ ಸೋಕಿಸ್ಬೇಡಾ! ಜೇನ್ತುಪ್ಪದಲ್ಲಿ ನೆನೆಸಿ refrigiratorನಲ್ಲಿ ನಾಕುದಿವಸ ಇಟ್ಟಿರ್ಬೇಕಾದೀತು normalಗೆ ಬರೋಕೇ !........]

**ಹೈದರ್** : ಹೇನೋ ಶ್ಬೀದಾ, ಖಾನಾ ಮನೆಬಳ್ಗೆ ಘಲಾಟೆ ?

**ಸಿದ್ದ** : ಅಡ್ಗೆ ಸರ್‍ಯಾಗ್ಮಾಡ್ಲಿಲ್ಲ ಅಂತ ಸಂಕ್ರಪ್ಪನ್ಗೆ ಪೂಜೆ ಮಾಡ್ತಾರೆ, ಸಾಯೇಬ್ರು !

[ .... ಈ ಚಿತ್ರಾನ್ನ ಚಿತ್ರಾವತೀಗಿಡ್ಡೋಕೂ ಲಾಯಖ್ಖಿಲ್ವಲ್ಲೋ, ಎಷ್ಟ್ಯೋ ವಗ್ಗರಣೆ ಹುರ್ಯೋದು? ಇದೇನೋ ಇದು, ಬೋಂಡ್ವೇನೋ? ನಿನ್ನ ಪಿಂಡ....ಒಂದೊಂದೂ ಐದ್ನೇ ನಂಬರ್ foot-ball ಇದ್ದಾಂಗಿದೆ ಯಲ್ಲೋ! ಥೂತ್-ಥೂತ್-ಥೂತ್ !

**ಸರೋಜ :** ಅಯ್ಯಯ್ಯೋ, ಇದ್ಯಾಕಂದ್ರೆ ಹೀಗೆ ಒದೀತೀರಿ? ]

**ಸಿದ್ದ :** (ಮೇಲಿನಿಂದ ಬಂದು ಬಿದ್ದ ಒಂದು ಬೋಂಡ ಎತ್ತಿಕೊಂಡು) ಬೋಂಡ ಬೋಂಡ ...

**ಹೈದರ್ :** ಏ, ನನ್ಗೆ, ನನ್ಗೆ....

**ಸಿದ್ದ :** ಕೋ, ನಿಂಗಿಷ್ಟು, ನಂಗಿಷ್ಟು! ಸಂಕ್ರಪ್ಪನ್ನಾಗ್ಯಿತ್ತೀವೊತ್ತು....

[**ಭೀಮು :** ಸಾಕು, ಏಳು ಸರೋಜ, ಈ ಹಾಳು ಅಡಿಗೇನ ಅನ್ನೇ ಊಟ ಮಾಡ್ಕೊಳ್ಳೀ....(ತಪ್ಪಗಳನ್ನು ಎಸೆದ ಶಬ್ದ)ಅವನ್ನಾನೇ ಯಾಕ್ಮಾಡ್ಬೇಕು?

(ಅಡಿಗೆಮನೆಗೆ ಪ್ರವೇಶಿಸಿ ಪಾತ್ರೆಗಳೆಲ್ಲಾ ಚೆಲ್ಲಾಪಿಲ್ಲಿಯಾಗಿ ಎಸೆಯುತ್ತ)

ಕೋಸಂಬ್ರಿ! ...ಪಲ್ಯ.... ಚಿತ್ರಾನ್ನ! ಸಾರು!.. ತೊವ್ವೆ....damn!..

**ಸರೋಜ :** ಇದೇನೂ ಒಂದ್ರೆ ಅನ್ಯಾಯ ಇದು?

**ಭೀಮು :** ಅವನೀ ಹಾಳು ಅಡಿಗೆ ಮಾಡಿದ್ದು ನ್ಯಾಯವೇನೇ? ನೀನು ಮೊದಲ್ನೇಸಾರಿ ಬಂದ ದಿವಸ? .... ನೋಡಿದ್ಯಾ, ಇದು ಹುಳಿ ಅಂತೆ .... ನೋಡ್ ಇದ್ರ ಬಣ್ಣ....ಶಂಕರಾ, ಶಂಭೋ ಶಂಕರಾ....ನಿನಗೆ....ಅಭಿಷೇಕ....

**ಶಂಕರ :** ಅಯ್ಯಯ್ಯೋ ಅಯ್ಯಯ್ಯೋ....ಸ್ವಾಮೀ....

**ಸರೋಜ :** ಅಯ್ಯೋ! ]

**ಶಂಕರ :** (ತಲೆ ಮೈಮೇಲಿರುವ ಹೋಳುಗಳನ್ನು ಕೊಡವಿಕೊಳ್ಳುತ್ತಾ ಪ್ರವೇಶಿಸಿ) ಸಿದ್ದಾ....ಹೈದರ್....ಓ೯೯೯!....

**ಸಿದ್ದ :** ಅಯ್ಯಯ್ಯೋ! ಸಂಕ್ರಪ್ಪಾ!!

**ಹೈದರ್ :** ಹ್ಹರ್ರೇ, ಶ್ಹಂಕ್ರೂ, ಏ ಕ್ಯಾ?

[**ಸರೋಜ :** ಇದೇನೊಂದ್ರೆ, ಕೇವಲ, ಹುಚ್ಚುಚ್ಚು .... ನಡೀರಿ .... ಊಟವಂತೂ ಆಯ್ತು, ಒಂದ್ಲೋಟ ನೀರಾದ್ರೂ ಕುಡಿದು ಬರ್ತೀನೆ ........

ಭೀಮು : ಸರೋಜ ! ನೀನು ? ನೀರ್ಸ್ಕುಡಿಯೋದೂ ? ತಣ್ಣೀರು ? No. No !.... ಸರೋಜಾ, I can't allow it. ಈ ಮಲ್ನಾಡ್ನಲ್ಲಿ ತಣ್ಣೀರ್ಸ್ಕುಡೀಬಾರ್ದು. ಮಲೇರಿಯ ಬಂದ್ಬಿಡುತ್ತೆ .... ನಾಳೆ ಬೆಳಿಗ್ಯೆ ಎದ್ದು ಬಿಸಿಬಿಸಿಯಾಗಿ ಕಾಫಿ ಕುಡೀವಿಂತೆ....ಬಾ........... ]

ಸಿದ್ದ : ಆ ಯಮ್ಮ ಇವರ್ಜ್ಯೊಟೆ ನಾಕುದಿವ್ಸ ಬದ್ಕಾಕಿಲ್ಲ.

ಶಂಕರ : ಅವರ ಗತಿ ಅವರ್ನೋಡ್ಕೊಳ್ಳಿ....ನನ್ನ ಅವಸ್ಥೇನ್ನೋಡ್ರೊ .... ಎರಡುಘಂಟೆ ಕೂತ್ಕೊಂಡ್ಮಾಡ್ದೆ ಅಡ್ಗೇನ........ (ಮೈಮೇಲಿನ ಹುಳ ಒರೆಸಿ ಕೊಳ್ಳುತ್ತಾ) ಅಶ್ಶಿ ಶ್ಶಿ ಶ್ಶಿ ಶ್ಶಿ ಶ್ಶಿ....

ಸಿದ್ದ : ಆ ನಲ್ಲಿ ಬುಡ್ದಾಗೆ ಕುಂತ್ಕೊಂಡ್ ಸಾನಾನಾರೂ ಮಾಡು.... ಕಿಳೀನ್ ಮಾಡ್ಕೊಳ್ಳೋವೆ....ಸಂಕ್ರಪ್ಪ ! ಅಕೋ....

ಭೀಮು : (ಪ್ರವೇಶಿಸಿ) ಹ ಹ ಹ ಹ ಹ ಹ........ಹ್ಯಾಗಿದ್ದೀಯೋ ಶಂಕ್ರ ನೋಡೋಕೆ ! ಹೋಗ್ಲಿ, ನೀವ್ಯಾರೂ ಏನೂ ತಿಳ್ಕೋಬೇಡ್ರೋ....ಶಂಕ್ರಾ, ಹಿಡಿ ಇದನ್ನ.... (5 ರೂ. ನೋಟು ಕೊಟ್ಟು) ಮೊದಲು ಒಳಗ್ಹೋಗಿ ಸ್ನಾನಮಾಡಿ ....ನಂದ್ಯಾವ್ದಾದ್ರೂ ಷರಟು ತೊಗೋ .......ಹಾಕ್ಕೊಂಡು........ನಾರಣಪ್ನ ಹೋಟಲ್ಲಿಗ್ಹೋಗಿ, ನಾಕ್ನಾಕು ಚಪ್ಪಾತಿ, ಒಂದು kettle coffee.... ತೊಗೊಂಡ್ಬಂದು ಮೆಲ್ಲಗೆ ಹಾಲ್ನಲ್ಲಿಟ್ಬಿಟ್ಟು, ನೀವೆಲ್ಲಾ ಹೊರಟ್ಹೋಗಿ.... ಬಾಕಿ ಚಿಲ್ರೆ ನಿಮ್ಗೆ....ಹೋಗಿ....(ನಿಷ್ಕ್ರಮಿಸುವನು)

ಸಿದ್ದ : ಆ ?

ಶಂಕರ : ಇದೇನೀಗ ಹೀಗೆ ಇಷ್ಟು....ದಿವಸಾ ಇದ್ದಾಗಿದ್ರಲ್ಲಾ ?

ಹೈದರ್ : ಸಂಕ್ರಪ್ಪಾ, ಸಾಮೀಗೆ ಪಾಗಲ್ ಹಿಡ್ಕೋಗೈತೆ !

ಸಿದ್ದ : ಉಹು ಉಹು .... ಅವರಿಗ್ಯಾಕಿಡೀತೈತೆ ಉಚ್ಚು, ನಮ್ಕಿಡಿ ಸ್ತಾರೆ....ಏನೋ ಬೇರೆ ಐತೆ ಇವ್ರ ಮಸ್ಲತ್ತು....

ಶಂಕರ : ಅದೇನಾದ್ರೂ ಇದ್ಕೊಂಡ್ಹೋಗ್ಲಿ........ಮೊದಲ್ಹೋಳಿದ್ಕೆಲ್ಸ ಮಾಡ್ಬಿಡೋಣ....ಆಮೇಲೆ ತಿರಿಗೀ ರೇಗೋಕೆ ಪ್ರಾರಂಭ ಮಾಡ್ಬಿಟ್ಟಾರು ! ನೀವಲ್ಲೇ ಇರಿ, ನಾನ್ ಸ್ನಾನಮಾಡ್ಕೊಂಡ್ ಬಂದ್ಬಿಡ್ತೀನಿ....ಹೋಗೋಣ.

ಸಿದ್ದ : ಓ....ಓ....

ಹೈದರ್ : ಜಲ್ದಿ ಬಾ....

(ಸಿದ್ದ, ಹೈದರ್ ಒಂದುಕಡೆ, ಶಂಕರ ಇನ್ನೊಂದುಕಡೆ ನಿಷ್ಕ್ರಮಿಸುವರು

## ದೃಶ್ಯ ೫.

(ಭೀಮು ಮಲಗುವ ಮನೆ. ಸರ್ವಾಲಂಕೃತವಾಗಿದೆ. ಸತಿಪತಿಯರು ಪ್ರವೇಶಿಸುವರು)

ಭೀಮು: ಪಾಯಿಸ! ಚಿತ್ರಾನ್ನ!! ಬೋಂಡ!!! ಸಾಯಿಸ್ದ ಊರಿಗ್ಬಂದ ದಿವಸವೇ ಉಪವಾಸಹಾಕಿ.

ಸರೋಜ: ಏನೋ ಹಾಗೂ ಹೀಗೂ ಸುಧಾರಿಸ್ಕೊಂಡು ಸ್ವಲ್ಪ ಊಟ ಮಾಡಬಹುದಾಗಿತ್ತು, ಹೀಗಿರೋಕಿಂತ.

ಭೀಮು: ಹೀಗಿರೋದು ಕೋಟಿ ಪಾಲು ವಾಸಿ. ಏನ್ ಸುಧಾರಿಸ್ಕೊಂಡು ಊಟಮಾಡೋದು? ನಿನಗೆ ಹೊಟ್ಟೆ ನೋವು ಬಂದೂ ...ವದ್ಯಾಡೋಕೆ ಪ್ರಾರಂಭಮಾಡಿದ್ದಿ ಅಂದ್ರೆ, ನಾನದನ್ನ ಹ್ಯಾಗೇ ನೋಡೋಕಾಗ್ತಾ ಇತ್ತು? Soda, fruit salt ಗೆ ಓಡ್ಬೇಕಾಗಿತ್ತು. ಹೋಗ್ಲಿ ಸುಮ್ನಿರು ಇವನ್ನ ಒದ್ದೋಡ್ಸಿ, ನಾಳೆ ಬೆಳಿಗ್ಯೆ ಬೇರೆ ಅಡಿಗ್ಯೋನ್ನ್ಗ ಹೇಳ್ಕಳ್ಸೋಣ. (ವಾಸನೆ ಎಳೆದು) ಏನಿದು ಊದುಕಡ್ಡಿ ವಾಸ್ನೆ? (ಮೇಜಿನಮೇಲೆ ಇರುವುದನ್ನು ಕಂಡು) ಓಹೋ, ಹಚ್ಚಿಟ್ಟಿಟ್ಟಿದಾರೇ!.... ಅ ಲೆ ಲೆ ಲೆ, ರೂಮಿಗೆ ಶೃಂಗಾರ ಬೇರೆ ಮಾಡಿದಾರೆ, ಕೇಡು!!.... ಹೊಟ್ಟೆಗಿಲ್ದೆ ಇದ್ದಾರೇ, ಇದ್ರ ವಾಸ್ನೆನಾದ್ರೂ ಕುಡ್ಕೊಳ್ಲೀ ಅಂತ್ಲೇನೋ! (ಊದುಕಡ್ಡಿಗಳನ್ನು ಕಿತ್ತು, ಆರಿಸಿಬಿಟ್ಟು, ಅತ್ತ ಇರುವ ಪನ್ನೀರುಧಾನಿ ನೋಡಿ) ಎಲ ಎಲ........ಕುಡಿಯೋಕೆ ನೀರಿಲ್ಲ, ಪನ್ನೀರ್ಧಾನಿ! Scoundrels! ಹೊಟ್ಟೆ ಕಾಯ್ತಾ ಇದೆ, ತಲೆಯಾದ್ರೂ ತಣ್ಣಗಿರ್ಲಿ ಅಂತ್ಲೇನೋ, ಚುಮ್ಕಿಸ್ಕೊಳ್ಳೋಕೆ! Rascals....(ಪನ್ನೀರ್‌ಧಾನಿ ಬಿಸುಡುವನು)

ಸರೋಜ: ಅಯ್ಯಯ್ಯೋ! (ಹೋಗಿ ಎತ್ತಿಕೊಳ್ಳುತ್ತಾ) ಬೆಳ್ಳೀದೂ, ನೆಗ್ಗೋಗ್ಹೋದೀತು!

ಭೀಮು: ನೆಗೆದ್ಬಿದ್ದೋಗ್ಹೋಗ್ಲಿ, ಪ್ರಾಣ ಹೋಗ್ತಿರೋವಾಗ್ಲೇನೇ, ಪನ್ನೀರ್ಧಾನೀ? ಸರೋಜ, I am sorry. Very sorry ನಿನಗೆ ಅರ್ಧಜೀವ ಮಾಡ್ಹಾಕ್ಬಿಟ್ಟವೆ ಈ ಪಿಶಾಚಿಗ್ಳು. ತುಂಬಾ Tire ಆಗ್ಹೋಗಿದ್ದಿ. ಮಲಗ್ಕೋ. ನಾಳೆ ಬೆಳಿಗ್ಯೆ ಎಲ್ಲಾದಕ್ಕೂ ಬೇರೆ ಏರ್ಪಾಟ್ಮಾಡೋಣ. (Easy Chair ನಲ್ಲಿ ಕೂಡುವನು)

ಸರೋಜ: ಬೇಡಾ, ನೀವೇ ಮಲಗ್ಕೊಳ್ಳಿ, ನಾನೇ ಇಲ್ಕೂತ್ಕೊಳ್ತೀನೆ.

ಭೀಮು : **ಬೇಡಾ !** ನೀನ್ ಕೂತಿರೋದು, ನಾನ್ ಮಲಗ್ಕೊಂಡ್ನಿದ್ದೆ ಮಾಡೋದು ! ನನ್ನ ಏನಂತ ತಿಳ್ಕೊಂಡಿದ್ದಿ ನೀನ್, ಸರೋಜ ? ಸುಮ್ನೆ ಮಲಗ್ಕೊ....(ಹಾಸಿಗೆಮೇಲೆ ಕೂಡಿಸಿ ಮರುಕ್ಷಣದಲ್ಲೇ ಕೆಳಕ್ಕೆಳೆದು) ಹೀಗ್ಬ್ಯಾ ಸರೋಜ ! (ಹಾಸಿಗೆಮೇಲಿರುವ ತಾಂಬೂಲದ ತಾಟು ನೋಡಿ) ನೋಡಿದ್ಯೇನೇ ಇವ್ರಾಟಾನಾ ? ಆ ? ಈ ಶಂಕರ ಮಾಡಿ ಬಡ್ಸಿದ ಔತಣದ ಅಡಿಗೇನ ಊಟಮಾಡಿ, ಅಜೀರ್ಣ ವಾಗ್ಹೋದೀತು ಅಂತ, ಅರಗಿಸ್ಕೊಳ್ಳೋಕೆ, ಅಡಿಕೇಲೆ ತಂದಿಟ್ಟಿದಾರೆ, ಬೆಳ್ಳಿ ತಟ್ಟೇಲಿ, ಮರೆತ್ಬಿಟ್ಟೇವೂ ಅಂತ, ಮಂಚದ್ಮೇಲೇ, ಹಾಸಿಗೇಲಿ ! (ತಟ್ಟೆ ಎತ್ತಿ ನೆಲಕ್ಕೆ ಕುಕ್ಕುವನು)

ಸರೋಜ : ಅಯ್ಯಯ್ಯೊ, ಹೋಯ್ತು ಹೋಯ್ತು ...

ಭೀಮು : ಹೋಗ್ಲಿ, ಹಾಳಾಗ್ಹೋಗ್ಲಿ........(ಹಾಸಿಗೆ ನೋಡಿ) ಹಯ್ಯೋ, ಸುಪ್ಪತ್ಗೇನೇ ! ಏನೀ ಹಾಸಾಟಾ ? ನೋಡ್ ಸರೋಜ, ನಾನೂ ಈ ಹೈದರನ್ನ ಕೆಲ್ಸಕ್ಸೇರ್ಸಿದ ದಿವಸದಿಂದ ಹೊಡ್ಕೋತಾ ಇದೇನೇ....ಈ ಬಿಳೀ ದುಪಟಿಗಳ್ಹಾಸ್ಬೇಡ್ವೋ ! (ಕಿತ್ತಿಸೆಯುವನು) ಎರಡೆರಡು ದಿಂಬುಗಳು ನನಗ್ಬೇಡ. (ಎಸೆಯುವನು). ಈ ರಗ್ಗುಗ್ಳು ನನಗಾಗೋಲ್ಲ.....(ಇನ್ನೊಂದು ದಿಕ್ಕಿಗೆ ಬಿಸುಟು) ಇಷ್ಟ್ ದಪ್ಪ ಮೆತ್ತೆ ಸಹಿಸೋಲ್ಲ .(ನೆಲಕ್ಕೆಳೆದು) ಈ ಪಟ್ಟೆ ಪಟ್ಟೆ ಜಮುಖಾನೆ ನನ್ನ ಕಣ್ಣಿಗೆ ರಾವು(ಅದನ್ನೂ ಎಳೆದುಹಾಕಿ) ಅಂತ....ಕೇಳ್ತಾನ್ಯೇ ಹೇಳಿದ್ಮ್ಯಾತಿನ್ನ ? ಮಾತೆತ್ತಿದ್ರೆ ವಜೀದಲ್ಲಿಷಾ ಹೀಗೇ ಹಾಸ್ಗೆ ಹಾಕ್ಕೊಳ್ತಿದ್ದಿದ್ದು ಅಂತಾನೇ ! ತಲೆಹರಟೆ. ತಲೆಹರಟೆ. ಆಳುಗಳಿಗೆಲ್ಲಾ ತಲೆಹರಟೆ ! ಬೆಳಗಾಗ್ಲಿ, ಒಬ್ಬೊಬ್ಬರಿಗಾಗಿ ಹಬ್ಬಮಾಡ್ತೇನೆ. ನೀ ಮಲಗ್ಕೊ, ಸರೋಜ. (ಅವಳನ್ನು ಮಂಚದಮೇಲೆ ಕೂಡಿಸಿ) ಓ, ಬರೀ ಮಂಚಾನೋ, I am sorry. ಏಳು. (ಎಳೆದಿತ್ತ ನಿಲ್ಲಿಸಿ) ಈ ಜಮುಖಾನ (ಹಾಸಿ) ಈ ದಿಂಬು (ಇಟ್ಟು) ಸಾಕು, ಮಲಗ್ಕೊ, ನಿದ್ದೇಗೇನು, ಕಣ್ಮುಚ್ಚಿದ ತಕ್ಷಣ ಬಂದ್ಬಿಡತ್ತೆ, ಸುಸ್ತಿಗೆ ...exhaustionಗೆ ....(ಮಂಚದಮೇಲೆ ಕೂಡಿಸಿ ಒಂದು ದುಪಟಿ ಕೊಡುತ್ತಾ) ಇದು ಹೊದ್ಕೊ................ ಅ ಬ್ಬ ಬ್ಬ ಬ್ಬ ಬ್ಬ ಬ್ಬ.... ದಿನಾ ಹೀಗೇ ಆಗ್ಹೋದ್ರೆ Horribleಉ........ (ಒಂದು ಪುಸ್ತಕ ಎಳೆದುಕೊಂಡು easy chair ನಲ್ಲಿ ಕೂಡುವನು) ಮಲಗ್ಕೋ ! (ಸರೋಜ ಮಲಗುವಳು ....... Black out for Twenty-seconds ··· Lights on)

ಸರೋಜ!.... ಸರೋಜಾ!.... ಸರೋಜಾ! ....(ಸಮೀಪಿಸಿ ನೋಡಿ) ಪಾಪ .... ನಿದ್ದೆ! ಹ್ಹುಂ!....(ವೀಣೆ ತಂದಿಟ್ಟುಕೊಂಡು ಬಾರಿಸುತ್ತಾ)

"ಆಗಮಶಾಸ್ತ್ರಮು ಅನ್ನಿಯು ಚೆದಿವಿನ"

(ಎರಡು ಮೂರು ಸಂಗತಿ ಸರಿಯಾಗಿ ಹಾಡಿ...ಯೋಚಿಸಿ....ಅದು ಪ್ರಯೋಜನವಿಲ್ಲವೆಂದು ತಲೆಯಾಡಿಸಿ ವೀಣೆ ತಲೆಕೆಳಕನಾಗಿ ತಿರುಗಿಸಿಕೊಂಡು ಶೃತಿ ಕೆಡಿಸಿಕೊಂಡು ಅಶುದ್ಧವಾಗಿ ಹಾಡಲುಪಕ್ರಮಿಸಲು)

ಸರೋಜ: (ಎದ್ದುಕುಳಿತು) ಏನಿದು ?

ಭೀಮು: Back-ground Music. ನಿದ್ದೆ ಬಂದಿದ್ದ್ಹಾಗಿತ್ತು, ಇನ್ನೂ ಚೆನ್ನಾಗ್ಬರ್ಲಿ ಅಂತ, Cinemaಗ್ಳಲ್ಲಿ "ಸೋಜ ರಾಜಕುಮಾರಿ, ಮಲಗು ಮಲಗೆಲೆ ಮಡದಿ'' ಹಾಡ್ತಾರಲ್ಲ, ಹಾಗೆ, ಆ ತರಹಾ....

ಸರೋಜ: Cinemaಗ್ಳಲ್ಲಿ ನಿಮ್ಮ್ಹಾಗ್ಹಾಡೋಲ್ಲ....ಶುದ್ಧ ತಪ್ಪು ತಪ್ಪಾಗಿ.

ಭೀಮು: ನಾನ್ಹಾಡೋದು ತಪ್ಪೂ? ನನ್ನ ಸ್ವಂತ Composition ಅಲ್ಲ, ಸರೋಜ, ಅದು. ತ್ಯಾಗರಾಜಂದು. ಅವನು ಬರೆದಿರೋದೇ ತಪ್ಪೇ ?

ಸರೋಜ: ಅವನು ಬರೆದಿರೋದ್ಯಾಕೆ ತಪ್ಪಾದೀತು? ನೀವರಚ್ತಿರೋದು ತಪ್ಪು....ಅಪಶೃತಿ.

ಭೀಮು: ಅರಚ್ತಿದೇನ್ಯೇ? ಅಪಶೃತಿಯೇ? ಮತ್ಯಾಕೆ ನಾ ನ್ನಿನ್ನ ವೀಣೇನಿಟ್ಕೊಂಡ್ಕೂತಿರೋದು? ನನ್ನ ಗಂಟ್ಲಿಗೆ guide ಮಾಡ್ಲೀಂತಲ್ವೇ?

ಸರೋಜ: ಓ! ಆ ವೀಣೆ ಇಟ್ಕೊಂಡ್ಕೂತಿರೋ ಲಕ್ಷಣ ಒಂದೇ ಸಾಲ್ದೇ, ತಲೆಕೆಳಕನಾಗಿ!

ಭೀಮು: ಆ? ತಲೆಕೆಳಕ್ಕಾಗಿಟ್ಕೊಂಡಿದೇನ್ಯೇ?........ಓ.... ... ಇದ್ದ್ಹೀಗ್ಹೀಗಿರ್ಬೇಕೂಂತ್ಕಾಣತ್ತೆ....(ಸರಿಯಾಗಿಟ್ಟುಕೊಂಡು) yes. yes. ಅದಕ್ಕೇ ತಂತಿ ಮೀಟೋದಷ್ಟು ಕಷ್ಟ ಆಯ್ತು. ಈ ನಿನ್ನ ವೀಣೆಮಾಡ್ದೋನೇ ಬುರುಡೆಗಳ್ನ ತಲೆಕೆಳಕ್ಕಾಗಿಟ್ಬಿಟ್ಟಿದಾನೇಂತಿದ್ದೆ.

ಸರೋಜ: ಪಾಪ, ನಿಮ್ಮಷ್ಟ್ ಜಾಣ್ತನ ಅವನ್ಗೆಲ್ಲಿದ್ದೀತು? ಅಲ್ದೆ ನಿಮ್ಮ ಸಂಚು ಶಾರೀರಕ್ಕೆ guide ಮಾಡೋಕೆ, ಆ ಸಣ್ಣ thin ತಂತಿಗಳಿಗೆ ಶಕ್ತಿ ಸಾಲ್ದು....ನಿಮ್ಮೂರ್ನಲ್ಲಿ Millಉಗಳ್ಯಾವ್ದೂ ಇಲ್ವೋ?

ಭೀಮು: ಇಲ್ಲ....ಯಾಕೇ?....ಓ, ಅದರ whistleಗೆ ನನ್ನ ಶೃತಿ ಸರ್ಹೋಗ್ಬಹುದೋ ಏನೋ ಅಂತ್ಲೋ? ಸರೋಜ, ನನ್ನ ಶಾರೀರ ಸಂಚಲ್ಲ, ಒಪ್ಕೊಂಡೆ, ಸ್ತ್ರೀಯರ ಶಾರೀರ ಸಂಚು, ಪುರುಷರ ಶಾರೀರ, ಗಂಡಸ್ರ ಶಾರೀರ, ಕಂಚು! ಆದ್ರಿಂದ ಈ thin ತಂತೀಸ್.......condemn! (ವೀಣೆ ಕೆಳಗಿಟ್ಟು) ಶೃತಿಯೇ ಬೇಡ. ಹಾಗೇ ಹಾಡ್ತೇನೆ....."ಆಗಮಶಾಸ್ತ್ರಮು"

ಸರೋಜ: ಅಯ್ಯಯ್ಯೋ....(ಕಿವಿಗಳಲ್ಲಿ ಬೆರಳುಗಳಿಟ್ಟುಕೊಳ್ಳಲು)

ಭೀಮು: ಓಹೋ, ನೀನ್ಹಾಡ್ದಾಗ ನಾನ್ ಕಿವೀಲಿ ಬೆಟ್ಟಿಟ್ಕೊಂಡಿದ್ದೆ ಅಂತ್ಲೋ?

ಸರೋಜ: ಅಲ್ಲ, ಅಲ್ಲ. ನಿಜವಾಗ್ಲೂ ನಿಮ್ಮ ಸಂಗೀತ ಕೇಳೋ ಕಾಗೋಲ್ಲ. ನಾಶವಾಗ್ಹೋಗತ್ತೆ.

ಭೀಮು: (ವೀಣೆಸಮೇತ ಬಾಗಿಲಿಗೆ ಬಂದು) ಸರೋಜ, ದಯವಿಟ್ಟು ಉದ್ಧಾರ ಮಾಡು.

ಸರೋಜ: ಏನ್ ಉದ್ಧಾರಮಾಡೋದು? ಹಸಿವಿಗೆ ಪ್ರಾಣಹೋಗ್ತಾ ಇದೆ. ಮಾತಾಡೋಕೇ ಶಕ್ತಿ ಇಲ್ಲ.

ಭೀಮು: ಸರೋಜ, ನಾನೂ ನಿನ್ನ ಜೊತೇಗೇ ಉಪ್ವಾಸಾ ಇದೇನೇ ಅನ್ನೋದನ್ನ ಮರೀಬೇಡ.

ಸರೋಜ: ........ಹೋಗ್ಲಿ, ಕೊಡಿ........ (ವೀಣೆ ತೆಗೆದಿಟ್ಟುಕೊಂಡು, ತಲೆಗೂದಲುಗಳ ಜಿಡ್ಡನ್ನು ಉಗುರಿಗೆ ಹಚ್ಚಿಕೊಂಡು, ಶೃತಿ ಸರಿಮಾಡಿಕೊಳ್ಳಲು)

ಭೀಮು: ಸರೋಜ, ಸರೋಜ, ಸ್ವಲ್ಪ ಹಾಗೇ ಇರು.

ಸರೋಜ: ಆ?

ಭೀಮು: ಆ ಹ ಹ ಹ ಹ....ಜೋಯಿಸ್ರ್ಹೇಳಿದ್ದು ಸುಳ್ಳಲ್ಲ.

ಸರೋಜ: ಏನು?

ಭೀಮು: ನೀನು "ವೀಣೆ ಹಿಡಿದ್ಕೊತ್ರೆ ಸತ್ಯಲೋಕದಿಂದ ಇಳಿದ್ಬಂದ ಸರಸ್ವತೀನೇ'' ಅಂದಿದ್ರು....

ಸರೋಜ: ಸಾಕ್ಸುಮ್ನಿರಿ....ನಿಮ್ಗೊಗಳ್ಕೆ ಏನೂ ಬೇಕಿಲ್ಲ....ನುಡಿಸ್ಲೇ ಬೇಕೇನು ?

ಭೀಮು: ಹೌದು. ನಿನ್ನ ಸಂಗೀತ ನಾನ್ಕೇಳ್ಬೇಕು. ಇಲ್ಲಾ ನನ್ನ ಸಂಗೀತ ಕೇಳೋಕೆ ನೀನು ತಯಾರಾಗ್ಬೇಕು.

ಸರೋಜ: ಅಯ್ಯೋ, ಹಾಗಾದ್ರೆ ತಾವು ದಯವಿಟ್ಟು ಸುಮ್ನೆ ಕೂತ್ಕೊಳ್ಳಿ, ಧರ್ಮಕ್ಕೆ. "ಆಗಮಶಾಸ್ತ್ರಮು ಅನ್ನಿಯು ಚೆದಿವಿನ''(ನುಡಿಸಲು)

ಭೀಮು: ಆ ಕೋಮಲ ಕಂಠದಿಂದ ಶಬ್ದಾನೂ ಹೊರಡಿಸಿ ವರ ಕೊಡೀ....

ಸರೋಜ: Flatteryಗೆ ನಿಮಗೆ ಯಾವ University Docto, rate ಕೊಡ್ತೋ ಗೊತ್ತಾಗೋಲ್ವೇ! "ಆಗಮಶಾಸ್ತ್ರಮು ಅನ್ನಿಯು ಚೆದಿವಿನ'' (ನುಡಿಸಿಕೊಂಡು ಹಾಡಲು)

ಭೀಮು: ಅ ಹ ಹ ಹ ಹ. ನಂಗೊತ್ತು ಆ melody ಹಾಗೇ ಹೋಗ್ಬೇಕೂಂತ. ಆದ್ರೆ ಹಾಗೇ ಹೋಗ್ಸೋಕೆ ನನಗೆ ಸಾಧ್ಯವಿಲ್ಲ ಅಷ್ಟೆ. ಗೊತ್ತದು ಬ್ರಹ್ಮನಿಗೆ. ಅದಕ್ಕೇ ವೀಣೇನ ಸರಸ್ವತೀ ಕೈಯಿಗೆ ಕೊಟ್ಟ. ಇಲ್ದಿದ್ರೆ ತಾನೇ ಇಟ್ಕೊಂಡ್ಕೊತ್ಬಿಡ್ತೆ ಇರ್ತಿದ್ನೇ ? Continue please. (ಷರಟಿನತೋಳು ಮಡಿಚಲು)

ಸರೋಜ: ಅದೇನು ?

ಭೀಮು: ತಾಳ, ತಾಳ....

ಸರೋಜ: ದಯವಿಟ್ಟು ಸುಮ್ನೆ ಕೂತ್ಕೊಂಡ್ಕೇಳಿ. ನೀವು ತಾಳ ಬೇತಾಳ ಏನೂ ಹಾಕೋಕ್ಹೋಗ್ಬೇಡಿ.

ಭೀಮು: All right. ನಿನ್ನ ಸಂಗೀತ ನನ್ನ ತಾಳಜ್ಞಾನಾನ ಕೆಡ್ಸಿದ್ರೂ ಕೆಡಿಸ್ಬಿಡ್ಬಹುದು. ಹುಂ....

(ಸರೋಜ ಪೂರ್ತಿ ಹಾಡಿ "ಶ್" ಎಂದು ಸಿಟ್ಟುಸಿರಿ ವೀಣೆ ಕೆಳಗಿಳಿಸಿ)

ಸರೋಜ: ಸಾಕಾಗ್ಹೋಯ್ತು !

ಭೀಮು : Sorry, Saroja! ಆದ್ರೆ ನನಗೆ ಹೊಟ್ಟೆತುಂಬಿದ್ಹಾಗಾಯ್ತು. ನಿನ್ನ ಸಂಗೀತಕ್ಕಿಂತ ಬೇರೆ ಊಟವೆ ? (ನೇಪಥ್ಯದಲ್ಲಿ ಶಂಕರ—"ಸ್ವಾಮೀ") ಯಾರೋ ಅದು ? (ಬಾಗಿಲಿಗೆ ಹೋಗಿ) ತಿರಿಗೀ ಬಂದ್ಯೇನೋ ? ತೊಲಗಾಚೇಗೇ !....(ಶಂಕರನಿಗೆ ಮಾತ್ರ ಕೇಳುವಂತೆ) ಅಲ್ಲಿಟ್ಟೆಟ್ಹೊರಟ್ಹೋಗೋ. (ಗಟ್ಟಿಯಾಗಿ) ಇನ್ನೊಂದ್ಸಾರಿ ಹೊಸಲ್ಮೆಟ್ಟೀಯೋ, ಹಲ್ಲುಗ್ಳುದರಿಸ್ಬಿಡ್ತೇನೆ. (ಹಿಂತಿರುಗಲು)

ಸರೋಜ: ಯಾರದು ?

ಭೀಮು: ಇನ್ಯಾರು ? ಅವ್ನೇ. ನಿಂಗೆ ಔತಣದ ಅಡಿಗೆ ಮಾಡಿ ಬಡ್ಸಿದ್ನಲ್ಲ, ಪಾಕಶಾಸ್ತ್ರ ನಿಪುಣ, ಶಂಕರ, ಪಾರ್ವತೀಪತಿ, ಕೈಲಾಸವಾಸಿ, ಅವ್ನೇ.

ಸರೋಜ: ಸರಿಹೋಯ್ತು, ಇಷ್ಟೊತ್ತೂ ಕೇಳಿ ಈಗ ಹೀಗೆ ಪ್ರಾರಂಭಮಾಡಿದ್ರೇ....

ಭೀಮು: ಏನ್ಹೇಳಿದ್ದು ?

ಸರೋಜ: ಶಾಂತಮುಲೇಕ ಸೌಖ್ಯಮುಲೇದು ಅಂತ.

ಭೀಮು: ಓ, ಅವೇ ? ಏನ್ಮಾಡೋದ್, ಸರೋಜ, ಹಾಳು ಹುಟ್ಟುಗುಣ, ಬಿಟ್ಹೋಗೂ ಅಂದ್ರೆ ಹ್ಯಾಗ್ಹೋಗತ್ತೆ ? ನಿನ್ನ ಶಾಂತಸ್ವಭಾವ ನನ್ನ ಶಾಂತಸ್ವಭಾವ ಎರಡೂ ಒಂದೇತರಹ....ನಿಮ್ಮೂರ್ನಲ್ಲಿ....

ಸರೋಜ: ನನ್ನ 'ಶಾಂತ ಸ್ವಭಾವ'ದ್ಮೇಲೆ comment ಮಾಡ್ದೋರೊಬ್ರೂ ನಿಮ್ಮನ್ನ ನೋಡ್ಲಿಲ್ಲ........ನಾನ್ ನನ್ನ ತಂಗಿಹಾಗೆ ಅಲ್ಲ ಅಂತ ಒಪ್ಕೋತೇನೆ. ಆದ್ರೆ ನಿಮ್ಮಲ್ಲಿ ಲಕ್ಷಪಾಲಿನಲ್ಲಿ ಒಂದ್ಪಾಲಿಲ್ಲ.

ಭೀಮು: ಹಾಗಾದ್ರೆ ಆ ಒಂದ್ಪಾಲಿನ್ನ ಸರಿಪಡಿಸ್ಕೊಳ್ಳೋದೇ ಎಷ್ಟು ಕಷ್ಟ ಅನ್ನೋದು ನಿನಗೆ ಗೊತ್ತಿರ್ಬೇಕು. ಅದಕ್ಕೆ ಲಕ್ಷದಷ್ಟಿರೋ ನನ್ನ ಸ್ವಭಾವ ಹ್ಯಾಗೆ ಸರಿಹೋದೀತು ?

ಸರೋಜ: ಸರಿಹೋಗಿಸ್ಬೇಕು. ಇಲ್ದಿದ್ರೆ ಇನ್ಮೂರುದಿನ ಜೀವದಿಂದ ಇರೋಕಾಗೋಲ್ಲ.

ಭೀಮು: ಅದೆಲ್ಲಾ ನಂಗೂ ಗೊತ್ತು, ಸರೋಜ. ಆದ್ರೆ ಮಾಡೋದೇನು, solution ಹೇಳು.

ಸರೋಜ: Solution ಏನು, ನಿಮ್ಮ ಹುಚ್ಚಾಟಾನ controlನಲ್ಲಿ ಟ್ಕೊಳ್ಳೋದೇ solutionಉ.

ಭೀಮು: ನನ್ನ ಹುಚ್ಚಾಟಾನ? All right. ಇಟ್ಕೊಳ್ಳೋಣ. ನೀನು ಮೊದಲು ಹದ್ಬಸ್ತಿನಲ್ಲಿಟ್ಕೊಂಡು ಅದು possibleಉ ಅಂತ ತೋರಿಸ್ಕೊಡು. ಆಮೇಲೆ ಅದಕ್ಕೆ ಒಂದು ಲಕ್ಷದಷ್ಟು control ಹೆಚ್ಚಾಡ್ಕೊಂಡು ನಾನೂ ಹದ್ಬಸ್ತಿನಲ್ಲಿಟ್ಕೊಳ್ಳೋಕೆ ಪ್ರಯತ್ನಪಡ್ತೀನಿ. ಒಂದ್ agreement ಮಾಡ್ಕೊಳ್ಳೋಣ.

ಸರೋಜ: Agreementಉ ?

ಭೀಮು: ಹೂ, ಕರಾರು, ಒಪ್ಪಂದ, ಒಂದು ತರಹಾ treatyಅನ್ನು. The Bed Chamber Pact of 1947 ಅನ್ನೋಣ. ಹಾಕು ಭಾಷೆ.

ಸರೋಜ: ಭಾಷೆ? ಥೂ, ನಾವು ಏನ್ ಎಳೇಮಕ್ಳೇ ?

ಭೀಮು: ಬೆಳೆದ್ಮಕ್ಳೇ ಆದ್ರೂ ಭಾಷೆ ಬೇಕೇ ಬೇಕು....formality ಬಿಡೋಕಾಗೋಲ್ಲ, ಸರೋಜ.

ಸರೋಜ: All right ....ಹು.... (ಕೈನೀಡುವಳು)

ಭೀಮು: ನನ್ನ ಷರತ್ತುಗಳ್ನೆಲ್ಲಾ ಹೇಳ್ಬಿಡ್ತೀನಿ.

ಸರೋಜ: ಹು.

ಭೀಮು: ಹೇಳು. ನಾನು....

ಸರೋಜ: ನಾನು....

ಭೀಮು: ಇನ್ಮೇಲೆ....

ಸರೋಜ: ಇನ್ಮೇಲೆ....

ಭೀಮು: ಯಾವಾಗಲೂ....

ಸರೋಜ: ಯಾವಾಗಲೂ....

ಭೀಮು : ಚಂಡಿತನ ಮೊಂಡ್ತನ ಮಾಡ್ದೆ........ಹೂ ಹೇಳು....

ಸರೋಜ: ಚಂಡಿತನ ಮೊಂಡ್ತನ ಮಾಡ್ದೆ....

ಭೀಮು : ಶಾಂತರೀತಿಯಿಂದ....

ಸರೋಜ: ಶಾಂತರೀತಿಯಿಂದ....

ಭೀಮು : ನಗ್ತಾ ನಗ್ತಾ

ಸರೋಜ : ನಗ್ತಾ ನಗ್ತಾ

ಭೀಮು : ಇರ್ತೀನೇ !

ಸರೋಜ : ಇರ್ತೀನೇ.

ಭೀಮು : ಆಯ್ತು. (ಕೈ ಬಿಡಿಸಿಕೊಂಡು ದೂರ ಬರಲು)

ಸರೋಜ : ಓಹೋಹೋ, pact ಅಂದ್ಮೇಲೆ ಎರಡು partiesದೂ ಷರತ್ತುಗ್ಳಿರ್ಬೇಕು. ತಾವೂ ಭಾಷೆಹಾಕಿ....

ಭೀಮು : Yes, Yes, ಮರೆತ್ಬಿಟ್ಟಿದ್ದೆ.... All right. ಹೇಳು. (ಕೈಕೊಡುವನು)

ಸರೋಜ: ನಾನು ...

ಭೀಮು: ನಾನು....

ಸರೋಜ : ಇನ್ಮೇಲೆ....

ಭೀಮು : ಇನ್ಮೇಲೆ....

ಸರೋಜ: ಆಳುಗಳ್ಮೇಲೆ ಕಾಳುಗಳ್ಮೇಲೆ....

ಭೀಮು : ಆಳುಗಳ್ಮೇಲೆ ಕಾಳುಗಳ್ಮೇಲೆ....

ಸರೋಜ: ಅಡಿಗ್ಯೋನ್ಮೇಲೆ....

ಭೀಮು : ಅಡಿಗ್ಯೋನ್ಮೇಲೆ....

ಸರೋಜ: ರೇಗಾಡೋಲ್ಲ ...

ಭೀಮು : ಅವನಡಿಗೆ ಸರಿಯಾಗ್ಮಾಡ್ಡಿ ಹೋದ್ರೆ ?

ಸರೋಜ : ನಾನ್ಮಾಡ್ತೀನೆ.

ಭೀಮು : ಹಾಗಾದ್ರೆ ರೇಗಾಡೋಲ್ಲ.

ಸರೋಜ : ಯಾವಾಗ್ಲೂ....

ಭೀಮು : ಯಾವಾಗ್ಲೂ....

ಸರೋಜ : ಶಾಂತರೀತಿಯಿಂದ....

ಭೀಮು : ಶಾಂತರೀತಿಯಿಂದ....

ಸರೋಜ : ಇರ್ತೀನೆ—ನಗ್ತಾ ನಗ್ತಾ ಇರ್ತೀನೆ.

ಭೀಮು: ಇರ್ತೀನೆ. (ನಗುತ್ತಾ) ನಗ್ತಾ ನಗ್ತಾ ಇರ್ತೀನೆ.

ಸರೋಜ : (ಕೈ ಎಳೆದುಕೊಂಡು) ಆಯ್ತು.

ಭೀಮು : ಆಯ್ತೋ ?

ಸರೋಜ : ಹು.

ಭೀಮು : Very good. ಈಗ್ನಾವ್ಮಾಡ್ಕೊಂಡಿರೋ pactಉ ಎಲ್ಲಾ pactಗಳ್ಹಾಗೇ meaningless ಓ, ನಿಜವಾಗ್ಲೂ ಅದ್ರಲ್ಲೇ ನಾದ್ರೂ ಸತ್ವವಿದ್ಯೋ test ಮಾಡ್ಬಿಡೋಣ. ಸಣ್ಣ testಉ.

ಸರೋಜ : ಹು.

ಭೀಮು : ಆ ಊದುಕಡ್ಡಿಗಳ್ನೆಲ್ಲಾ ಹಚ್ಚು.

ಸರೋಜ : ಹ ಹ ಹ ಹ....ಆಗಲಿ....(ಸರಿಯಾಗಿಟ್ಟು ಹತ್ತಿಸುತ್ತಾ) ತಾವು....

ಭೀಮು : ಅಪ್ಪಣೆ (ಕೈಕಟ್ಟಲು)

ಸರೋಜ : ಆ ಹಾಸ್ಗೆಗಳ್ನ ಸರಿಯಾಗ್ಹಾಸಿ (ಭೀಮು ಕುಳಿತಿದ್ದ Easy Chair ನ್ನು ಆಚೆಗೆ ತಳ್ಳುವಳು)

ಭೀಮು : ಹೂ............ಪಟ್ಟೆ ಹಟ್ಟೆ ಜಮುಖಾನಾನೇ ವಾಸಿ, ಕೊಳೆ ಕಾಣೋಲ್ಲ....ಮೆತ್ತೆಗ್ಳು ದಪ್ಗೇ ಇರ್ಬೇಕು....ಮೈಗೊತ್ತತ್ತೆ ಇಲ್ದೆಹೋದ್ರೆ.... ಎರಡೆರಡು ದಿಂಬುಗಳಲ್ಲಿ advantage ಜಾಸ್ತಿ, ಎತ್ರ ಹ್ಯಾಗಂದ್ರೆಹಾಗೆ

adjust ಮಾಡ್ಕೊಳ್ಬಹುದು....Bed-sheet ಉ, ಸರೋಜ, ಬಿಳೀದೇ bestಉ....ಹಾಲು ಚೆಲ್ಲಿದ್ಹಾಗಿರತ್ತೆ;....Fine rugs ....fine rugs.... ಛಳೀಗೆ....ಬಲು ಹಿತ........(ಹಾಸಿದ್ದು ಪೂರ್ತಿಯಾಗಲು)

**ಸರೋಜ :** ಆ ಪನ್ನೀರ್ದಾನಿ ಅಲ್ಲಿಡಿ.

**ಭೀಮು :** ........ತಂದೆ ....... ಇಟ್ಟೆ........ ನೀನಾ ಅಡ್ಕೆಲೀ ತಟ್ಟೆ ತಂದಿಲ್ಲಿಡು.

**ಸರೋಜ :** ಉ ಹು ಹು ಹು ಹು ಹು ಹು........ಅಷ್ಟು ಒರಟಾಗ್ಹೇಳಿದ್ರೆ ಪ್ರಯೋಜನವಿಲ್ಲ........ಆಳುಗಳಿಗ್ಹೇಳಿದ್ಹಾಗ್ಹೇಳ್ತಾ ಇದೀರಿ.

**ಭೀಮು :** ಅರಸೀಗ್ಹೇಳೋ ಹಾಗೆ ಮೆಲ್ಲಗೆ, soft ಆಗಿ, ನಯವಾಗ್ಹೇಳ್ಬೇಕು ?

**ಸರೋಜ :** ಹ ಹ ಹ ಹ ಹ ಹ.

**ಭೀಮು :** All right, ಪ್ರಿಯೇ.

**ಸರೋಜ :** ಅಯ್ಯೋ.

**ಭೀಮು :** ಪ್ರಾಣೇಶ್ವರೀ,

**ಸರೋಜ :** ಅಯ್ಯಯ್ಯೋ.

**ಭೀಮು :** ಪ್ರಾಣಕಾಂತೇ.

**ಸರೋಜ :** ಅಯ್ಯಯ್ಯಯ್ಯೋ.

**ಭೀಮು :** ಮನಮೋಹನಾಂಗೀ, ಆ ತಾಂಬೂಲದ ತಟ್ಟೆಯನ್ನು ಈ ಹಂಸತೂಲಿಕಾತಲ್ಪದ ಮೇಲೆ ತಂದಿರಿಸಲಾರೆಯಾ ?

**ಸರೋಜ :** ಥು, ಥು, ಥು, ಇದೇನೂ s ಂದ್ರೆ, ಹಾಳ್ನಾಟ್ಕದ style ಉ ?

**ಭೀಮು :** ಓಹೋ, ನಾಟ್ಕದ styleಉ ನಿನ್ಗೆ "ಹಾಳಾ"ಗ್ಹೋಯ್ತೇನು ? cinema style........

**ಸರೋಜ :** ಅಯ್ಯೋ, ಅದೂ ಬೇಡ.

ಭೀಮು : ಹಾಗಾದ್ರೆ........ಮನೆ style ಉ....ಊಂ........ನಿನ್ಹೆಸರು "ಸರೋಜ"........'ಸರೂ' ಅಂತನ್ನೋಗಿದ್ರೆ ಚೆನ್ನೋ, 'ರೋಜಿ' ಅಂತನ್ನೋಗಿದ್ರೆ ಮುದ್ದೋ ?

ಸರೋಜ : ಅಯ್ಯೋ, ಥೂ, ನೀವೇನಾದ್ರೂ ಕೂಗ್ಕೊಳ್ಳಿ.

ಭೀಮು : I vote for "ರೋಜಿ" (ಗಲ್ಲವಿಡಿದು) ರೋಜೀ, ಆ ಅಡ್ಗೆ ಲೇತಟ್ಟೆ ಅಲ್ಲೇಗೊಂಡ್ಹೋಗಿಡೇ !........ಸರಿಯೋ ?

ಸರೋಜ : ಅಯ್ಯೋ ನೀವ್ಹೋಗಿ ಸುಮ್ನೆ....ನನ್ನ.... (ಕೈ ಬಿಡಿಸಿಕೊಂಡು ತಟ್ಟೆ ತೆಗೆದುಕೊಂಡು ಹೋಗಿಡುತ್ತಾ) ಇಷ್ಟೆಲ್ಲಾ ಮಾತಾಡೋಕ್ಬರುತ್ತೆ........ಹಸ್ದ ಹೊಟ್ಟೇಲಿ ಅಡಿಕೇಲಿ ಏನ್ ಚೆಂದ ಅಂತ ತೋರೊಲ್ವೇನೋ ?

ಭೀಮು : ಹ ಹ ಹ ಹ (ಅವಳನ್ನು ಸಮೀಪಿಸಿ) ನೀನು ನನ್ನ ನಿಜ್ವಾಗ್ಲೂ ಹೇಳಿ ಮಾಡ್ಸಿದ ಧಡ್ಡ ಅಂತ ತಿಳ್ಕೊಂಡ್ಬಿಟ್ಟಿರೋ ಹಾಗಿದೆ. ಒಂದ್ನಿಮಿಷ.... ಬಂದೆ.

(ನಿಷ್ಕ್ರಮಿಸಲು, ಸರೋಜ ಅತ್ತಲೇ ನೋಡುತ್ತಿರುವಳು. ಭೀಮು ಚಪ್ಪಾತಿ tray ಮತ್ತು ಕಾಫಿ ಕೆಟಲ್ ಹಿಡಿದು "ಇಂದಿನ ದಿನವೇ ಸುದಿನ" ಬೇಗಡೆಯಲ್ಲಿ ಹಾಡುತ್ತಾ ಪ್ರವೇಶಿಸಲು ಸರೋಜ ಓಡಿ ಆವನ ಪಕ್ಕ ಸೇರಿ)

ಸರೋಜ : ಏನಿದು ?

ಭೀಮು : ಕಂದ, ರಾಗ ಕಾನಡ,.

ಸರೋಜ : ಕಾನಡ ? ಬೇಗಡೆ ಹಾಡ್ತಿದೀರಿ !

ಭೀಮು : ಬೇಗಡೆ ? ಕಾನಡ, ಸರೋಜ, ಕಾನಡ.

ಸರೋಜ : ಎಲ್ಲಾದ್ರೂ ಉಂಟೇ ? ನೀವ್ಹಾಡಿದ್ದು ಬೇಗಡೆ.

ಭೀಮು : ಓ ೀ ೀ ೀ, ನಿನ್ನ ಹಟ ನೀನ್ ಬಿಡೋಲ್ಲ. (ತಟ್ಟೆ ಕೆಟಲ್... ಎತ್ತಿ ಹಾಕುವಂತೆ ಮಾಡಲು)

ಸರೋಜ : (ತಡೆಯುತ್ತಾ) ಅಯ್ಯಯ್ಯೋ, ಅಲ್ಲ ಅಲ್ಲ, ನೀವ್ಹಾಡಿದ್ದು ಕಾನಡಾನೇ !

ಭೀಮು : ಆ? ಕಾನಡ? ಹಹಹಹಹ, ಅಲ್ಲಾ ಸರೋಜ, ನಾನೇನೊ ತಮಾಷೆಗೆ ಕಾನಡ ಅಂದ್ರೆ ನೀನೂ ಕಾನಡ ಅಂತ್ಲೇ ಒಪ್ಕೋತೀಯಾ ? ನಾನ್ಹಾಡಿದ್ದು ಬೇಗಡೇನೇ ಸರೋಜ, ಬೇಗಡೇನೆ. ಅಲ್ವೇ ?

ಸರೋಜ : ಹೌದು, ಹೌದು. ಬೇಗಡೇನೇ ನೀವ್ಹಾಡಿದ್ದು. ಶಂಕರಾಭರಣ ಅನ್ನಿ, ಶಂಕರಾಭರಣಾನೇ. ಅದ್ಹೋಗ್ಲಿ, ನಾನ್ಕೇಳಿದ್ದು ನಿಮ್ಮ ಸಂಗೀತ ಅಲ್ಲ, (ತಟ್ಟೆ ಕೆಟಲ್ ತೋರುತ್ತ) ಇದೂ.

ಭೀಮು : ಇದೇ. ಇದೂ. ಚಪ್ಪಾತಿ, ನಾಕ್ನಾಕು....ನಂಗೇ, ನಿಂಗೇ ಇದೂ, ಕಾಫಿ kettle ತುಂಬಾ, ನಿಂಗೇ ನಂಗೇ !

ಸರೋಜ : ಓ, ಇಲ್ಕೊಡಿ....ಇಲ್ಕೊಡಿ.... (ಆತುರ ತೋರಲು)

ಭೀಮು : ಹಾ ಹಾ ಹಾ....not so fast, please ವ್ಹೈ ಬೆಳಿದಷ್ಟು ಮಾತಿ ಇಳಿಯುತ್ತೇನೇ ?

ಸರೋಜ : ಉಹು.

ಭೀಮು : ನಾನು "fool" ಏನೇ ?

ಸರೋಜ : ಉಹು, ಉಹು.

ಭೀಮು : ಕಾಡುಮನುಷ್ಯ ಇರಬಹುದು ?

ಸರೋಜ : ಅಯ್ಯೋ ಅಲ್ಲ....ಹೋಗ್ಲಿ, ನಾನ್ ಕಾಡ್ಬೆಕ್ಕು, ಕೊಡೀ....

ಭೀಮು : (Left arm encircles her waist & as she is being led to the bed) Come on, my little wild-cat.

—— ತೆರೆ ——

ಅಂಕ ೪ ## ದೃಶ್ಯ ೧.

[ಬೆಂಗಳೂರು. ಒಂದು ರಸ್ತೆ. ಚಂದ್ರೂ ಮತ್ತು ಪುಟ್ಟಾಜೋಯಿಸರೂ ಭೆಟ್ಟಿಯಾಗುವರು]

ಚಂದ್ರು: ಓಹೋ, ಜೋಯಿಸ್ರೇ, ನಮಸ್ಕಾರ. ನಾನ್ನಿಮ್ಮನೇಗೇ ಹೊರ್ಟಿದ್ದೆ.

ಪು. ಜೋ: ಓಹೋ, ಅದೇನು? ಏನ್ ಸಮಾಚಾರಾ? ಭೀಮುಕಡೆಯಿಂದ ಕಾಗದ ಏನಾದ್ರೂ ಬಂದಿತ್ತೇ?

ಚಂದ್ರು: ಅವ್ನೇ ಬಂದಿದಾನೆ. ಅದಕ್ಕೇ ನಿಮ್ಮನ್ನ ಊಟಕ್ಕೆ ಕರ್ಕೊಂಡ್ಬಾ ಅಂತ್ಹೇಳಿದ್ರು ಹೊರ್ಟಿದ್ದೆ.

ಪು. ಜೋ: ನಮ್ಮ ಭೀಮೂ ಬಂದಿದಾನೇ? ಅದೇನೂ? ಇನ್ನೂ ಊರಿಗ್ಹೋಗಿ ಒಂದು ತಿಂಗ್ಳೂ ಆಗಿಲ್ಲ....

ಚಂದ್ರು: ಅದೇನೋ ಮೈಸೂರು, ಕನ್ನಂಬಾಡೀಗ್ಹೋಗ್ಬೇಕಂತೆ.... ಇವತ್ರಾತ್ರೀನೇ ಹೊರಟ್ಬಿಡ್ತಾರಂತೆ. ಅದಕ್ಕೋಸ್ಕರ ನಿಮ್ಮನ್ನೋಡ್ಬೇಕೂ ....ಹಾಗೇ ನಿಮ್ಮ ಮನೆಯೋರ್ನೂ ಹೇಳಿ ಬಾ ಅಂದ....

ಪು. ಜೋ: ಅವಳ್ಗೇ?.... ಉಂ....

ಚಂದ್ರು: ನೀವ್ಹೀಗೇ ಹೊರಟ್ಬಿಡಿ. ನಾನ್ಹೋಗಿ ಗಾಡೀಲಿ ಕರ್ಕೊಂಡ್ಬಂದ್ಬಿಡ್ತೇನೆ....

ಪು. ಜೋ: ಸರಿ....ಸರಿ....ಹಾಗೇಮಾಡು....ಅಂದ್ಹಾಗೇ....ಆ ಮಹಾರಾಯಗಿತ್ತಿ ಹೇಗಿದಾಳೋ?

ಚಂದ್ರು: ಯಾರು?....ಸರೋಜಾಬಾಯೀ?

ಪು. ಜೋ: ಹೂ, ಆ ಬಾಯೇ.

ಚಂದ್ರು: ಎಲ್ಲೋ, ನಾನ್ನೋಡ್ಲೇ ಇಲ್ಲ ಅವರ್ನ....

ಪು. ಜೋ: ಅದೇನೋ ಹಾಗಂದ್ರೆ, ಮನೇಗ್ಬಂದೋರ್ನ ನೋಡ್ಲಿಲ್ಲ ಅಂದ್ರೇನೋ ಅರ್ಥ....ಲೋ, ಚಂದ್ರಶೇಖರ....ನಂಗೊಂದ್ ಅನುಮಾನ.

ಚಂದ್ರು : ಏನು ?

ಪು. ಜೋ : ಏನಿಲ್ಲ. ಇವನ್ನ ಅವಳ್ಹತ್ರ ಒಂದ್ ತಿಂಗಳು ಸಂಸಾರ ಮಾಡೋದ್ರೊಳ್ಗೆ ಸಾಕಾಗ್ಹೋಗಿದ್ದಾನೆ. ಈ ನೆಪ ತೆಗ್ಕೊಂಡು ಕರ್ಕೊಂಡ್ಬಂದಿದಾನೆ. ನಾಳೆ ಏನೋ ಒಂದ್ ಉಪಾಯ ತೆಗೆದು ಅವಳ್ನಿಲ್ಲೇ ಬಿಟ್ಟಿದ್ಬಿಡ್ತಾನೆ ನೋಡ್ತಾ ಇರು. ನಾನ್ಹೇಳ್ದೆ, ಬೇಡಪ್ಪಾ ಅಂತ....ಕೇಳ್ತೀರಾ, ನೀವು ಹುಡುಗ್ರು ?

ಚಂದ್ರು : ಇಲ್ವೇ, ಹಾಗೇನೂ ಕಾಣ್ಲಿಲ್ವೇ. ಭೀಮು ಮೊದಲಿನ್ಹಾಗೇ ಇದಾನೆ....

ಪು. ಜೋ : ಅನ್ಮಾನ ಯಾಕೆ, ಕೇಳೇಬಿಡ್ತೇನ್ನಾನು. ನಂಗೇನ್ ಭಯವೇ ? ನಾಹೊರಡ್ಲಾ ಹಾಗಾದ್ರೆ........ ರಾವ್‌ಸಾಹೇಬ್ರು ಮನೇಲೇ ಇದಾರ್ರಾನೇ ?

ಚಂದ್ರು : ಹು, ಹು ... ಇದಾರೆ. ಭೀಮೂನೂ ಇದಾನೆ....ನಾ ಕರ್ಕೊಂಡ್ಬಂದ್ಬಿಡ್ತೇನವರ್ನ....

ಪು. ಜೋ : ಹೂ, ನಾನ್ನಿಕ್ಕಿದ್ದೆ, ಅಲ್ಲೀಗ್ಹೋಗಿದೇನೆ ಅಂತ ಹೇಳ್ಬಿಡು.

ಚಂದ್ರು : ಹೂ. (ಬೇರೆ ಬೇರೆಯಾಗಿ ನಿಷ್ಕ್ರಮಿಸುವರು)

## ದೃಶ್ಯ ೨.

(ರಾ. ರಾ. ಮನೆ. ಸೀನಿ ಊದಿನಕಡ್ಡಿ....ಎಲೆ ಅಡಿಕೆ ತಟ್ಟೆ ತಂದಿಟ್ಟು ನಿಷ್ಕ್ರಮಿಸಿದ ನಂತರ ಭೀಮು, ಚಂದ್ರು, ರಾ.ರಾ....ಮತ್ತು ಪು. ಜೋ. ತೇಗುತ್ತಾ, ಹೊಟ್ಟೆ ನೀವಿಕೊಳ್ಳುತ್ತಾ ಪ್ರವೇಶಿಸುವರು)

ರಾ. ರಾ : ಬನ್ನಿ....ಬನ್ನಿ....ಕೂತ್ಕೊಳ್ಳಿ....

ಭೀಮು : ಊಟ ಬಹಳ ಜಾಸ್ತಿ ಆಗ್ಹೋಯ್ತು.

ಪು. ಜೋ : ರಾವ್‌ಸಾಹೇಬ್ರ ಮನೆ ಊಟ ಕೇಳ್ಬೇಕೇನೋ? ಅದ್ರಲ್ಲೂ ಇವತ್ತು. ಹಿರೀಮಗಳು, ಮೊದಲ್ನೇ ಅಳಿಯ, ಮೊದಲ್ನೇಸಾರಿ ಮನೇಗೆ

ಬರ್‍ತಿದೀರಿ. ಅಂದ್ಹಾಗೇ ಅದೇನೋ ವ್ಯೈಸೂರ್‍ಗ್ಗೋ, ಕನ್ನಂಬಾಡೀಗೋ ಹೋಗ್ಬೇಕೂ ಅಂತ ಇದೀಯಂತೆ ?

ರಾ. ರಾ : ತೊಗೊಳ್ಳಿ....ಎಲೆ .... ಅಡಿಕೆ .... ಹೋಗ್ಬೇಕೂಂತಿದಾರೆ. ನನ್ನೂ ಬಾ ಅಂತ ಬಲವಂತಾ....

ಪು.ಜೋ : ಏನೋ ?

ಭೀಮು : ಹೂ.... ನೀವೂ readyಯಾಗಿದ್ರ್ರೇಳಿ........ಹೊರಟ್ಬಿಡೋಣ....ಲಕ್ಷ್ಮಮ್ನೋರು ಬಂದಿದಾರೆ ತಾನೇ, ಕಾಣ್ಲೇ ಇಲ್ಲ .... (ಚಂದ್ರೂಗೆ) ಹೇಳಿದ್ಯೇನೋ ?

ಪು. ಜೋ : ಹೇಳ್ದ, ಹೇಳ್ದ....ಗಾಡೀಲಿ ಕರ್‍ಕೊಂಡ್ಬಂದಾ ... ಎಲ್ಲೋ ಹೆಂಗಸ್ರ್ರಂಗಸ್ರು ಒಳಗಿದಾರೆ ಅಂತ್ಕಾಣತ್ತೆ. ಚಂದ್ರಶೇಖರಾನೂ ಬರ್‍ತಾನೇನೂ ?

ಭೀಮು : (ಚಂದ್ರೂಗೆ) ಏನೋ, ಏನ್ settle ಮಾಡ್ದಿ ?

ಚಂದ್ರು : ಇನ್ನೂ ಶಾಂತೂನ ಕೇಳಿಲ್ಲ....

ಭೀಮು : "ಶಾಂತೂನ ಕೇಳಿಲ್ಲ"? .... ಓಹೋ, consort ಹತ್ರ Consultation ಮಾಡ್ದೆ ನಿಮ್ಮ ರಥ ಹೊರಡೋಹಾಗಿಲ್ಲ ಅನ್ನು.... ಒಳ್ಳೇ ಗಂಡಿನ್ನ ಒಪ್ಪಿಸ್ಕೊಟ್ಬಿಟ್ನೇ ನಾನು.... ಫರವಾಗಿಲ್ಲ ಕಾಣೋ "H.P." ಅಭಿದಾನಾ....

ಪು.ಜೋ : ಏನೂ ?

ಭೀಮು : ಹಾಗಂದ್ರೆ, English ನಲ್ಲಿ, Hen Pecked ಅಂತ ; ಕನ್ನಡದಲ್ಲಿ ಹೆಂಡ್ತಿ ಸುತ್ತ ಪ್ರದಕ್ಷಿಣೆ ಹಾಕೋನು ಅಂತ....

ಪು. ಜೋ : ಅಹಹಹ .... ಅವನ್ನ್ಯಾಕಂತೀಯಾ, ನಿನ್ಹೆಂಡ್ತಿ ನಿನಗೆ ಹೆದರಿ ನಡಗ್ಕೊಳ್ತಾಳೋ ?

ಭೀಮು : ಯಾಕೆ, ನಾನೇನ್ ಛಳಿಯೋ ಜ್ವರವೋ ಅವಳ್ನ ನಡುಗ್ಸೋಕೇ ? ಅಂದ್ಹಾಗೇ, ಜೋಯಿಸ್ರೇ, ಅವತ್ತು, ಪಾಪ, ಏನೂ ತಿಳಿಯದ

ಆ ಸಾಧು ಪ್ರಾಣೀನ ಚಂಡಿ ಚಾಮುಂಡಿ ಕಾಳಿ ಕರಾಳಿ ಅಂತ ಏನೇನೋ ಹೇಳಿ ನನಗೆಂಥಾ ಮೋಸಮಾಡ್ಬಿಡ್ತಿದ್ರಿ ?

**ಪು. ಜೋ :** ಯಾಕೀಗೇನ್ ಅವಳು ಎಲ್ಲಾ ತಿಳಿದ ಅರುಂಧತಿ ಅಂತೀಯೇನು ?

**ಭೀಮು :** ಅವಳಜ್ಜಿ....ಗುಣದಲ್ಲಿ. ಪತಿವ್ರತೆಯರಲ್ಲಿ ಸೀತಾ ಸಾವಿತ್ರಿಯರು ಯಾಕೆ ಇವಳ್ಮುಂದೆ !

**ಪು. ಜೋ :** ಲೋ, ಲೋ....ಸಾಕೋ....ನಿನ್ನ ಹೆಂಡ್ತೀನ ನೀನ್ಹೊಗಳ್ದೆ ಇನ್ಯಾರು ಹೊಗಳ್ಬೇಕು ?

**ಭೀಮು :** ಹಾಗಾದ್ರೆ ನಾನ್ ಸುಳ್ಹೇಳ್ತೀನೆ ಅಂತೀರಾ ?

**ಪು. ಜೋ :** ಇಲ್ಲ, ನಿಜ ಹೇಳ್ತಾ ಇದ್ದಿ. ಏನ್ ರಾವ್‌ಸಾಹೇಬ್ರೇ, ಹುಟ್ಟಿದಾಗ್ನಿಂದ ನಾವ್ನೋಡ್ತಿದೇವೆ ಅವಳ್ನ .... ಅವಳ ಸ್ವಭಾವ ನಮಗೆ ಗೊತ್ತಿಲ್ವೇ ?

**ರಾ. ರಾ :** ಸಾರಿ....

**ಪು. ಜೋ :** ಮತ್ಹೇಳ್ತಾನಿವ್ನ........ಪುರಾಣ........ಆ ದರಿದ್ರ ಹುಟ್ಟು ಸ್ವಭಾವ....

**ಭೀಮು :** ಅದನ್ನ ಅಟ್ಟಿಸೋಕೆ ಕೈಲಿ ಶಕ್ತಿ ಒಂದಿದ್ರೆ, ಏನ್ಮಾಡತ್ತೆ, ಜೋಯಿಸ್ರೇ ಆ ಸ್ವಭಾವ ? ಬಾಲ ಮುದುರ್ಕೊಂಡೋಡ್ತಿರತ್ತೆ....ರೋಗಕ್ಕೆ ತಕ್ಕ remedy ಗೊತ್ತಿರ್ಬೇಕಷ್ಟೆ. ಈಗಿಷ್ಟೆಲ್ಲಾ ಮಾತ್ಯಾಕೆ ? ಪರೀಕ್ಷೆ ಮಾಡೇಬಿಡೋಣ. ಎಲ್ರೂ ನಮ್ಮ ನಮ್ಮ ಹೆಂಡ್ತಿಯೋರ್ನ ಕರೆಸೋಣ. ಯಾರು ಎದುರುತ್ರ ಹೇಳ್ದೆ ಬರ್ತಾರೋ, ಅಷ್ಟ್ರಲ್ಲೇ ತಿಳ್ಕೊಳ್ಳೋಣ, ಯಾರಿಗೆ ಗಂಡ ಅಂದ್ರೆ ಹೆಚ್ಚು regard ಇದೆ, ಮರ್ಯಾದೆ ಇದೆ ಅಂತ....ಒಂದ್ simple testಉ....ಆಗಬಹುದೋ ?

**ಪು. ಜೋ :** ಕರೆಸು, ನೋಡೋಣ. ಹುಂ....

**ಭೀಮು :** Challenge ನಂದು. ಆದ್ರಿಂದ ಕಡೇ ಸರದಿ ನಂದು. ತಾವೆಲ್ಲರ್ಗಿಂತ ಹಿರಿಯರು. ತಮ್ಮಿಂದ್ಱೇ ಆರಂಭವಾಗ್ಲಿ. ತಾವು ಮನಸ್ಸಲ್ಲಿ

ನೆನೆಸಿದ ತಕ್ಷಣ ಪ್ರತ್ಯಕ್ಷವಾಗ್ಬಿಡ್ಬೇಕು. ಆದ್ರೆ ಕಲಿಯುಗ, ಪ್ರತ್ಯಕ್ಷ, ಅದೃಶ್ಯ ....ಸಾಧ್ಯವಿಲ್ಲ....at least ಕರೆದ ತಕ್ಷಣಾನಾದ್ರೂ ಬರ್ಬೇಕು. ಕರೀರಿ.

ಚಂದ್ರು : ಅವ್ರೆಲ್ಲಿರ್ತಾರೋ ಇಷ್ಟೊತ್ತಿನತನಕ? ಆಗ಼್ಲೇ ನಮ್ಮ ಜೊತೇಲೇ ಒಳಗೆ ಊಟ ಆಯ್ತು. ಮನೇಗ್ಹೊರಟ್ಹೋಗಿರ್ಬೇಕು.

ಪು. ಜೋ : ಆ ? ನನ್ಹೆಂಡ್ತೀನೇ ? ಮನೇಗ್ಹೊರಟ್ಹೋಗಿರ್ತಾಳ್ಯೇ? ನನಗ್ಹೇಳ್ದೆ ? ನನ್ನ ಅಪ್ಣೆ ತೊಗೊಳ್ದೆ ?....... ಹ ಹ ಹ ಹ ಹ .... ಏನಂತ ತಿಳ್ಕೊಂಡ್ಬಿಟ್ಟಿದೀರ್ರೋ ನೀವು..ಎಲ್ಲಿ ಆ ಹುಡುಗ....ಸೀನಿ....ಸೀನಿ....ಸೀನೀ!

ಸೀನಿ : (ಪ್ರವೇಶಿಸಿ) ಸ್ವಾಮೀ....

ಪು. ಜೋ : ನಮ್ಮ ಇವ್ಳಿದಾಳಲ್ಲ....ಯಾರೂ....?

ಭೀಮು : ಅವರ ಹೆಂಡ್ತೀನೋ.

ಪು. ಜೋ : ಹು. ಅವಳ್ನ ನಾನ್ ಕರ್ದೆ, ಬರ್ಬೇಕಂತೆ ಅಂತ್ಹೇಳು. (ಸೀನಿ ನಿಷ್ಕ್ರಮಿಸಲು) ಅಲ್ಲ. ಅವ್ಳು ನಿಮ್ಮೀಗಿನ್ಕಾಲದ ಹುಡಿಗ್ಯೇರ್ಹಾಗೆ ಗಂಡ ಅಂದ್ರೆ ಅಷ್ಟ್ ಅಲಕ್ಷ್ಯ ಅಸಡ್ಡೆಮಾಡೋಳು ಅಂತ....(ಪ್ರವೇಶಿಸಿದ ಸೀನಿಕಡೆ ತಿರಗಿ) ಅಗೋ, ಬಂದ್ಳು....ನೀನೇನೋ? ಎಲ್ಲೋ?

ಸೀನಿ : ಅವರು ತಾಂಬೂಲ ತೊಗೊಂಡಾಗ಼್ಲೇ ಹೊರಟ್ಹೋದ್ರಂತೆ. (ಭೀಮು, ಚಂದ್ರು, ರಾ.ರಾ. ನಗಲು)

ಪು. ಜೋ : ಆ ?.... ಹೊರಟ್ಹೋದ್ಲೇ ? ಅಯ್ಯೋ! ಏನನ್ಯಾಯ ಏನನ್ಯಾಯ! ನನ್ನ ಮರ್ಯಾದೇನ ಇಷ್ಟು ದಿನಕ್ಕೆ ಧೂಳೀಪಟಮಾಡ್ಬಿಟ್ಟೇ....

ಭೀಮು : ಹೋಗ್ಲಿಕ್ಕೆ, ಜೋಯಿಸ್ರೇ, ಕೂಡಿ........ಸಮಾಧಾನ ಮಾಡ್ಕೊಳ್ಳಿ....ಲೋ, ಚಂದ್ರು, ನೀನ್ಕರ್ಕೊ !

ಚಂದ್ರು : ಸೀನೀ, ನಮ್ಮ ಶಾಂತೂನ ಸ್ವಲ್ಪ ಬಂದ್ಹೋಗು ಅಂತ್ಹೇಳ್ತೀಯಾ ?

ಭೀಮು: ಸ್ವ-ಲ್ಪ ಅಲ್ಲ, ಪೂರ್ತೀನೇ ಬರ್ಬೇಕು ಅಂತ್ಹೇಳೋ. (ಸೀನಿ ನಿಷ್ಕ್ರಮಿಸಲು) ಆ ಹ ಹ ಹ ಹ ಗಂಡ! (ಪ್ರವೇಶಿಸಿದ ಸೀನೀಗೆ) ಏನಂದ್ರೋ ಇವ್ರ ಮ್ಮಾವ್ರು ?

ಸೀನಿ : " ಯಾಕಂತೆ ಕೇಳ್ಕೊಂಡ್ಬಾ " ಅಂದ್ರು.

ಚಂದ್ರು : ಓ೯. (ಏಳಲು)

ಭೀಮು : (ಹಿಡಿದು ಕೂಡಿಸುತ್ತ) Too late, ಏನ್ಮಾಡ್ತೀಯಾ? .... (ಸೀನಿಗೆ) ಏನ್ಮಾಡ್ತಿದ್ರೋ ಅವ್ರು ?

ಸೀನಿ : ಅವ್ರು....ಎಲ್ಲಾ....ಅಡಿಕೇಲಿ ಹಾಕ್ಕೋತಾ ಕೂತಿದ್ರು....

ಭೀಮು : ಓ. ಸರಿ....ಈಗ....(ಮಾವನಕಡೆಗೆ ತಿರುಗಿ) ತಮ್ಮ ಸರದಿ....

ರಾ. ರಾ : ಓ....ಅಹೆಮ..ಉಹುಮ್..ಅವಳು ಏನ್ಕೆಲಸ್ದಲ್ಲಿರ್ತಾಳೋ:.

ಭೀಮು : ಏನೂ ಇಲ್ಲ, ಈಗ್ತಾನೇ ಹೇಳಿದ್ನಲ್ಲ ಸೀನಿ, ತಾಂಬೂಲ ಚರ್ವಣ ಆಗ್ತಾ ಇದೆ ಅಂತ....

ರಾ. ರಾ : ಸೀನೀ....ಅಮ್ಮಾವ್ರಿಗೆ....ಅದೇನೋ Urgent ಅಂತೆ.... ಈಕ್ಷಣ ಬರ್ಬೇಕಂತೆ ಅಂತ್ಹೇಳು ... (ಸೀನಿ ಹೋಗಲು ರಾ. ರಾ fidget ಮಾಡುತ್ತಿದ್ದು ಅವನು ಪುನಃ ಬರಲು) ಎಲ್ಲೋ ?.... ಯಾಕೋ ?

ಭೀಮು : ಏನಂದ್ರು, ಹೇಳು, ಭಯಪಡ್ಬೇಡ.

ಪು. ಜೋ : ಹೇಳೋ ಫರವಾಗಿಲ್ಲ...

ಸೀನಿ : "ಅವರ್ಗೆ....ಅವರ್ಗೆ........

ಭೀಮು : ಹು, ಹು....

ಸೀನಿ : " ಬೇರೆ ಕೆಲ್ಸ ಇಲ್ವೇನೋ, ಇಲ್ಲೇ ಬಂದ್ಕೇಳ್ಕೊಂಡ್ಹೋಗ್ಲಿ " ಅಂದ್ರು....

ಭೀಮು : ಮಾವ್ನೋರೇ....Very Sorry....

ಪು. ಜೋ : ಅಯ್ಯಯ್ಯೋ !....

ರಾ. ರಾ : ಹುಂ....(ಕುರ್ಚಿಯಲ್ಲಿ ಕುಳಿತುಬಿಡಲು)

ಭೀಮು: ಜೋಯಿಸ್ರೇ, ಆಯ್ತೋ ನಿಮ್ಮ ಪೂರ್ವಕಾಲದವರು, ಪಶ್ಚಿಮಕಾಲದವರು; ದಕ್ಷಿಣಕಾಲದವರು, ಎಲ್ರದೂ. ಈಗ್ನೋಡ್ತೀರೋ ನಮ್ಮ ಉತ್ತರಕಾಲದೋರ ಪೌರುಷ ?

ಪು. ಜೋ: ಹೂ, ನೋಡ್ತೇವೆ. ಅವಳು ಖಂಡಿತ ಬರೋಲ್ಲ, ನಂಗೊತ್ತು.

ರಾ. ರಾ: ಅವರಮ್ಮನ ಮಗ್ಳು .... ಇನ್ನೇನಾದ್ರೂ ಯುದ್ಧಾ ತದ್ಧಾ ಹೇಳ್ಕಳಿಸ್ತಾಳೆ.

ಭೀಮು: ಹ ಹ ಹ ಹ....ಹಾಗೇ ಅಂತೀರಾ ?....ನೋಡೋರಂತೆ.... ಸರೋಜಾ ! (ಭೀಮು ಹೊರತು ಎಲ್ಲರೂ ಬಾಗಿಲುಕಡೆ ನೋಡುವರು)

ಸರೋಜ: (ಒಳಗಿನಿಂದ " ಓ " ಎಂದು ಓಡಿಬಂದು ಪತಿಯ ಪಕ್ಕದಲ್ಲಿ ನಿಂತು ಮೃದುವಾಗಿ) ಯಾಕೆ ಕೂಗಿದ್ರಿ ?

ಭೀಮು: ಜೋಯಿಸ್ರೇ, ಈಗೇನ್ಹೇಳ್ತೀರಿ ?

( ಕ್ಷಣಕಾಲ ಎಲ್ಲರೂ ಮೌನ )

ಪು. ಜೋ: ಭೇಷ್.......ಭೇಷ್ !........ಒಪ್ದೆ ಕಾಣೋ ಒಪ್ದೆ. ಬೆನ್ನು ತಟ್ಟುತ್ತಾ) ಗಂಡ ಅಂದ್ರೆ ನೀನ್ಕ್ಯಾಣಯ್ಯ ಗಂಡ, ಬಹದ್ದೂರ್ ಗಂಡ!

(ಅಂಕದ ತೆರೆ)

-ಸಂಪೂರ್ಣ-

# ತಿದ್ದುಪಡಿ

| ಪುಟ | ಪಂಕ್ತಿ | ತಪ್ಪು | ಸರಿ |
|---|---|---|---|
| ೨೭ | ೩ | ಅವರೂ....ನನ್ನ | ಚಂದ್ರು:–ಅವರೂ....ನನ್ನ.... |
| ೩೦ | ೧೪ | Foot-pathಮೇಲೋ ಡಾಡೋ.... | Foot-pathಮೇಲೆ ಜನಗಳ ಪ್ರಾಣಉಳಿಸೋ planನಲ್ಲಿ– |
| ೫೬ | ೧೨ | angle | angel |
| ೫೮ | ೫ | never | never mind.... |
| ೯೮ | ೧೯ | etiquitte | etiquette |
| ೧೦೭ | ೧೦ | judgement | judgment |
| ೧೧೮ | ೨೦ | refrigirator | refrigerator |
| ೧೨೧ | ೨೩ | ಮಾಡ್ಡಾಕ್ಬಿಟ್ಟವೆ | ಮಾಡ್ಹಾಕ್ಬಿಟ್ಟವೆ |
| ೧೨೩ | ೨೦ | ಸರೋಜ: ಒ ! | ಸರೋಜ: ಓ ! |
| ೧೨೫ | ೧೧-೧೨ | Docto, rate | Doctorate |